ಸಂಪುಟ: ೦೮/ ಸಂಚಿಕೆ: ೨೨೯/ಬುಧವಾರ ದಿನಾಂಕ: ೦೪-೧೧-೨೦೨೬/ ಪುಟ: ೬/ ಬೆಲೆ ೧-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 08/ ISSUE : 229 / WEDNESDAY Date : 04-11-2026 / RNI No. KARKAN/2019/77640/ Postal Reg No. PMG/KA/NK/BM/135/2025-27 / POST AT Vantamury Colony Post Office / email : belaginasuryodaya@gmail.com / Page : 6 / Rs. 1.00

ನೇಪಾಳದಲ್ಲಿ ಲ್ಯಾಂಡಿಂಗ್ ವೇಳೆ 2 ಹೆಲಿಕಾಪ್ಟರ್‌ಗಳ ನಡುವೆ ಡಿಕ್ಕಿ: ಓರ್ವ ಸಾವು

ಕಠ್ಮಂಡು(ನೇಪಾಳ): ಇಲ್ಲಿನ ಸೋಲುಖುಂಬು ಜಿಲ್ಲೆಯಲ್ಲಿ ಮಂಗಳವಾರ ಎರಡು ಹೆಲಿಕಾಪ್ಟರ್‌ಗಳು ಇಳಿಯುತ್ತಿದ್ದಾಗ ಡಿಕ್ಕಿ ಹೊಡೆದು 47 ವರ್ಷದ ಭಾರತೀಯ ಪ್ರಜೆಯೊಬ್ಬರು ಸಾವನ್ನಪ್ಪಿದ್ದು, ಮತ್ತೊಬ್ಬ ಪ್ರಯಾಣಿಕ ಗಾಯಗೊಂಡಿದ್ದಾರೆ. ನೇಪಾಳ ಪೊಲೀಸರು ನೀಡಿದ ಮಾಹಿತಿ ಪ್ರಕಾರ, ಖುಂಬು ಪಸಾಂಗ್ ಲಾಮು ಗ್ರಾಮೀಣ ಪುರಸಭೆಯ ವಾರ್ಡ್ 4 ರ ಫೆರಿಚೆ ಎಂಬಲ್ಲಿ ಹೆಲಿಕಾಪ್ಟರ್‌ಗಳು ಇಳಿಯುವಾಗ ಪರಸ್ಪರ ಡಿಕ್ಕಿ ಹೊಡೆದುಕೊಂಡಿವೆ. ಫಿಶ್‌ಟೇಲ್ ಏರ್ ಮತ್ತು ಡೈನಾಸ್ಟಿ ಏರ್ ಸಂಸ್ಥೆಗೆ ಸೇರಿದ ಹೆಲಿಕಾಪ್ಟರ್‌ಗಳು ಬೆಳಿಗ್ಗೆ 8.11 ರ ಸುಮಾರಿಗೆ ಅಪಘಾತಕ್ಕೀಡಾಗಿವೆ.

ಅಪಘಾತದಲ್ಲಿ ಮೃತಪಟ್ಟ ಭಾರತೀಯರನ್ನು ವಸಂತ್ ಕುಮಾರ್ ಬಲರಾಮರಾಮಡು ಎಂದು ಗುರುತಿಸಲಾಗಿದೆ.

ಅವರು ಫಿಶ್‌ಟೇಲ್ ಏರ್ ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸುತ್ತಿದ್ದರು. ಅದೇ ಹೆಲಿಕಾಪ್ಟರ್‌ನಲ್ಲಿದ್ದ ನ್ಯೂಜಿಲೆಂಡ್‌ನ 49 ವರ್ಷದ ಭಾರತೀಯ ಮೂಲದ ಶೈಲೇಶ್ ಕೃಷ್ಣ ಪಟೇಲ್ ಗಾಯಗೊಂಡಿದ್ದಾರೆ. ಅವರನ್ನು ಮತ್ತೊಂದು ಹೆಲಿಕಾಪ್ಟರ್ ಮೂಲಕ ಸಾಗಿಸಿ ಕಠ್ಮಂಡುವಿನ ಮೆಡಿಸಿಟಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿ ಮೌಸಮ್ ತಮಂಗ್ ತಿಳಿಸಿದ್ದಾರೆ.

ಸಚಿವ ಸತೀಶ ಜಾರಕಿಹೊಳಿ ಸಭೆಯಲ್ಲಿ ಮೂಡದ ಒಮ್ಮತ

ಮತ್ತೆ ಸಭೆ ಮುಂದೂಡಿಕೆ: ನಿರ್ಧಾರ ಪ್ರಕಟಿಸಲು ರೈತರ ಪಟ್ಟು



ಬೆಳಗಾವಿ: ಕಬ್ಬಿಗೆ ಸೂಕ್ತ ಬೆಲೆ ನಿಗದಿ ಪಡಿಸುವಂತೆ ಜಿಲ್ಲೆಯಲ್ಲಿ ನಡೆಯುತ್ತಿರುವ ಹೋರಾಟಕ್ಕೆ ಮಣಿದ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು ಮಂಗಳವಾರ ಕಬ್ಬು ಬೆಳೆಗಾರರ ಸಭೆ ನಡೆಸಿದರು. ಆದರೆ, ಈ ಸಭೆಯಲ್ಲಿ ಯಾವುದೇ ಒಮ್ಮತ ಮೂಡದ ಹಿನ್ನೆಲೆಯಲ್ಲಿ ಸಭೆಯನ್ನು ಅವರು ಮುಂದೂಡಿದರು.

ಮಧ್ಯಾಹ್ನ 3 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮೊದಲು ಸಭೆ ನಿಗದಿ ಆಗಿತ್ತು. ಆದರೆ, ಸಭೆಗೆ ಕೆಲವೇ ರೈತ ಮುಖಂಡರನ್ನು ಆಹ್ವಾನಿಸಿದ್ದಾರೆ ಎಂದು ಆರೋಪಿಸಿ ಗದ್ದಲ ಗಲಾಟೆ ಶುರುವಾಯಿತು. ಇದರಿಂದ ಸಭೆ ನಾಲ್ಕು ಗಂಟೆ ತಡವಾಗಿ ಜಿ.ಪಂ. ಸಭಾಂಗಣದಲ್ಲಿ ಆರಂಭವಾಯಿತು.

ಸಭೆ ಆರಂಭವಾಗುತ್ತಿದ್ದಂತೆ ಕಾರ್ಖಾನೆಗಳ ಪ್ರತಿನಿಧಿಗಳನ್ನೂ ಕರೆಸಬೇಕು ಎಂದು ರೈತರು ಪಟ್ಟು ಹಿಡಿದರು. ಕಾರ್ಖಾನೆಗಳ ಜೊತೆಗೆ ನಾನೆ ಮಾತಾಡುತ್ತೇನೆ, ನೀವು ನಿಮ್ಮ ಅಭಿಪ್ರಾಯ ತಿಳಿಸಿ ಎಂದು ಸಚಿವ ಜಾರಕಿಹೊಳಿ ಹೇಳಿದರು.

ಬಳಿಕ ರೈತ ಮುಖಂಡರು ಒಕ್ಕೊರಲಿನಿಂದ ಕಬ್ಬಿಗೆ 4,500 ದರ ಘೋಷಿಸಬೇಕು, ರಾಜ್ಯ ಸರ್ಕಾರ 1,000 ಪ್ರೋತ್ಸಾಹ ಧನ ಕೊಡಬೇಕು, ಕೇಂದ್ರ ಸರ್ಕಾರ ಸಕ್ಕರೆ ಎಂಎಸ್‌ಪಿ ದರವನ್ನು 60ಕ್ಕೆ ಏರಿಸಬೇಕು, ಎಥೆನಾಲ್ ಪೂರ್ಣ ಖರೀದಿ ಮಾಡಬೇಕು ಎಂದು ಪಟ್ಟು ಹಿಡಿದರು.

ಈಗಾಗಲೇ ಕಬ್ಬು ಒಣಗುತ್ತಿದೆ. ಶೇ.25ರಷ್ಟು ಇಳುವರಿ ಕುಸಿದಿದೆ. ಕೂಡಲೇ ದರ ಘೋಷಣೆ ಮಾಡಿ ಕಾರ್ಖಾನೆ ಆರಂಭಿಸಿ, ರೈತರನ್ನು ಬದುಕಿಸಬೇಕು ಎಂದು ಮುಖಂಡರು ಒತ್ತಾಯಿಸಿದರು.

ಅಪಾರ ಸಂಖ್ಯೆಯಲ್ಲಿ ಸಭೆಯಲ್ಲಿ ಸೇರಿದ್ದ ರೈತರು, ಜಿಲ್ಲಾ ಉಸ್ತುವಾರಿ ಸಚಿವರು ಸ್ಪಷ್ಟ, ದಿಟ್ಟ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಒಂದು ವೇಳೆ ಯಾವುದೇ ನಿರ್ಧಾರ ಕೈಗೊಳ್ಳಲು ಆಗದಿದ್ದರೆ, ಬುಧವಾರ ಜೈಲ್ ಭರೋ ನಡೆಯುತ್ತದೆ. ನಾವು ಲಕ್ಷಾಂತರ ಸಂಖ್ಯೆಯಲ್ಲಿ ಸ್ವಯಂ ಪ್ರೇರಣೆಯಿಂದ ನಾವು ಬಂಧನಕ್ಕೆ ಒಳಗಾಗುತ್ತೇವೆ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಚೂನಪ್ಪ ಪೂಜೇರಿ, ಗೌರವಾಧ್ಯಕ್ಷ ಶಶಿಕಾಂತ ಪಡಸಲಗಿ ಹೇಳಿದರು.

ಕೊನೆಗೆ ಎಲ್ಲರನ್ನು ಸಮಾಧಾನ ಪಡಿಸಲು ಸಚಿವ ಸತೀಶ ಜಾರಕಿಹೊಳಿ ಯತ್ನಿಸಿದರು. ಇದಕ್ಕೆ ಒಪ್ಪದ ರೈತರು, ಇವತ್ತೆ, ಇಲ್ಲೆ ನಿರ್ಧಾರ ಪ್ರಕಟಿಸುವಂತೆ ಹಠ ಹಿಡಿದರು.

ಹಾಗಾದರೆ, 14 ರೈತ ಮುಖಂಡರು ಮಾತ್ರ ಸಭೆ ಬನ್ನಿ, ಅಲ್ಲಿ ಕಾರ್ಖಾನೆ ಪ್ರತಿನಿಧಿಗಳನ್ನು ಕರೆಸುತ್ತೇನೆ. ಅಲ್ಲಿ ನಿರ್ಧಾರ ಮಾಡೋಣ ಅಂತಾ ಹೇಳಿ ಸಭೆಯಿಂದ ಹೊರ ನಡೆದರು. ಇದಕ್ಕೆ ಒಪ್ಪದ ರೈತ ಮುಖಂಡರು ದಿಕ್ಕಾರ ಕೂಗಲು ಶುರು ಮಾಡಿದರು. ಇಷ್ಟೆಲ್ಲಾ ಗೊಂದಲದ ನಡುವೆ ಜಿ.ಪಂ. ಸಭಾಂಗಣದಿಂದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣಕ್ಕೆ ಸ್ಥಳಾಂತರವಾಯಿತು.

ಜಿ.ಪಂ. ಸಿಇಒ ರಾಹುಲ್ ಶಿಂಧೆ, ವಿಧಾನಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಸಭೆಯಲ್ಲಿದ್ದರು.

ಸ್ಟಿಂಗ್ ಆಪರೇಷನ್ ಪ್ರಕರಣ

ಸಂತ್ರಸ್ತೆ ಕಳುಹಿಸಿದ್ದ ಇ-ಮೇಲ್ ಎಲ್ಲಿ ಹೋಯಿತು: ಹೆಚ್‌ಡಿಕೆ

ಬೆಂಗಳೂರು: ಸ್ಟಿಂಗ್ ಪ್ರಕರಣ ಸಂಬಂಧ ಸಂತ್ರಸ್ತೆಯೂ ರಾಜ್ಯ ಮಕ್ಕಳ ಆಯೋಗಗಕ್ಕೆ ಕಳುಹಿಸಿದ್ದ ಇ-ಮೇಲ್ ಎಲ್ಲಿ ಹೋಯಿತು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ಪ್ರಶ್ನೆ ಮಾಡಿದ್ದಾರೆ.



ಮಂಗಳವಾರ ನಗರದ ಜೆಡಿಎಸ್ ಪಕ್ಷದ ಕೇಂದ್ರ ಕಚೇರಿ ಜೆಪಿ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಈ ಪ್ರಕರಣದ ಸಂತ್ರಸ್ತೆ ಕೃಪಾ ಆಳ್ವ ಅಧ್ಯಕ್ಷರಾಗಿದ್ದಾಗ ಮಕ್ಕಳ ಹಕ್ಕು ಆಯೋಗಕ್ಕೆ ಕಳಿಸಿರುವ ಇ-ಮೇಲ್ ಎಲ್ಲಿ ಹೋಯಿತು ಅದನ್ನು ಇಟ್ಟುಕೊಂಡಿದೀರಾ ಅಥವಾ ಅಳಿಸಿ ಹಾಕಿದ್ದೀರಾ ಇ-ಮೇಲ್ ಗೂ ತನಿಖೆಗೆ ಏನು ಸಂಬಂಧ ಎಂದು ಅವರು ಕೇಳುತ್ತಿದ್ದಾರೆ. ಆಗ ಪ್ರಿಯಾಂಕ್ ಖರ್ಗೆ ಖಾತೆ ಬೇರೆ ಇತ್ತು. ಈಗ ಅವರಿಗೆ ಗೃಹ ಖಾತೆ ಕೊಡಲಾಗಿದೆ. ಆಗ ಬಂದಿದ್ದ ಇ-ಮೇಲ್ ನೋಡಿದ್ದವರನ್ನೇ ತನಿಖೆ ಮಾಡಲು ಹೇಳಿ. ಅದು ನನ್ನ ಯಾವುದು ವ್ಯಾಪ್ತಿಗೆ ಬರಲ್ಲ ಎಂದರೆ ಏನರ್ಥ ಯಾಕೆ ಬರಲ್ಲ ಮತ್ತೆ ಇದು ಯಾರಿಗೆ ಬರುತ್ತೆ ಎಂದು ಕೇಳಿದರು.

ಈಗಾಗಲೇ ಹಲವು ಬಾರಿ ಸ್ಟಿಂಗ್ ಸೂತ್ರಧಾರರನ್ನು ಬಂಧಿಸಬೇಕು ಎಂದು ಸಿದ್ದರಾಮಯ್ಯ ಒತ್ತಾಯ ಮಾಡುತ್ತಲೇ ಇದ್ದಾರೆ. ಈ ಬಗ್ಗೆ ಅವರು ಹೈಕಮಾಂಡ್ ಮೇಲೆಯೂ ಒತ್ತಡ ಹೇರಿದ್ದಾರೆ. ಸಿದ್ದರಾಮಯ್ಯ ಅವರು ಹೇಳುತ್ತಿರುವುದನ್ನೆ ನಾನು ಕೂಡ ಹೇಳುತ್ತಿದ್ದೇನೆ. ಆದರೆ ಮುಖ್ಯಮಂತ್ರಿ ಮತ್ತು ಗೃಹ ಸಚಿವರ ಒತ್ತಡದಿಂದ ತನಿಖೆಯ ದಾರಿ ತಪ್ಪುತ್ತಿದೆ. ಪೊಲೀಸರು ಅವರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ ಎಂದು ಅವರು ಟೀಕಿಸಿದರು.

ತನಿಖೆಯ ದಾರಿ ತಪ್ಪುವುದು ಬೇಡ. ಅದನ್ನು ಸರಿ ಮಾಡಿಕೊಳ್ಳಿ ಎಂದಷ್ಟೇ ಹೇಳುತ್ತಿದ್ದೇನೆ. ಸಿದ್ದರಾಮಯ್ಯ ಅವರ ವಿರುದ್ಧ ನಾನು ಹೋರಾಟ ಮಾಡಿಕೊಂಡು ಬಂದವನು. ಇಲ್ಲಿ ಸಿದ್ದರಾಮಯ್ಯನವರ ಮೇಲಿನ ಅನುಕಂಪಕ್ಕೆ ನಾನು ಮಾತಾಡಿಲ್ಲ. ರಾಜ್ಯದ ಜನತೆಗೆ ಹೇಳಲು ಬಯಸುತ್ತೇನೆ. ಇವತ್ತು ನಮ್ಮ ಸಮಾಜ ವ್ಯಕ್ತಿ ಸಿಎಂ ಆಗಿದ್ದಾರೆ, ಅವರ ಮೇಲಿನ ಅಸೂಯೆಗೆ ಹೊಟ್ಟೆ ಕಿವುಚಿಕೊಂಡು ಇದನ್ನೆಲ್ಲ ಹೇಳುತ್ತಿಲ್ಲ ನಾನು. ಎಂತಹ ದಾರಿದ್ರ್ಯ ರಾಜ್ಯಕ್ಕೆ ಬಂತು ಎಂಬ ನೋವಿನಿಂದ ಹೇಳಿದ್ದೇನೆ. ಇದೇನಾದರೂ ಮುಂದುವರೆದರೆ ಈ ರಾಜ್ಯ ಏನಾಗುತ್ತದೆ ಅರ್ಥ ಮಾಡಿಕೊಳ್ಳಿ ಎಂದು ಹೇಳುತ್ತಿದ್ದೇನೆ ಅಷ್ಟೇ ಕುಮಾರಸ್ವಾಮಿ ಹೇಳಿದರು.

ಕಾಂಗ್ರೆಸ್ ಪಕ್ಷದ ಕೆಲವರು ಇವತ್ತು ಸಿದ್ದರಾಮಯ್ಯ ಅವರನ್ನು ಮುಗಿಸಿ, ಈಗ ಹೊಸ ರಾಜಕೀಯ ಮಾಡಲು ಹೊರಟಿದ್ದಾರೆ. ಅದರ ಫಲವಾಗಿ 2028ಕ್ಕೆ ಜನ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದ ಅವರು, ಸಿದ್ದರಾಮಯ್ಯ ಅವರು ಹೈಕಮಾಡ್ ಹಾಗೂ ಪಕ್ಷದ ವರಿಷ್ಠರಿಗೆ ಗಟ್ಟಿಯಾಗಿಯೇ ಎಚ್ಚರಿಕೆ ನೀಡಿದ್ದಾರೆ ಎಂಬ ಮಾಹಿತಿ ಬಂದಿದೆ. 2028ಕ್ಕೆ ನಾನು ಇರಬೇಕೋ ಬೇಡವೋ ನೀವೇ ಹೇಳಿ ಎಂದು ಅವರು ರಾಹುಲ್ ಗಾಂಧಿ ಅವರನ್ನು ಕೇಳಿದ್ದಾರೆಂದು ವರದಿಯಾಗಿದೆ ಎಂದು ಅವರು ತಿಳಿಸಿದರು.


ಸಿಸಿಬಿ ವಿಚಾರಣೆಗೆ ಹೆಚ್‌ಡಿಕೆ ಪಿಆರ್‌ಒ ಪ್ರಜ್ವಲ್ ಪ್ರಸಾದ್ ಹಾಜರು

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಹನಿಟ್ರ್ಯಾಪ್ ಹಾಗೂ ಸ್ಟಿಂಗ್ ಕಾರ್ಯಾಚರಣೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಪಿಆರ್‌ಒ ಪ್ರಜ್ವಲ್ ಪ್ರಸಾದ್ ಇಂದು ಸಿಸಿಬಿ ಸೈಬರ್ ಕ್ರೈಮ್ ಪೊಲೀಸ್ ಠಾಣೆಗೆ ವಿಚಾರಣೆಗಾಗಿ ಹಾಜರಾಗಿದ್ದಾರೆ.ದೆಹಲಿಯ ಕುಮಾರಸ್ವಾಮಿ ಅವರ ನಿವಾಸದಲ್ಲಿ ಪ್ರಕರಣದ ಪ್ರಮುಖ ಆರೋಪಿ ರಿತೇಶ್ ಪಾಂಡೆಗೆ ಮೊಬೈಲ್ ಹಸ್ತಾಂತರಿಸಿದ ಆರೋಪ ಪ್ರಜ್ವಲ್ ವಿರುದ್ಧ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಸೈಬರ್ ಕ್ರೈಮ್ ಪೊಲೀಸರು ಅವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿಗೊಳಿಸಿದ್ದರು.

ಸಶಸ್ತ್ರ ಪಡೆಗಳ ಆಧುನೀಕರಣ ಕುರಿತು ಸಭೆ

2029ರ ವೇಳೆಗೆ 3 ಲಕ್ಷ ಕೋಟಿ ರೂ. ರಕ್ಷಣಾ ಉತ್ಪಾದನೆಯ ಗುರಿ

ಹೊಸದಿಲ್ಲಿ: ಮಂಗಳವಾರ ರಾಜಸ್ಥಾನದ ಜೈಸಲ್ಮೇರ್‌ನಲ್ಲಿ 'ಭಾರತೀಯ ಸಶಸ್ತ್ರ ಪಡೆಗಳ ಆಧುನೀಕರಣ' ಕುರಿತು ರಕ್ಷಣಾ ಸಚಿವಾಲಯದ ಸಲಹಾ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿದ್ದ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಪ್ರಸ್ತುತ ಮತ್ತು ಉದಯೋನ್ಮುಖ ಭದ್ರತಾ ಸವಾಲುಗಳನ್ನು ಎದುರಿಸಲು ಸಮರ್ಥವಾಗಿರುವ, ತಾಂತ್ರಿಕವಾಗಿ ಸಶಕ್ತವಾದ ಮಿಲಿಟರಿಯನ್ನು ನಿರ್ಮಿಸಲು ಸರಕಾರವು ಬದ್ಧವಾಗಿದೆ ಎಂದು ಒತ್ತಿ ಹೇಳಿದರು.



ಹಿರಿಯ ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳು ಭಾಗವಹಿಸಿದ್ದ ಸಭೆಯು ಬದಲಾಗುತ್ತಿರುವ ಯುದ್ಧದ ಸ್ವರೂಪಗಳು, ಉದಯೋನ್ಮುಖ ಭದ್ರತಾ ಬೆದರಿಕೆಗಳು, ತಾಂತ್ರಿಕ ಪ್ರಗತಿಗಳು ಮತ್ತು ಸಶಸ್ತ್ರ ಪಡೆಗಳ ಕಾರ್ಯಾಚರಣೆಯ ಸನ್ನದ್ಧತೆಯನ್ನು ಬಲಪಡಿಸುವ ಅಗತ್ಯದ ಕುರಿತು ಚರ್ಚಿಸಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಂಗ್, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರವು ಆಧುನಿಕ ಯುದ್ಧದ ಬದಲಾಗುತ್ತಿರುವ ಬೇಡಿಕೆಗಳಿಗೆ ಸಶಸ್ತ್ರ ಪಡೆಗಳನ್ನು ಸಜ್ಜುಗೊಳಿಸಲು ಬಜೆಟ್ ಮತ್ತು ಬಂಡವಾಳ ಸ್ವಾಧೀನ, ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆ, ಹಾಗೂ ತಂತ್ರಜ್ಞಾನ ಮತ್ತು ಮಾನವ ಬಂಡವಾಳ; ಹೀಗೆ ಮೂರು ಪ್ರಮುಖ ಕ್ಷೇತ್ರಗಳ ಮೇಲೆ ಗಮನ ಹರಿಸುತ್ತಿದೆ ಎಂದು ತಿಳಿಸಿದರು.

ಮಿಲಿಟರಿ ಆಧುನೀಕರಣಕ್ಕೆ ಹೆಚ್ಚುತ್ತಿರುವ ಹಣಕಾಸಿನ ಬೆಂಬಲವನ್ನು ಎತ್ತಿ ತೋರಿಸಿದ ಸಿಂಗ್, 2026-27ರ ಹಣಕಾಸು ವರ್ಷದ ರಕ್ಷಣಾ ಬಜೆಟ್ ಅನ್ನು ದಾಖಲೆಯ 7.85 ಲಕ್ಷ ಕೋಟಿ ರೂ.ಗೆ ಹೆಚ್ಚಿಸಲಾಗಿದ್ದು, ಇದರಲ್ಲಿ ಆಧುನೀಕರಣ ಮತ್ತು ಬಂಡವಾಳ ಸಂಗ್ರಹಣೆಗಾಗಿ 2.19 ಲಕ್ಷ ಕೋಟಿ ರೂ.ಬಂಡವಾಳ ವೆಚ್ಚ ಸೇರಿದೆ ಎಂದು ಹೇಳಿದರು. ರಕ್ಷಣಾ ಉತ್ಪಾದನೆಯಲ್ಲಿ ಭಾರತದ ಹೆಚ್ಚುತ್ತಿರುವ ಸ್ವಾವಲಂಬನೆಯ ಕುರಿತಂತೆ ಸಿಂಗ್, 2014-15ರ ಹಣಕಾಸು ವರ್ಷದಲ್ಲಿ 46,429 ಕೋಟಿ ರೂ.ಗಳಷ್ಟಿದ್ದ ದೇಶೀಯ ರಕ್ಷಣಾ ಉತ್ಪಾದನೆಯು 2025-26ರ ಹಣಕಾಸು ವರ್ಷದಲ್ಲಿ ದಾಖಲೆಯ 1.78 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. 2014ರಲ್ಲಿ 2,000 ಕೋಟಿ ರೂ.ಗಿಂತ ಕಡಿಮೆಯಿದ್ದ ರಕ್ಷಣಾ ರಫ್ತು ಸಹ ಸುಮಾರು 40,000 ಕೋಟಿ ರೂ.ಗೆ ಬೆಳೆದಿದೆ ಎಂದು ಹೇಳಿದರು. ನಾವು 2029ರ ವೇಳೆಗೆ ಮೂರು ಲಕ್ಷ ಕೋಟಿ ರೂ.ಮೌಲ್ಯದ ರಕ್ಷಣಾ ಉತ್ಪಾದನೆ ಮತ್ತು 50,000 ಕೋಟಿ ರೂ.ಮೌಲ್ಯದ ರಕ್ಷಣಾ ರಫ್ತು ಸಾಧಿಸುವ ಗುರಿಯನ್ನು ಹೊಂದಿದ್ದೇವೆ' ಎಂದರು.

ರಾಜ್ಯದಲ್ಲಿ ಭೀಕರ ಬರಗಾಲ

22,400.58 ಕೋಟಿ ಪರಿಹಾರ ಕೋರಿ ಕೇಂದ್ರಕ್ಕೆ ಡಾ.ಜಿ. ಪರಮೇಶ್ವರ್ ಪತ್ರ

ಬೆಂಗಳೂರು: ಕರ್ನಾಟಕದಲ್ಲಿ ಉಂಟಾಗಿರುವ ಭೀಕರ ಬರದಿಂದಾಗಿ ಸಂಕಷ್ಟದಲ್ಲಿರುವ ರೈತರಿಗೆ ತುರ್ತು ಆರ್ಥಿಕ ನೆರವು ಒದಗಿಸುವಂತೆ ಕೋರಿ ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಪ್ರತ್ಯೇಕ ಪತ್ರ ಬರೆದಿದ್ದಾರೆ.




ಈ ಪತ್ರವನ್ನು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅವರು ಹಂಚಿಕೊಂಡಿದ್ದು, ರಾಜ್ಯದ 226 ತಾಲ್ಲೂಕುಗಳು ಬರ ಪೀಡಿತವಾಗಿದ್ದು, 57.93 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಇದರಿಂದ 62,481.88 ಕೋಟಿ ಅಂದಾಜು ಆರ್ಥಿಕ ನಷ್ಟ ಉಂಟಾಗಿದ್ದು, ನಮ್ಮ ರೈತರು ಹಿಂದೆಂದೂ ಕಾಣದಂತಹ ಸಂಕಷ್ಟವನ್ನು ಎದುರಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ಪರಿಹಾರ ಮಾನದಂಡಗಳನ್ನು ಪರಿಷ್ಕರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕದ ಒಟ್ಟು ಬರ ಪರಿಹಾರದ ಬೇಡಿಕೆಯು 22,400.58 ಕೋಟಿಗೆ ಹೆಚ್ಚಳವಾಗಿದೆ. ಆದರೆ ಪರಿಷ್ಕೃತ ಪರಿಹಾರ ಮಾನದಂಡಗಳು ರೈತರ ನೈಜ ಕೃಷಿ ವೆಚ್ಚ ಹಾಗೂ ಅವರು ಅನುಭವಿಸಿರುವ ನಷ್ಟಕ್ಕೆ ಹೋಲಿಸಿದರೆ ಸಾಕಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಪರಿಹಾರ ಮಾನದಂಡಗಳನ್ನು ಮರುಪರಿಶೀಲಿಸಬೇಕು, ಹಳೆಯ ಕೃಷಿ ಗಣತಿಯ ಬದಲು ಕರ್ನಾಟಕದ ಫ್ರುಟ್ಸ್ ದತ್ತಾಂಶವನ್ನು ಬಳಸಬೇಕು ಹಾಗೂ ರಾಜ್ಯಕ್ಕೆ ಅಗತ್ಯವಿರುವ ಪರಿಹಾರದ ಮೊತ್ತವನ್ನು ತ್ವರಿತವಾಗಿ ಅನುಮೋದಿಸಿ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರಧಾನಿ ಭೇಟಿಗೆ ಸಮಯ ಕೋರಿದ ಪರಮೇಶ್ವರ್: ರಾಜ್ಯದ ಬರ ಪರಿಸ್ಥಿತಿಯ ಗಂಭೀರತೆಯನ್ನು ಖುದ್ದಾಗಿ ವಿವರಿಸಲು ಹಾಗೂ ಪರಿಹಾರದ ಬೇಡಿಕೆಯನ್ನು ಸಲ್ಲಿಸಲು ಪ್ರಧಾನಿ, ಗೃಹ ಸಚಿವರು ಮತ್ತು ಕೃಷಿ ಸಚಿವರ ಭೇಟಿಗೆ ಸಮಯ ಕೋರಿದ್ದಾರೆ.

ರಾಜ್ಯದ ರೈತರಿಗೆ ಕೇವಲ ಅಲ್ಪ ಪ್ರಮಾಣದ ಪರಿಹಾರದ ಹೆಚ್ಚಳ ಸಾಕಾಗುವುದಿಲ್ಲ. ಬೆಳೆ ನಷ್ಟದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರು ಮತ್ತೆ ಆರ್ಥಿಕವಾಗಿ ಚೇತರಿಸಿಕೊಂಡು, ತಮ್ಮ ಜೀವನೋಪಾಯವನ್ನು ಕಟ್ಟಿಕೊಳ್ಳಲು ಅಗತ್ಯವಾದ ನೆರವು ಸಕಾಲದಲ್ಲಿ ದೊರೆಯಬೇಕು. ರೈತರ ಹಿತಾಸಕ್ತಿಯ ವಿಚಾರದಲ್ಲಿ ರಾಜಕೀಯ ಭಿನ್ನಾಭಿಪ್ರಾಯಗಳಿಗೆ ಅವಕಾಶವಿಲ್ಲ. ಸಂಕಷ್ಟದಲ್ಲಿರುವ ರೈತರ ಬೆಂಬಲಕ್ಕೆ ನಿಲ್ಲುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಜವಾಬ್ದಾರಿಯಾಗಿದೆ ಎಂದು ಪರಮೇಶ್ವರ್ ಮನವರಿಕೆ ಮಾಡಿಕೊಟ್ಟಿದ್ದಾರೆ.

ರೈತರ ಕರೆಗೆ ಉತ್ತಮ ಸ್ಪಂದನೆ ಬೈಲಹೊಂಗಲ ಬಂದ್ ಯಶಸ್ವಿ



ಬೆಳಗಾವಿ: ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸ್ವಾಭಿಮಾನಿ ಜೈ ಜವಾನ್ ಜೈ ಕಿಸಾನ್ ರೈತ ಸಂಘದ ನೇತೃತ್ವದಲ್ಲಿ ಮಂಗಳವಾರ ಕರೆ ನೀಡಲಾಗಿದ್ದ ಜಿಲ್ಲೆಯ ಬೈಲಹೊಂಗಲ ನಗರ ಬಂದ್‌ಗೆ ಉತ್ತಮ ಸ್ಪಂದನ ವ್ಯಕ್ತವಾಗಿದೆ.


ರೈತರ ಹೋರಾಟಕ್ಕೆ ಕನ್ನಡಪರ ಸಂಘಟನೆಗಳು, ರೈತಪರ ಸಂಘಟನೆಗಳು, ವಕೀಲರು, ದಲಿತ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು ಹಾಗೂ ಮಾಜಿ ಸೈನಿಕರ ಸಂಘಟನೆ ಸೇರಿದಂತೆ ವಿವಿಧ ಸಂಘಟನೆಗಳು ಬೆಂಬಲ ಸೂಚಿಸಿ ಹೋರಾಟಕ್ಕೆ ಬಲ ತುಂಬಿದವು.

ಬಂದ್‌ಗೆ ನಗರದ ವ್ಯಾಪಾರಸ್ಥರಿಂದಲೂ ಉತ್ತಮ ಬೆಂಬಲ ವ್ಯಕ್ತವಾಗಿದ್ದು, ಅಂಗಡಿ ಮುಂಗಟ್ಟುಗಳನ್ನು ಸ್ವಯಂಪ್ರೇರಿತವಾಗಿ ಬಂದ್ ಮಾಡುವ ಮೂಲಕ ರೈತರ ನ್ಯಾಯಯುತ ಬೇಡಿಕೆಗಳಿಗೆ ವ್ಯಾಪಾರಸ್ಥರು ತಮ್ಮ ಒಗ್ಗಟ್ಟು ಪ್ರದರ್ಶಿಸಿದರು. ಬಂದ್ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಗಳ ಸಂಚಾರ ಸೇರಿದಂತೆ ನಗರದಾದ್ಯಂತ ವಾಹನ ಸಂಚಾರ ಸ್ಥಗಿತಗೊಂಡಿತ್ತು. ವ್ಯಾಪಾರ ವಹಿವಾಟು ಹಾಗೂ ಸಾರಿಗೆ ವ್ಯವಸ್ಥೆ ಸ್ಥಗಿತಗೊಂಡಿದ್ದರಿಂದ ಇಡೀ ನಗರ ಸ್ತಬ್ಧವಾಗಿತ್ತು.

ರೈತರ ಬೇಡಿಕೆಗಳಿಗೆ ನ್ಯಾಯ ದೊರೆಯುವವರೆಗೂ ಹೋರಾಟ ಮುಂದುವರಿಯಲಿದೆ ಎಂಬ ಸಂದೇಶದೊಂದಿಗೆ ಬೈಲಹೊಂಗಲ ಬಂದ್ ಯಶಸ್ವಿಯಾಗಿ ಸಂಪನ್ನಗೊಂಡಿತು.

ಮುರಸು ಚಂಡಮಾರುತದ ಅಬ್ಬರ

ಆಂಧ್ರ ಪ್ರದೇಶದ ಹಲವೆಡೆ ಪ್ರವಾಹ



ಅಮರಾವತಿ: ಆಂಧ್ರ ಪ್ರದೇಶದಲ್ಲಿ ಮುರಸು ಚಂಡಮಾರುತದ ಆರ್ಭಟ ತೀವ್ರವಾಗಿದ್ದು, ರಾಜ್ಯದ ಹಲವು ಭಾಗಗಳಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವರದಿಯಾಗಿದೆ. ವಿಶಾಖಪಟ್ಟಣಂ ಜಿಲ್ಲೆಯಾದ್ಯಂತ ವ್ಯಾಪಕ ಪ್ರಮಾಣದ ಹಾನಿಯುಂಟಾಗಿದ್ದು, ತಗ್ಗುಪ್ರದೇಶಗಳು ಜಲಾವೃತಗೊಂಡಿರುವುದರಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ.

ಪ್ರತಿಕೂಲ ಹವಾಮಾನದಿಂದಾಗಿ ವಾಹನಗಳು ರಸ್ತೆಗಳಲ್ಲೇ ನಿಂತಿರುವ, ಮಗುಚಿ ಬಿದ್ದಿರುವ ದೃಶ್ಯಗಳು ಚಂಡಮಾರುತ ಪೀಡಿತ ಪ್ರದೇಶಗಳಲ್ಲಿ ಕಂಡು ಬಂದಿದೆ.

ಮುರಸು ಚಂಡಮಾರುತದಿಂದಾಗಿ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಮಂಗಳವಾರ ಆಂಧ್ರಪ್ರದೇಶದ ಪ್ರಕಾಶಂ ಜಿಲ್ಲೆಯ ತಗ್ಗುಪ್ರದೇಶಗಳು ಜಲಾವೃತಗೊಂಡಿವೆ. ಮುಂಜಾನೆ 3.30ರಿಂದ 5.30ರ ನಡುವೆ ಪ್ರಕಾಶಂ ಜಿಲ್ಲೆಯ ಒಂಗೋಲೆಗೆ ಸಮೀಪದ ನರಸಾಪುರ ಮತ್ತು ನೆಲ್ಲೂರು ನಡುವೆ ಇರುವ ದಕ್ಷಿಣ ಆಂಧ್ರ ಪ್ರದೇಶ ಕರಾವಳಿ ಪ್ರದೇಶದ ಮೂಲಕ ಮರಸು ಚಂಡಮಾರುತ ರಾಜ್ಯವನ್ನು ಪ್ರವೇಶಿಸಿದೆ. ಪ್ರಾರಂಭದಲ್ಲಿ ಪ್ರತಿ ಗಂಟೆಗೆ 100ರಿಂದ 110 ಕಿಮೀ ವೇಗ ಹೊಂದಿದ್ದ ಗಾಳಿ, ಬಳಿಕ ಪ್ರತಿ ಗಂಟೆಗೆ 120 ಕಿಮೀ ವೇಗ ಪಡೆದುಕೊಂಡಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಪಾಲಿಕೆ ಸ್ಥಾಯಿ ಸಮಿತಿ ಸಭೆಯಲ್ಲಿ ಅಧಿಕಾರಿಗಳಿಗೆ ಅಧ್ಯಕ್ಷ ರಮೇಶ ಮೈಲುಗೋಳ ಸೂಚನೆ

ಏಜೆಂಟರ ಹಾವಳಿ ತಡೆಗಟ್ಟಲು ಕ್ರಮ ಕೈಕೊಳ್ಳಿ



ಬೆಳಗಾವಿ: ಮಹಾನಗರ ಪಾಲಿಕೆಯ ವಲಯ ಕಚೇರಿಗಳಲ್ಲಿ ಏಜೆಂಟರ ಹಾವಳಿ ಹೆಚ್ಚಾಗಿದ್ದು, ಅದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಿ ಎಂದು ಮಹಾನಗರ ಪಾಲಿಕೆಯ ತೆರಿಗೆ ನಿರ್ಧರಣೆ ಹಣಕಾಸು ಹಾಗೂ ಅಪೀಲುಗಳು ಸ್ಥಾಯಿ ಸಮಿತಿ ಅಧ್ಯಕ್ಷ ರಮೇಶ ಮೈಲುಗೋಳ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ಮಹಾನಗರ ಪಾಲಿಕೆಯಲ್ಲಿ ನಡೆದ ಸ್ಥಾಯಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮಿತಿ ಸದಸ್ಯರು, ನಗರಸೇವಕರು ಹಾಗೂ ಸಾರ್ವಜನಿಕರ ದೂರುಗಳ ಹಿನ್ನೆಲೆಯಲ್ಲಿ ಈ ಕುರಿತು ಸೂಚನೆ ನೀಡಲಾಗುತ್ತಿದ್ದು, ಮಧ್ಯವರ್ತಿಗಳ ಸಹಾಯವಿಲ್ಲದೆ ಸರಿಯಾದ ದಾಖಲಾತಿಗಳೊಂದಿಗೆ ಕಚೇರಿಗೆ ಬರುವ ಸಾರ್ವಜನಿಕರ ಕಾರ್ಯಗಳನ್ನು ಶೀಘ್ರ ಮಾಡಿಕೊಡಿ ಎಂದು ಅಧಿಕಾರಿಗಳಿಗೆ ಹಾಗೂ ಸಂಬಂಧಿಸಿದ ಸಿಬ್ಬಂದಿಗಳಿಗೆ ಸೂಚಿಸಿದರು.

ಉಪ ಮಹಾಪೌರ ಹನುಮಂತ ಕೊಂಗಾಲಿ ಅವರು, ಅಶೋಕನಗರದ ಬ್ಯಾಡ್ಮಿಂಟನ್ ಕೋರ್ಟ್ ಕಟ್ಟಡದ ವಾರ್ಷಿಕ ನಿರ್ವಹಣೆ ಅವಧಿ ಮುಗಿದ ಹಿನ್ನೆಲೆಯಲ್ಲಿ ಬಾಕಿ ಮೊತ್ತವನ್ನು ಬಡ್ಡಿ ಸಹಿತ ಭರ್ತಿ ಮಾಡಿಕೊಳ್ಳುವುದು ಹಾಗೂ ಹೊಸ ಒಡಂಬಡಿಕೆ ಮಾಡಿಕೊಳ್ಳುವ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು ಚರ್ಚಿಸಿದರು. ಸಮಿತಿ ಸದಸ್ಯ ಬ್ರಹ್ಮಾನಂದ ಮಿರಜಕರ್ ಅವರು ಬಾಪಟಗಲ್ಲಿ ಕಾರ್ ಪಾರ್ಕಿಂಗ್ ಗುತ್ತಿಗೆ ಮುಗಿದ ನಂತರ ಕೈಗೊಂಡ ಕ್ರಮಗಳ ಕುರಿತು ಅಧಿಕಾರಿಗಳಿಂದ ಚರ್ಚೆ ನಡೆಸಿದರು ಅಧಿಕಾರಿಗಳು ನೀಡಿದ ಮಾಹಿತಿಯಿಂದ ಅವರು ತೃಪ್ತರಾಗದ್ದರಿಂದ, ಮಧ್ಯಪ್ರವೇಶಿಸಿದ ಆಡಳಿತ ಪಕ್ಷದ ನಾಯಕ ಸಂತೋಷ್ ಪೇಡ್ನೇಕರ ಅವರು, ಈ ಕುರಿತು ಸಮಗ್ರ ಮಾಹಿತಿ ಹಾಗೂ ಸಂಬಂಧಿಸಿದ ಸಿಬ್ಬಂದಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಿ ಮಾಹಿತಿ ನೀಡಬೇಕೆಂದು ಸೂಚಿಸಿದರು. ಆನ್‌ಲೈನ್ ಆಸ್ತಿ ತೆರಿಗೆ ತಂತ್ರಾಂಶ ಅಳವಡಿಸಿ ನಿರ್ವಹಿಸುವ ಸಾಫ್ಟ್ ವೇರ್ ಕಂಪನಿಯ ವಾರ್ಷಿಕ ನಿರ್ವಹಣಾ ಅವಧಿ ವಿಸ್ತರಿಸುವ ಕುರಿತು, ಇ ಆಸ್ತಿ ಕಡತಗಳು ಅನುಮೋದನೆ ಆಗದೆ ಇರುವ ಕುರಿತು, ಸಹ್ಯಾದ್ರಿ ನಗರದ ಸಾರ್ವಜನಿಕ ಉದ್ಯಾನವನಕ್ಕೆ ವೀರ ಸಾವರ್ಕರ್ ಉದ್ಯಾನವನ" ಎಂದು ಹೆಸರಿಡುವ ಕುರಿತು ಸಭೆಯಲ್ಲಿ ವಿವಿಧ ವಿಷಯಗಳು ಚರ್ಚಿಸಲ್ಪಟ್ಟವು. ಕೆಲ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಯಿತು. ಕೆಲ ಪ್ರಸ್ತಾವನೆಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

ಮೇಯರ್ ಪ್ರೀತಿ ಕಾಮಕರ್ ಅವರು, ಅಭಿವೃದ್ಧಿ ಕಾರ್ಯಗಳಿಗೆ ಅನುದಾನದ ಅಗತ್ಯ ಇರುವುದರಿಂದ ತೆರಿಗೆ ವಸೂಲಿಗೆ ಆದ್ಯತೆ ನೀಡಿ ಕಂದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು. ಸಮಿತಿ ಸದಸ್ಯರಾದ ಶಂಕರ ಪಾಟೀಲ, ರವಿರಾಜ್ ಸಂಬ್ರೇಕರ್, ದೀಪಾಲಿ ಟೋಪಗಿ, ಮೋದಿನಸಾಬ್ ಮತವಾಲೆ, ಬಸವರಾಜ ಮೋದಗೇಕರ್ ಹಾಗೂ ನಗರಸೇವಕರು, ಕಂದಾಯ ಶಾಖೆ ಉಪ ಆಯುಕ್ತ ಡಾ. ಸಿದ್ದು ಹುಲ್ಲೋಳಿ, ಆಡಳಿತ ಶಾಖೆ ಉಪ ಆಯುಕ್ತ, ಉದಯಕುಮಾರ ಬಿ.ಟಿ. ಪರಿಷತ್ ಕಾರ್ಯದರ್ಶಿ ರಮೇಶ ಬಡಿಗೇರ ಇತರೆ ಅಧಿಕಾರಿಗಳು ಸಿಬ್ಬಂದಿ ಉಪಸ್ಥಿತರಿದ್ದರು.

ನಾಳೆಯಿಂದ ಬಸ್ ದರ ಹೆಚ್ಚಳ

ಬೆಂಗಳೂರು: ಹಾಲು ಮತ್ತು ಮೊಸರಿನ ಬೆಲೆ ಏರಿಕೆ ಮಾಡಿದ ಕೆಲವೇ ದಿನಗಳಲ್ಲಿ, ರಾಜ್ಯ ಸರ್ಕಾರ ಇದೇ ನವೆಂಬರ್ 5ರಿಂದ ಸರ್ಕಾರಿ ಸಾರಿಗೆ ನಿಗಮಗಳ ಬಸ್ ಪ್ರಯಾಣ ದರವನ್ನು ಹೆಚ್ಚಿಸಲು ಮುಂದಾಗಿದೆ. ದರ ಪರಿಷ್ಕರಣೆ ಜಾರಿಯಾಗುವುದು ಖಚಿತ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

ಇತ್ತೀಚೆಗೆ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ದರ ಪರಿಷ್ಕರಣೆ ಕುರಿತು ಚರ್ಚಿಸಲಾಗಿದ್ದು, ಅಂತಿಮ ನಿರ್ಧಾರ ಕೈಗೊಳ್ಳುವ ಜವಾಬ್ದಾರಿಯನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಾರಿಗೆ ಇಲಾಖೆಗೆ ವಹಿಸಲಾಗಿದೆ ಎಂದು ಸುರೇಶ್ ಹೇಳಿದ್ದಾರೆ. ಪರಿಷ್ಕೃತ ದರ ರಚನೆಯನ್ನು ನಿರ್ಧರಿಸಲು ಇಂದು ಸಾರಿಗೆ ಇಲಾಖೆಯು ನಾಲ್ಕೂ ಸಾರಿಗೆ ನಿಗಮಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದೆ. ಮರುದಿನದಿಂದಲೇ ಹೊಸ ದರಗಳು ಜಾರಿಗೆ ಬರಲಿವೆ. ಹೆಚ್ಚುತ್ತಿರುವ ಕಾರ್ಯಾಚರಣೆಯ ವೆಚ್ಚ ಮತ್ತು ಸಾರಿಗೆ ವಲಯದ ಆರ್ಥಿಕ ಸಂಕಷ್ಟದಿಂದಾಗಿ ಬಸ್ ಪ್ರಯಾಣ ದರ ಏರಿಕೆ ಅನಿವಾರ್ಯವಾಗಿದೆ ಎಂದು ತಿಳಿಸಿದರು.



ಕೇಂದ್ರ ಸರ್ಕಾರ ಡೀಸೆಲ್ ಬೆಲೆಯನ್ನು ನಾಲ್ಕು ಬಾರಿ ಹೆಚ್ಚಿಸಿರುವುದರಿಂದ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಮೇಲೆ ವಾರ್ಷಿಕ ಹೆಚ್ಚುವರಿಯಾಗಿ 2,000 ಕೋಟಿ ರೂಪಾಯಿ ಹೊರೆ ಬಿದ್ದಿದೆ. ಇದರಿಂದ ನಿಗಮಗಳ ಒಟ್ಟು ನಷ್ಟ 9,000 ಕೋಟಿ ರೂಪಾಯಿಗೆ ತಲುಪಿದೆ ಎಂದು ಸಚಿವರು ಹೇಳಿದರು. ದರ ಏರಿಕೆ ಮಾಡದೆ ನಮಗೆ ಬೇರೆ ದಾರಿಯಿಲ್ಲ. ಸಾರಿಗೆ ನಿಗಮಗಳನ್ನು ಆರ್ಥಿಕವಾಗಿ ಪುನಶ್ಚೇತನಗೊಳಿಸಲು ಪ್ರಯಾಣ ದರ ಪರಿಷ್ಕರಣೆ ಅನಿವಾರ್ಯವಾಗಿದೆ ಎಂದು ಸುರೇಶ್ ಹೇಳಿದರು.ನಿವೃತ್ತ ಐಎಎಸ್ ಅಧಿಕಾರಿ ಅತುಲ್ ಕುಮಾರ್ ತಿವಾರಿ ನೇತೃತ್ವದ ಸಾರ್ವಜನಿಕ ಸಾರಿಗೆ ಪ್ರಯಾಣ ದರ ನಿಯಂತ್ರಣ ಸಮಿತಿಯು ಮೂರು ಸಾರಿಗೆ ನಿಗಮಗಳ ಪ್ರಯಾಣ ದರವನ್ನು ಶೇ.25ರಷ್ಟು ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ದರವನ್ನು ಶೇ.40ರಷ್ಟು ಹೆಚ್ಚಿಸುವಂತೆ ಶಿಫಾರಸು ಮಾಡಿದೆ.

ಶಿಕ್ಷಣಕ್ಕೆ ಆದ್ಯತೆ ನೀಡಿ, ಮಕ್ಕಳನ್ನು ಉನ್ನತ ಹುದ್ದೆಗಳಿಗೆ ತಯಾರು ಮಾಡಿ

ಹಾವೇರಿ: ಸಮುದಾಯದ ಅಭಿವೃದ್ಧಿಗೆ ಶಿಕ್ಷಣವೇ ಪ್ರಮುಖ ಅಸ್ತ್ರವಾಗಿದ್ದು ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಐಎಎಸ್, ಐಪಿಎಸ್ ಸೇರಿದಂತೆ ಉನ್ನತ ಹುದ್ದೆಗಳನ್ನು ಅಲಂಕರಿಸುವಂತೆ ಪ್ರೋತ್ಸಾಹಿಸಬೇಕು ಎಂದು ಸಕ್ಕರೆ ಮತ್ತು ಜವಳಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಮಾನಪ್ಪ ಲಮಾಣಿ ಹೇಳಿದರು.

ನಗರದ ಜಿಲ್ಲಾ ವಾಲ್ಮೀಕಿ ಭವನದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ನಗರಸಭೆ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ವತಿಯಿಂದ ಆಯೋಜಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಸಮಾರಂಭದ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ವಿವಿಧ ಯೋಜನೆಗಳ ಮೂಲಕ ನೆರವು ನೀಡುತ್ತಿದೆ. ಅಂಬೇಡ್ಕರ್ ಭವನ ಸೇರಿದಂತೆ ಸಮುದಾಯದ ಕಾರ್ಯಕ್ರಮಗಳನ್ನು ಆಯೋಜಿಸಲು ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿದೆ, ಸರ್ಕಾರದಿಂದ ದೊರೆಯುವ ಶಿಕ್ಷಣ ಮತ್ತು ತರಬೇತಿ ಸೌಲಭ್ಯಗಳನ್ನು ಸಮುದಾಯದವರು ಸದುಪಯೋಗ ಪಡಿಸಿಕೊಳ್ಳಬೇಕು ವಿಶೇಷವಾಗಿ ಪಾಲಕರು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಮಕ್ಕಳಿಗೆ ಐಎಎಸ್, ಐಪಿಎಸ್ ಪರೀಕ್ಷೆಗಳ ಮಹತ್ವದ ಕುರಿತು ತಿಳಿ ಹೇಳಿ ಅವರಿಗೆ ಅಂತಹ ಪರೀಕ್ಷೆಗಳ ತರಬೇತಿ ಕಾರ್ಯಕ್ರಮಗಳ ಅರಿವು ಮೂಡಿಸಬೇಕು ಎಂದರು.



ಜಯಂತಿಗಳ ಆಚರಣೆಗಳು ಕೇವಲ ಮೆರವಣಿಗೆಗಳಿಗೆ ಸೀಮಿತವಾಗದೆ ವಾಲ್ಮೀಕಿ ರಾಮಾಯಣವನ್ನು ಓದುವ ಮತ್ತು ಅದರ ಆದರ್ಶಗಳನ್ನು ಜೀವನದಲ್ಲಿ ಪಾಲಿಸುವ ಮೂಲಕ ಮಹರ್ಷಿಯವರ ಆಶಯಗಳಿಗೆ ಗೌರವ ಸಲ್ಲಿಸಬೇಕು ಎಂದು ಹೇಳಿದರು.

ರಾಣೆಬೆನ್ನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರಾದ ಡಾ. ಹೊನ್ನಪ್ಪ ಹೊನ್ನಮ್ಮನವರ ಅವರು ಮಹರ್ಷಿ ವಾಲ್ಮೀಕಿಯವರ ಕುರಿತು ವಿಶೇಷ ಉಪನ್ಯಾಸ ನೀಡಿದರು.

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಅಂತರ್ಜಾತಿ ವಿವಾಹಿತರಿಗೆ ಪ್ರೋತ್ಸಾಹಧನ, ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಅಂತರ್ಜಾತಿ ವಿವಾಹವಾದ ದಂಪತಿಗಳಿಗೆ ಪ್ರೋತ್ಸಾಹಧನ ವಿತರಿಸಲಾಯಿತು.

ಇದಕ್ಕೂ ಮುನ್ನ ನಗರದ ವಾಲ್ಮೀಕಿ ವೃತ್ತದಿಂದ ಜಿಲ್ಲಾ ವಾಲ್ಮೀಕಿ ಭವನದವರೆಗೆ ಶ್ರೀ ಮಹರ್ಷಿ ವಾಲ್ಮೀಕಿಯವರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. ವಿವಿಧ ಕಲಾತಂಡಗಳು, ಡೊಳ್ಳು ಹಾಗೂ ನೃತ್ಯ ತಂಡಗಳ ಪ್ರದರ್ಶನ ಮೆರವಣಿಗೆಗೆ ಮೆರುಗು ನೀಡಿದವು.

ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠ ಹಾಜನಹಳ್ಳಿಯ ಶ್ರೀ ಪ್ರಸನ್ನಾನಂದಪುರಿ ಮಹಾಸ್ವಾಮೀಜಿ ಅವರು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಭುಗೌಡ ಬಿಷ್ಟನಗೌಡ್ರು, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹನುಮಂತಪ್ಪ ಮರಗಡಿ, ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಂ. ಮೈದೂರ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ದಲ್ಜಿತ್ ಕುಮಾರ್, ಅಪರ ಜಿಲ್ಲಾಧಿಕಾರಿ ಡಾ. ಎಲ್ ನಾಗರಾಜ್, ತಹಶೀಲ್ದಾರ್ ಶರಣಮ್ಮ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕೆ. ಮಂಜಾನಾಯ್ಕ, ಕೆಸಿಸಿ ಬ್ಯಾಂಕ್ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಸಮುದಾಯದ ಮುಖಂಡರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕನ್ನಡಭಾಷೆ ನಿತ್ಯವೂ ಬೆಳಗಬೇಕು: ತಹಸೀಲ್ದಾರ ನಾಯಕ್

ಮುಧೋಳ: ಹಳಗನ್ನಡ, ನಡುಗನ್ನಡ ಸೇರಿದಂತೆ ಪ್ರಾಚೀನ ಕಾಲದಿಂದಲೂ ಕನ್ನಡ ಭಾಷೆ ವಿಜೃಂಭಣೆಯಿಂದ ಕೂಡಿದೆ, ಇದಕ್ಕೆ ರಾಜಮನೆತನದ ಆಳ್ವಿಕೆಯವರು, ಅಂದಿನ ಸಾಹಿತಿಗಳು, ಕವಿಗಳು, ವಚನಕಾರರ, ಇತರರ ಕೊಡುಗೆ ಅಪಾರವಾಗಿದೆ ಎಂದು ತಹಸೀಲ್ದಾರ ಡಾ. ಚಿಕ್ಕಪ್ಪ ನಾಯಕ್ ಹೇಳಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಸಭಾಭವನದಲ್ಲಿ ತಾಲೂಕು ಆಡಳಿತ, ನಗರಸಭೆ, ತಾ.ಪಂ. ಆಶ್ರಯದಲ್ಲಿ ರವಿವಾರ ಜರುಗಿದ 'ಕನ್ನಡರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭುವನೇಶ್ವರಿ ದೇವಿಗೆ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಕನ್ನಡ ಭಾಷೆ, ನಾಡು, ನುಡಿ ಮತ್ತು ಸಂಸ್ಕೃತಿಯ ಸಂರಕ್ಷಣೆ ಪ್ರತಿಯೊಬ್ಬ ಕನ್ನಡಿಗರ 'ಜವಾಬ್ದಾರಿಯಾಗಿದೆ. ಕನ್ನಡ ಭಾಷೆಯ ಬೆಳವಣಿಗೆಗೆ ಎಲ್ಲರೂ ಕೈಜೋಡಿಸಬೇಕಾಗಿದೆ. ಎಂದರು.

ನಿವೃತ್ತ ಪ್ರಾಧ್ಯಾಪಕ ಬಿ.ಎಲ್. ಮಾಳಿ ಉಪನ್ಯಾಸ ನೀಡಿ, ಕನ್ನಡ ಎಂದರೆ ಅದು ಕೇವಲ ಭಾಷೆಯಲ್ಲ, ಅದು ನಮ್ಮ ಬದುಕು, ಸಂಸ್ಕೃತಿ, ಪರಂಪರೆ ಮತ್ತು ಆತ್ಮಗೌರವದ ಸಂಕೇತವಾಗಿದೆ. ಇಂದಿನ ಯುವ ಪೀಳಿಗೆಗೆ ಭಾಷಾಭಿಮಾನ ಬೆಳೆಸುವದು ಅವಶ್ಯಕತೆ ಇದೆ ಎಂದು ಹೇಳಿದರು.



ಸಾಧಕರಿಗೆ ಸನ್ಮಾನ: ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಎಂ.ಎಂ. ನದಾಫ್, ವೈದ್ಯಕೀಯ ಕ್ಷೇತ್ರದಲ್ಲಿ ಡಾ. ಕೆ.ಎಲ್. ಉದಪುಡಿ, ಕನ್ನಡಪರ ಹೋರಾಟಗಾರ ಶ್ರೀಕಾಂತ ಮೇಗಾಡಿ, ಡಾ. ಉದಯ ನಾಯಕ್, ಡಾ. ಸಂಜಯ್ ಗಾರಗೆ, ಡಾ. ಎ.ಎಂ. ದೋಣಿ, ಸಾಹಿತಿ ಲಕ್ಷ್ಮೀ ಹಾರುಗೊಪ್ಪ, ಪ್ರೊ. ಎಂ.ಎಚ್. ಜೋಗಿ, ಪ್ರೊ.ಮಹಾಂತೇಶ ಹಿರೇಮಠ, ಪತ್ರಕರ್ತ ಹಸನಡೋಂಗ್ರಿ ಮಹಾಲಿಂಗಪುರ, ಎಸ್.ಎಸ್. ಬಬಲಾದಿ(ಲೋಕಾಪುರ) ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರನ್ನು ತಾಲೂಕಾ ಆಡಳಿತ ಪರ ಸನ್ಮಾನಿಸಲಾಯಿತು

ಭವ್ಯ ಮೆರವಣಿಗೆ: ಕಾರ್ಯಕ್ರಮ ಮುಂಚೆ ತಾ.ಪಂ. ಆವರಣದಲ್ಲಿ ಕನ್ನಡ ಬಾವುಟ ಧ್ವಜಾರೋಹಣ ನೆರವೇರಿತು. ನಂತರ ವಿವಿಧ ಕಲಾ ತಂಡಗಳು, ವಾದ್ಯ ಮೇಳದೊಂದಿಗೆ ಹಾಗು ಸರಕಾರಿ, ಅರೇಸರಕಾರಿ ಶಾಲಾ ಮಕ್ಕಳಿಂದ ಮಹಾನ ಪುರುಷರ ವೇಷಧಾರಣೆ, ಭುವನೇಶ್ವರಿ ಭಾವಚಿತ್ರ, ಬೊಂಬೆಗಳ ಪ್ರದರ್ಶನ ಜೊತೆಗೆ ನಗರದ ಪ್ರಮುಖ ವೃತ್ತಗಳ ಮೂಲಕ ಜರುಗಿದ ಭವ್ಯ ಮೆರವಣಿಗೆ ನೋಡುಗರಿಗೆ ಖುಷಿ ತಂದಿತು. ತಾಪಂ.ಇಒ. ಆರ್.ಎಸ್. ಕಳ್ಳಿಮನಿ, ನಗರಸಭೆ ಪೌರಾಯುಕ್ತ ಗೋಪಾಲ ಕಾಸೆ, ಬಿಈಒ. ಎಸ್.ಎಂ. ಮುಲ್ಲಾ, ಸಮಾಜ ಕಲ್ಯಾಣಾಧಿಕಾರಿ ಎಚ್.ಎಂ. ಪಾಟೀಲ, ವೈದ್ಯಾಧಿಕಾರಿ ವಿ.ಎಂ. ಮಲಘಾಣ, ಗೋವಿಂದ ರಾಠೋಡ, ಎಪಿಎಂಸಿ. ಅಧ್ಯಕ್ಷ ಸಂಗಪ್ಪ ಇಮ್ಮನ್ನವರ, ರಮೇಶ ನಿಡೋಣಿ, ಎಸ್.ಡಿ. ನೀಲಗುಂದ, ಕಸಾಪ. ಅಧ್ಯಕ್ಷ ಆನಂದ ಪೂಜಾರಿ, ಕರವೇ. ಅಧ್ಯಕ್ಷ ಕೃಷ್ಣಾ ಭೋವಿ, ಉಪತಹಸೀಲ್ದಾರ ಎ.ಕೆ. ಇಂಡಿಕರ, ಪ್ರಕಾಶ ಕುಂದರಗಿ, ಬಸವರಾಜ ಕಂದಗಲ್, ಬಿಸಿಎಂ. ಅಧಿಕಾರಿ ಸಾವಿತ್ರಿ ಮರಲಿಂಗನವರ, ಕೆಎಸ್ಆರ್‌ಟಿಸಿ. ಖಿರ್ಪೋ ಮ್ಯಾನೇಜರ್ ವಿದ್ಯಾ ನಾಯಕ ಇತರರಿದ್ದರು.

ತಾ.ಪಂ. ಕಾ.ನಿ. ಅಧಿಕಾರಿ ರಾಘವೇಂದ್ರ ಕಳ್ಳಿಮನಿ ಪ್ರಾಸ್ತಾವಿಕ ಮಾತನಾಡಿದರು, ಕ್ಷೇತ್ರಶಿಕ್ಷಣಾಧಿಕಾರಿ ಸಮೀರ ಮುಲ್ಲಾ ಸ್ವಾಗತಿಸಿದರು, ಎ.ಆರ್. ಭಬ್ಬಿ ನಿರುಪಿಸಿದರು, ಗಂಗಾಧರ ಗಾಣಿಗೇರ ವಂದಿಸಿದರು.



ರೀಲ್ಸ್ ಮೇಕಿಂಗ್ ಸ್ಪರ್ಧೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ

ಮುದ್ದೇಬಿಹಾಳ: ಜಿಲ್ಲಾ ಏಡ್ಸ್ ಪ್ರತಿಬಂಧಕ ಹಾಗೂ ನಿಯಂತ್ರಣ ಘಟಕ, ವಿಜಯಪುರ ವತಿಯಿಂದ ಅಂತರರಾಷ್ಟ್ರೀಯ ಯುವ ದಿನಾಚರಣೆ–2026ರ ಅಂಗವಾಗಿ ಆಯೋಜಿಸಿದ್ದ ಎಚ್ಐವಿ ಸ್ವಯಂ ಮೌಲ್ಯಮಾಪನದ ಕ್ಯೂಆರ್ ಕೋಡ್ ಸ್ಕ್ಯಾನರ್ ಕುರಿತ ರೀಲ್ಸ್ ಮೇಕಿಂಗ್ ಸ್ಪರ್ಧೆಯಲ್ಲಿ ಹಡಲಗೇರಿಯ ಮಾದರಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯರು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಸ್ವಾತಿ ಸಂಗೊಳ್ಳಿ ಹಾಗೂ ಸೌಮ್ಯ ಕಂಠಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ಕಾಲೇಜಿಗೆ ಕೀರ್ತಿ ತಂದ ವಿದ್ಯಾರ್ಥಿನಿಯರಾಗಿದ್ದಾರೆ.

ವಿದ್ಯಾರ್ಥಿನಿಯರ ಈ ಸಾಧನೆಗೆ ಕಾಲೇಜಿನ ಪ್ರಾಚಾರ್ಯರಾದ ಡಾ. ಎಸ್.ಎಲ್. ಪಾಟೀಲ, ಕಾಲೇಜಿನ ರೆಡ್‌ಕ್ರಾಸ್ ಘಟಕದ ಸಂಚಾಲಕರಾದ ರವಿ ಕಟ್ಟಿಮನಿ, ಮುದ್ದೇಬಿಹಾಳ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಅನುಸೂಯ ತೆರದಾಳ, ಎಆರ್‌ಟಿ ಆಪ್ತಸಮಾಲೋಚಕರಾದ ವಿಜಯಲಕ್ಷ್ಮೀ ಪಾಟೀಲ ಹಾಗೂ ಹಿರಿಯ ಆರೋಗ್ಯ ಸುರಕ್ಷಾಧಿಕಾರಿ ಸುನಂದಾ ಲಮಾಣಿ ಅಭಿನಂದನೆ ಸಲ್ಲಿಸಿದ್ದಾರೆ.

ಹುನ್ನೂರಿನಲ್ಲಿ ಸಂಭ್ರಮದ ಕನ್ನಡ ರಾಜ್ಯೋತ್ಸವ

ಕನ್ನಡ ಭಾಷೆಗೆ ತನ್ನದೇಯಾದ ಇತಿಹಾಸವಿದೆ



ಜಮಖಂಡಿ: ಕನ್ನಡ ಭಾಷೆಗೆ ತನ್ನದೇಯಾದ ಇತಿಹಾಸವಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಲಭಿಸಿರುವ ಭಾಷೆಯಾಗಿದೆ. ಕನ್ನಡದ ನೆಲ, ಜಲ, ಭಾಷೆಗಾಗಿ ಹೋರಾಡಿದ ಮಹನಿಯರನ್ನು ನೆನಪಿಕೊಳ್ಳುವದು ನಮ್ಮೆಲ್ಲರ ಕರ್ತವ್ಯವಾಗಬೇಕು ಎಂದು ಮುಖ್ಯಶಿಕ್ಷಕಿ ಪ್ರೇಮಾ ಉಳ್ಳಿಗಡ್ಡಿ ಹೇಳಿದರು.

ತಾಲೂಕಿನ ಹುನ್ನೂರ ಗ್ರಾಮದ ವೀಣಾ ಆಂಗ್ಲಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆ ಆವರಣದಲ್ಲಿ ರವಿವಾರ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ತಾಯಿ ಭುವನೇಶ್ವರಿದೇವಿ ಭಾವಚಿತ್ರ ಪೂಜೆ ಸಲ್ಲಿಸಿದ ನಂತರ ಛದ್ಮವೇಷ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದರು.

ದೇಶದ ಯಾವುದೇ ಅನೇಕ ರಾಜ್ಯಗಳಿಗೆ ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ, ಆದರೇ ಕರ್ನಾಟಕ ರಾಜ್ಯಕ್ಕೆ ಎಂಟು ಜ್ಞಾನಪೀಠ ಪ್ರಶಸ್ತಿಗಳು ಲಭಿಸುವ ಮೂಲಕ ಇತಿಹಾಸ ನಿರ್ಮಾಣಗೊಂಡಿದೆ. ಕುವೆಂಪು ಅವರಿಂದ ಹಿಡಿದು ಡಾ.ಚಂದ್ರಶೇಖರ ಕಂಬಾರ ಸೇರಿದಂತೆ ಎಂಟು ಹಿರಿಯ ಸಾಹಿತಿಗಳಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಜಮಖಂಡಿ ಕನ್ನಡ ಸಂಘದ ಕಾರ್ಯಕ್ರಮದಲ್ಲಿ ಭಾಗವಹಿಸಿ ತೆರಳಿದ ನಂತರ ಕವಿ ದ.ರಾ.ಬೇಂದ್ರೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದ್ದು ನಮ್ಮೆಲ್ಲರ ಸೌಭಾಗ್ಯ ಕ್ಷಣವಾಗಿದೆ ಎಂದರು.

ಕನ್ನಡ ರಾಜ್ಯೋತ್ಸವ ನಿಮಿತ್ತ ವಿಶೇಷ ವಿದ್ಯಾರ್ಥಿಗಳು ಮಹನೀಯರ ಛದ್ಮವೇಷದಲ್ಲಿ ಗಮನ ಸೆಳೆದರು. ವೇದಿಕೆಯಲ್ಲಿ ಸಂಸ್ಥೆಯ ಅಧ್ಯಕ್ಷ ಮಲ್ಲೇಶ ಆಳಗಿ, ಸಹಶಿಕ್ಷಕಿಯರಾದ ಸುರೇಖಾ ರಬಕವಿ, ಅಕ್ಷತಾ ಶಿವಣಗಿ, ಸಹಾಯಕಿ ಬಿಸ್ಮಿಲ್ಲಾ ಬೆಸಗಾರ ಸಹಿತ ಹಲವರು ಇದ್ದರು.

ಜನಗಣತಿ-2027: 120 ಅಧಿಕಾರಿ, ಸಿಬ್ಬಂದಿಗಳಿಗೆ 2 ದಿನಗಳ ತರಬೇತಿ

ತರಬೇತಿ ಕಾರ್ಯಾಗಾರಕ್ಕೆ ಜಿಲ್ಲಾಧಿಕಾರಿ ಚಾಲನೆ

ಬಾಗಲಕೋಟೆ: ಜಿಲ್ಲೆಯಾದ್ಯಂತ ಜನಗಣತಿ–2027ರ ಕಾರ್ಯವನ್ನು ಯಶಸ್ವಿಯಾಗಿ ಹಾಗೂ ವ್ಯವಸ್ಥಿತವಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಜಿಲ್ಲೆಯ 120 ಅಧಿಕಾರಿಗಳಿಗೆ ಹಮ್ಮಿಕೊಂಡ ಎರಡು ದಿನಗಳ ತರಬೇತಿ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಅವರು ಚಾಲನೆ ನೀಡಿದರು.

ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಸೋಮವಾರ ಜರುಗಿದ ಜನಗಣತಿ–2027ರ ಕುರಿತು ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಜನಗಣತಿ ಕಾರ್ಯದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ವಹಿಸಬೇಕಾದ ಜವಾಬ್ದಾರಿಗಳು, ಗಣತಿ ಪ್ರಕ್ರಿಯೆ, ಮಾಹಿತಿ ಸಂಗ್ರಹಣೆ ಹಾಗೂ ಕಾರ್ಯನಿರ್ವಹಣೆಯ ವಿಧಾನಗಳ ಕುರಿತು ತರಬೇತಿ ನೀಡಲಾಗುತ್ತಿದೆ. ಜನಗಣತಿ ಕಾರ್ಯವನ್ನು ನಿಗದಿತ ಮಾರ್ಗಸೂಚಿ ಹಾಗೂ ಕಾಲಮಿತಿಯೊಳಗೆ ನಿಖರವಾಗಿ ಪೂರ್ಣಗೊಳಿಸುವ ಕೆಲಸವಾಗಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜನವರಿ 10 ರಿಂದ 24 ವರೆಗೆ 15 ದಿನಗಳ ಕಾಲ ಸಾರ್ವಜನಿಕರಿಗೆ ಸ್ವಯಂ ಗಣತಿ ಕಾರ್ಯಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಈ ಅವಧಿಯಲ್ಲಿ ಸ್ವಯಂ ಗಣತಿ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸಲಾಗುತ್ತದೆ. ಜನವರಿ 24 ರಂದು ಪರಿಶೀಲನೆ ಕಾರ್ಯ ಕೈಗೊಳ್ಳಲಾಗುತ್ತಿದೆ. ಜನವರಿ 25 ರಿಂದ ಜನಸಂಖ್ಯಾ ಗಣತಿ ಕಾರ್ಯ ಆರಂಭಿಸಲಾಗುತ್ತದೆ. ಜನಗಣತಿ ಕಾರ್ಯವು ದೇಶದ ಅಭಿವೃದ್ಧಿ ಯೋಜನೆಗಳು ಹಾಗೂ ಆಡಳಿತಾತ್ಮಕ ನಿರ್ಧಾರಗಳಿಗೆ ಅತ್ಯಂತ ಮಹತ್ವದ್ದಾಗಿರುವುದರಿಂದ ಅಧಿಕಾರಿಗಳು ಮತ್ತು ಸಿಬ್ಬಂದಿ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಸಾರ್ವಜನಿಕರೂ ಸ್ವಯಂ ಗಣತಿ ಹಾಗೂ ಮನೆ ಮನೆ ಭೇಟಿ ನೀಡುವ ಗಣತಿದಾರರಿಗೆ ಸರಿಯಾದ ಮಾಹಿತಿ ನೀಡಿ ಸಹಕರಿಸುವಂತೆ ಜಿಲ್ಲಾಧಿಕಾರಿಗಳು ಮನವಿ ಮಾಡಿಕೊಂಡರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಮಂಜುನಾಥ ಡೊಂಬರ, ಸಂಪನ್ಮೂಲ ವ್ಯಕ್ತಿಗಳಾದ ಶ್ಯಾಮಕುಮಾರ ಎಸ್.ಬಿ, ಸುನೀಲಕುಮಾರ ಶರ್ಮಾ, ಟಿ.ಕೆ.ಶ್ರೀಧರ ಸೇರಿದಂತೆ ಇತರರು ಉಪಸ್ಥಿತರರಿದ್ದರು. ತರಬೇತಿಯಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳು ಸೇರಿ ಒಟ್ಟು 120 ಜನ ಪಾಲ್ಗೊಂಡಿದ್ದರು.



ಇಂದು ವಿದ್ಯಾಗಿರಿ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ಬಾಗಲಕೋಟೆ: ಹೆಸ್ಕಾಂ ಕಾರ್ಯ ಮತ್ತು ಪಾಲನೆ ವಿದ್ಯಾಗಿರಿ ಶಾಖೆಯಿಂದ ನವನಗರದ 110 ಕೆವಿ ವಿದ್ಯುತ್ ಉಪಕೇಂದ್ರದ ಎಫ್–01 ವಿದ್ಯಾಗಿರಿ ಫೀಡರ್ ವ್ಯಾಪ್ತಿಯಲ್ಲಿ ವಿವಿಧ ನಿರ್ವಹಣಾ ಕಾಮಗಾರಿ ಕೈಗೊಳ್ಳುವ ಪ್ರಯುಕ್ತ ನವೆಂಬರ 4 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ತೆಗ್ಗಿ ಲೇಔಟ್, ಕಂದಕೂರು ಲೇಔಟ್, ರೋನಾಡ್ ಲೇಔಟ್, ಸರನಾಡಗೌಡ ಲೇಔಟ್, ಕೈಗಾರಿಕಾ ಪ್ರದೇಶ, 21ನೇ, 18ನೇ ಕ್ರಾಸ್, ಸ್ವಾಮ್ ವೇ ಬ್ರಿಡ್ಜ್, ಸುಲಿಭಾವಿ ಕಾಲೋನಿ, ಬೆಂಡಿಗೇರಿ ಕಾಲೋನಿ, ಸಿ.ಆರ್. ಪಾಟೀಲ್ ಲೇಔಟ್, ಬಣಕರ್ ಲೇಔಟ್, 19ನೇ ಮತ್ತು 22ನೇ ಕ್ರಾಸ್, 3ನೇ ಮತ್ತು 4ನೇ ಕ್ರಾಸ್, ನೇತಾಜಿ ಹಾಸ್ಟೆಲ್ ಪ್ರದೇಶ, ಎಂಬಿಎ ಕಾಲೇಜ್ ರಸ್ತೆ, ಐಬಿ ಬ್ಯಾಕ್‌ಸೈಡ್ ರಸ್ತೆ, ಗಾಣಿಗಾರ ಲೇಔಟ್, ಬಲುಲ್ಮಠ ಲೇಔಟ್, 16ನೇ ಕ್ರಾಸ್, ಬಲುಮಿ ಲೇಔಟ್, ಸಮೃದ್ಧಿ ಗುರುಕುಲ್ ಪ್ರದೇಶ, ನಂದೀಶ್ವರ ನಗರ, ಬಿಟಿಡಿಎ ಕಾಲೋನಿ, 6ನೇ ಮತ್ತು 11ನೇ ಕ್ರಾಸ್, ಬಿವಿವಿಎಸ್ ಕಾಂಪ್ಲೆಕ್ಸ್, ಬಲುಲ್ಮಠ ಕಾಂಪ್ಲೆಕ್ಸ್‌ನಿಂದ ವಾಸವಿ ಕಾಂಪ್ಲೆಕ್ಸ್‌ವರೆಗಿನ ಪ್ರದೇಶ, 7, 8, 9, 10, 11 ಮತ್ತು 12ನೇ ಕ್ರಾಸ್, ಜ್ಯೋತಿ ಕಾಲೋನಿ, ಐಬಿ ಏರಿಯಾ ಎದುರು, ಮುರನಾಳ ರಸ್ತೆ, ಕೆಎಚ್‌ಬಿ ಕಾಲೋನಿ, ರೂಪ್‌ಲ್ಯಾಂಡ್, ತೋಸನಿವಾಲ್ ಲೇಔಟ್, ಇರವ್ವ ಪಾಟೀಲ್ ಲೇಔಟ್, ಬಜಂತ್ರಿ ಲೇಔಟ್, ಮೂನ್‌ಲೈಟ್ ಏರಿಯಾ, ಕುದರಿಕಣ್ಣೂರು ಲೇಔಟ್, 13, 14 ಮತ್ತು 15ನೇ ಕ್ರಾಸ್ ಹಾಗೂ ಬಿಇ ಕಾಲೇಜ್ ಸರ್ಕಲ್ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಗ್ರಾಹಕರು ಸಹಕರಿಸುವಂತೆ ಬಾಗಲಕೋಟೆ ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

ನವನಗರ: ನಾಳೆ ವಿವಿಧ ಬಡಾವಣೆಗಳಲ್ಲಿ ವಿದ್ಯುತ್ ವ್ಯತ್ಯಯ

ಬಾಗಲಕೋಟೆ: ನವನಗರದ ಕಾರ್ಯ ಮತ್ತು ಪಾಲನೆ ಶಾಖೆ–1ರಲ್ಲಿ 110 ಕೆವಿ ವಿದ್ಯುತ್ ಉಪಕೇಂದ್ರದ ಎಫ್–2 ಸರ್ಕಾರಿ ಆಸ್ಪತ್ರೆ ಫೀಡರ್ ವ್ಯಾಪ್ತಿಯಲ್ಲಿ ವಿವಿಧ ವಿದ್ಯುತ್ ಮಾರ್ಗಗಳ ನಿರ್ವಹಣಾ ಕಾಮಗಾರಿ ಕೈಗೊಳ್ಳುವ ಪ್ರಯುಕ್ತ ನವೆಂಬರ 5 ರಂದು ಬೆಳಿಗ್ಗೆ 10 ರಿಂದ ಸಂಜೆ 5 ವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ನವನಗರದ ಸೆಕ್ಟರ ನಂ.63ಎ ಹಾಗೂ 1 ರಿಂದ 4, 12, 13, 16 ರಿಂದ 18, 26, 27, 30, 31, 40, 41, 44 ರಿಂದ 46 ಸೆಕ್ಟರಗಳು ಹಾಗೂ ಕಾಳಿದಾಸ ಶಿಕ್ಷಣ ಸಂಸ್ಥೆ, ಅಂಜುಮನ್ ಶಿಕ್ಷಣ ಸಂಸ್ಥೆ ಮತ್ತು ಕೇಂದ್ರಿಯ ವಿದ್ಯಾಲಯ ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಸಂಬಂಧಪಟ್ಟ ವ್ಯಾಪ್ತಿಯ ವಿದ್ಯುತ್ ಗ್ರಾಹಕರು ಸಹಕರಿಸಬೇಕೆಂದು ಹೆಸ್ಕಾಂ ಕಾರ್ಯ ಮತ್ತು ಪಾಲನೆ ನವನಗರ–1 ಶಾಖೆ ಪ್ರಕಟಣೆಯಲ್ಲಿ ಕೋರಿದೆ.

ಯುವಕರಿಂದ ಲೋಕತಾಂತ್ರಿಕ ಪ್ರತಿಜ್ಞೆ ಸ್ವೀಕಾರ

ಕೊಪ್ಪಳ: ಪ್ರಜಾಪ್ರಭುತ್ವದ ಮೌಲ್ಯಗಳ ಅರಿವು ಮೂಡಿಸುವ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಯುವಜನರ ಪಾತ್ರವನ್ನು ಉತ್ತೇಜಿಸುವ ಉದ್ದೇಶದಿಂದ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನವೆಂಬರ್ 2ರಂದು ಆಯೋಜಿಸಿದ್ದ 'ವಿಕಸಿತ ಭಾರತ ಯುವ ಸಂವಾದ' ಕಾರ್ಯಕ್ರಮದಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಯುವ ನಾಗರಿಕರು ಭಾಗವಹಿಸಿ ಲೋಕತಾಂತ್ರಿಕ ಪ್ರತಿಜ್ಞೆ ಸ್ವೀಕರಿಸಿದರು.

ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುವ ಮೇರಾ ಯುವ ಭಾರತ ಕೇಂದ್ರ, ಕೊಪ್ಪಳ ವತಿಯಿಂದ ಸೋಮವಾರ ಗಂಗಾವತಿ ನಗರದ ಶ್ರೀ ಕೊಲ್ಲಿ ನಾಗೇಶ್ವರ ರಾವ್ ಗಂಗಯ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಗಂಗಾವತಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಗಾಲಿ ಜನಾರ್ಧನ ರೆಡ್ಡಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಯುವ ಐಕಾನ್ ಸಂಜಯಕುಮಾರ ವೈ. ಬಿರಾದರ್ ಉಪಸ್ಥಿತರಿದ್ದರು. ಕಾಲೇಜಿನ ವಿಶೇಷ ಉಪನ್ಯಾಸಕರಾದ ಪ್ರೊ. ಶಿವಾನಂದ ಮೇಟಿ ಅವರು ಯುವಜನರನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳು ಶಾಸಕರೊಂದಿಗೆ ನೇರ ಸಂವಾದ ನಡೆಸಿದರು. ಆಡಳಿತದಲ್ಲಿ ಯುವಜನರ ಪಾಲ್ಗೊಳ್ಳುವಿಕೆ, ನಾಗರಿಕ ಜವಾಬ್ದಾರಿ, ಪ್ರಜಾಪ್ರಭುತ್ವದ ಮಹತ್ವ ಹಾಗೂ ಮೊದಲ ಬಾರಿಗೆ ಮತದಾನ ಮಾಡುವ ಯುವಕರ ಪಾತ್ರ ಸೇರಿದಂತೆ ಹಲವು ವಿಚಾರಗಳ ಕುರಿತು ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳಿದರು. ಇದಕ್ಕೆ ಶಾಸಕರು ಉತ್ತರಿಸುವ ಮೂಲಕ ಯುವಜನರೊಂದಿಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.



ಗಂಗಾವತಿಯಲ್ಲಿ ಯುವ ಸಂವಾದ

ದೇಶಾದ್ಯಂತ ಅಕ್ಟೋಬರ್ 26ರಿಂದ ನವೆಂಬರ್ 5ರವರೆಗೆ 500 ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಹಮ್ಮಿಕೊಳ್ಳಲಾಗುತ್ತಿರುವ 'ವಿಕಸಿತ ಭಾರತ ಯುವ ಸಂವಾದ' ಅಭಿಯಾನದ ಭಾಗವಾಗಿ ಗಂಗಾವತಿಯಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಂತಿಮ ಘಟ್ಟದಲ್ಲಿ ಭಾಗವಹಿಸಿದ್ದ ಯುವಕರು ಲೋಕತಾಂತ್ರಿಕ ಪ್ರತಿಜ್ಞೆ ಸ್ವೀಕರಿಸಿ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗೌರವಿಸುವುದು, ನಾಗರಿಕ ಜವಾಬ್ದಾರಿಗಳನ್ನು ನಿಷ್ಠೆಯಿಂದ ನಿರ್ವಹಿಸುವುದು ಹಾಗೂ ಪ್ರಜಾಪ್ರಭುತ್ವದ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಸಂಕಲ್ಪ ಮಾಡಿದರು.

ಜಿಲ್ಲಾ ಯುವ ಅಧಿಕಾರಿಗಳಾದ ಮೇಘಾ ಜಿ.ಕೆ. ಅವರು ವಂದನಾರ್ಪಣೆ ಸಲ್ಲಿಸಿದರು.

'ವಿಕಸಿತ ಭಾರತ 2047' ಕನಸಿನ ಸಾಕಾರದಲ್ಲಿ ಯುವಶಕ್ತಿಯ ಪಾತ್ರ ಮಹತ್ವದ್ದಾಗಿದ್ದು, ಯುವಜನರು ಕೇವಲ ದೇಶದ ಭವಿಷ್ಯದ ಪ್ರಜೆಗಳಾಗಿರದೆ, ಇಂದಿನ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿಯೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂಬ ಆಶಯವನ್ನು ಈ ಯುವ ಸಂವಾದ ಕಾರ್ಯಕ್ರಮ ವ್ಯಕ್ತಪಡಿಸಿತು.

ಸರ್ಕಾರದ ಎಲ್ಲ ಕ್ಷೇತ್ರಗಳಲ್ಲೂ ಕನ್ನಡ ಕಡ್ಡಾಯವಾಗಲಿ

ರಬಕವಿಯಲ್ಲಿ ಭುವನೇಶ್ವರಿ ತೇರಿನ ವೈಭವದ ಮೆರವಣಿಗೆ; ಕನ್ನಡಾಭಿಮಾನದ ಕಂಪು

ರಬಕವಿ–ಬನಹಟ್ಟಿ: ಕನ್ನಡ ಭಾಷೆಯಷ್ಟು ಮೃದು, ಸುಂದರ ಹಾಗೂ ಶ್ರೀಮಂತ ಭಾಷೆ ಮತ್ತೊಂದಿಲ್ಲ. ಕನ್ನಡದ ಉಳಿವು ಮತ್ತು ಬೆಳವಣಿಗೆಗೆ ಸರ್ಕಾರದ ಎಲ್ಲ ಕಾರ್ಯಕ್ಷೇತ್ರಗಳಲ್ಲೂ ಕನ್ನಡ ಕಡ್ಡಾಯವಾಗಿ ಬಳಕೆಯಾಗಬೇಕೆಂದು ರಬಕವಿ ಕನ್ನಡ ಸಂಘದ ಅಧ್ಯಕ್ಷ ಚಿದಾನಂದ ಸೊಲ್ಲಾಪುರ ಪ್ರತಿಪಾದಿಸಿದರು.

ಭಾನುವಾರ ಕನ್ನಡ ರಾಜ್ಯೋತ್ಸವದ ಅಂಗವಾಗಿ ರಬಕವಿ ಹೊಸ ಬಸ್ ನಿಲ್ದಾಣದಲ್ಲಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು. ನಗರಸಭೆ ಹಾಗೂ ತಾಲೂಕು ಆಡಳಿತದ ಅಧಿಕಾರಿಗಳು ಅಂಗಡಿ ಮುಂಗಟ್ಟುಗಳು, ಸರ್ಕಾರಿ ಕಚೇರಿಗಳು ಮತ್ತು ಸಂಘ–ಸಂಸ್ಥೆಗಳ ನಾಮಫಲಕಗಳಲ್ಲಿ ಮಾತೃಭಾಷೆ ಕನ್ನಡಕ್ಕೆ ಮೊದಲ ಆದ್ಯತೆ ನೀಡಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ತೇರದಾಳ ಶಾಸಕ ಸಿದ್ದು ಸವದಿ ಭುವನೇಶ್ವರಿ ತೇರಿನ ಮೆರವಣಿಗೆಗೆ ಚಾಲನೆ ನೀಡಿ, ಕನ್ನಡ ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿ. ಕೇವಲ ಘೋಷಣೆ ಮತ್ತು ಭಾಷಣಗಳಿಗೆ ಸೀಮಿತವಾಗದೆ ನಿತ್ಯದ ಬದುಕಿನಲ್ಲಿ ಕನ್ನಡ ಬಳಸಿದಾಗ ಭಾಷೆಯ ಬೆಳವಣಿಗೆ ಸಾಧ್ಯವೆಂದರು.



ವಿರಕ್ತಮಠದ ಶ್ರೀ ಮಹಾಂತ ದೇವರು, ತಹಶೀಲ್ದಾರ್ ಗಿರೀಶ ಸ್ವಾದಿ, ಉದ್ಯಮಿ ಸತೀಶ ಹಜಾರೆ ಹಾಗೂ ಈರಣ್ಣ ಗುಣಕಿ ಕನ್ನಡ ಭಾಷೆ ಮತ್ತು ಸಾಧಕರ ಕುರಿತು ಮಾತನಾಡಿದರು. ನಗರದ ಪ್ರಮುಖ ಬೀದಿಗಳಲ್ಲಿ ಸಾಗಿದ ಭುವನೇಶ್ವರಿ ತೇರು ರಾಮಪುರದ ನೀಲಕಂಠೇಶ್ವರ ಮಠದಲ್ಲಿ ಸಂಪನ್ನಗೊಂಡಿತು. ಜಾನಪದ ಕಲಾತಂಡಗಳು, ಸಾಂಸ್ಕೃತಿಕ ಗೊಂಬೆಗಳು, ಕನ್ನಡದ ಸಾಧಕರ ವೇಷಭೂಷಣ ಧರಿಸಿದ ಮಕ್ಕಳು ಹಾಗೂ ಸನಾಯಿ ವಾದನ ಮೆರವಣಿಗೆಯ ಪ್ರಮುಖ ಆಕರ್ಷಣೆಯಾಗಿದ್ದವು. ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಆಟೊ ಚಾಲಕರು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಮಹಾದೇವ ಕೋಟ್ಯಾಳ, ಬಸವರಾಜ ದಲಾಲ, ಶೇಖರ ಕೊಟ್ಟಶೆಟ್ಟಿ, ರಾಜು ಸಾಬೋಜಿ, ಡಾ. ರವಿ ಜಮಖಂಡಿ, ವಿಜಯ ನಾಶಿ, ರವಿ ಮುತೂರು, ಧರೆಪ್ಪ ಉಳ್ಳಾಗಡ್ಡಿ, ಪ್ರಭು ಪೂಜಾರಿ, ಮಲ್ಲಿಕಾರ್ಜುನ ಗಡೇನ್ನವರ, ಮೊಹಮ್ಮದ್ ಝಾರೆ, ಪ್ರಶಾಂತ ಪಾಲಬಾವಿ, ದಯಾನಂದ ಬಾಗಲಕೋಟಮಠ, ಸುಭಾಷ ಮಧುರಖಂಡಿ, ವಿ.ಬಿ. ದುಂಬಾಳೆ, ಪ್ರೊ. ಎಂ.ಎಸ್. ಬದಾಮಿ, ದಯಾನಂದ ಮಟಿಕಲಿ, ಬುಜಬಲಿ ನೇಮಗೌಡ, ಅಣ್ಣಪ್ಪ ಬಿರಡಿ, ಸದಾಶಿವ ನಾಯಕ, ಯಲ್ಲಪ್ಪ ಕಟಗಿ, ಮಹಾದೇವ ತುಂಗಳ, ರವಿ ಗಡಾದ, ಇಂದ್ರಪ್ಪ ಲಾಳಕೆ, ಸಂಜು ತೇಲಿ ಸೇರಿದಂತೆ ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಉಪಸ್ಥಿತರಿದ್ದರು.

ವಿಶ್ವವಿದ್ಯಾಲಯ ಮಟ್ಟದ ಖೋ-ಖೋ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ



ತಾಳಿಕೋಟೆ: ಪಟ್ಟಣದ ಶ್ರೀ ಎಸ್.ಎಸ್. ವಿದ್ಯಾ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಶ್ರೀ ಎಚ್.ಎಸ್. ಪಾಟೀಲ್ ದೈಹಿಕ ಶಿಕ್ಷಣ ಮಹಾವಿದ್ಯಾಲಯವು 2026–27ನೇ ಸಾಲಿನ ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಖೋ–ಖೋ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆಯುವ ಮೂಲಕ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದೆ.

ಸವದತ್ತಿಯ ಶ್ರೀ ಎಸ್.ವಿ.ಎಸ್. ಬೆಳ್ಳುಬ್ಬಿ ಆರ್ಟ್ಸ್ ಆ್ಯಂಡ್ ಕಾಮರ್ಸ್ ಕಾಲೇಜಿನಲ್ಲಿ ನಡೆದ ವಿಶ್ವವಿದ್ಯಾಲಯ ಮಟ್ಟದ ಖೋ–ಖೋ ಪಂದ್ಯಾವಳಿಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳ ತಂಡವು ಅತ್ಯುತ್ತಮ ಕ್ರೀಡಾ ಪ್ರದರ್ಶನ ನೀಡಿ ದ್ವಿತೀಯ ಸ್ಥಾನ ಗಳಿಸಿದೆ.

ವಿದ್ಯಾರ್ಥಿಗಳ ಈ ಸಾಧನೆಗೆ ಶ್ರೀ ಎಸ್.ಎಸ್. ವಿದ್ಯಾ ಸಂಸ್ಥೆಯ ಅಧ್ಯಕ್ಷ ಎಚ್.ಎಸ್. ಪಾಟೀಲ್, ಕಾರ್ಯದರ್ಶಿ ಸಚಿನ್ ಎಚ್. ಪಾಟೀಲ್, ಆಡಳಿತಾಧಿಕಾರಿ ಕಿರಣ್ ಎಚ್. ಪಾಟೀಲ್, ಮಹಾವಿದ್ಯಾಲಯದ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ. ವಿದ್ಯಾರ್ಥಿಗಳ ಕ್ರೀಡಾ ಸಾಧನೆ ಮಹಾವಿದ್ಯಾಲಯದ ಹೆಮ್ಮೆಯ ಸಂಗತಿಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಪಾಲಕರು ಮಕ್ಕಳ ಮೇಲೆ ನಿಗಾವಹಿಸಿ: ಶಾಸ್ತ್ರಿ

ಜಮಖಂಡಿ: ಮಕ್ಕಳಿಗೆ ಎಸ್.ಎಸ್.ಎಲ್.ಸಿ ಅತೀ ಮುಖ್ಯವಾದ ಹಂತವಾಗಿದ್ದು, ಶಿಕ್ಷಕರ ಜೊತೆ ಪಾಲಕರು ಮಕ್ಕಳ ಬಗ್ಗೆ ಹೆಚ್ಚಿನ ನಿಗಾವಹಿಸಬೇಕು. ತಮ್ಮ ಮಕ್ಕಳ ಚಲನವಲನ ಮೇಲೆ ಪಾಲಕರು, ಪೋಷಕರು ಕಣ್ಣಿಡಬೇಕು ಎಂದು ಮುಖ್ಯ ಶಿಕ್ಷಕ ನಾರಾಯಣ ಶಾಸ್ತ್ರಿ ಹೇಳಿದರು.

ತಾಲೂಕಿನ ಕುಂಬಾರಹಳ್ಳ ಗ್ರಾಮದ ಸರಕಾರಿ ಪಿ.ಎಂ.ಶ್ರೀ ಕರ್ನಾಟಕ ಪಬ್ಲಿಕ್ ಸ್ಕೂಲದಲ್ಲಿ ನಡೆದ ಸಮುದಾಯದತ್ತ ಶಾಲೆ ಮತ್ತು ಪಾಲಕರ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಕ್ಕಳಿಗೆ ಸರಕಾರದ ಎಲ್ಲ ಸೌಲಭ್ಯಗಳನ್ನು ಬಳಸಿಕೊಂಡು ಉತ್ತಮ ರೀತಿಯಲ್ಲಿ ಅಧ್ಯಯನದಲ್ಲಿ ತೊಡಗಿಕೊಳ್ಳಬೇಕು ಎಂದರು.

ಶಿಕ್ಷಕಿ ಸವಿತಾ ಬೆನಕಟ್ಟಿ ಮಾತನಾಡಿ, ಪ್ರಸಕ್ತ ವರ್ಷ ಎಸ್.ಎಸ್.ಎಲ್.ಸಿ. ತರಗತಿಯಲ್ಲಿ 92 ಮಕ್ಕಳಿದ್ದು, ಮಕ್ಕಳ ಪ್ರಗತಿ ಸ್ವಲ್ಪ ಕಡಿಮೆಯಿದೆ. ಪಾಲಕರು, ಪೋಷಕರು ಮುಂದಿನ ದಿನಗಳಲ್ಲಿ ತಮ್ಮಮಕ್ಕಳಿಗೆ ಇನ್ನೂ ಹೆಚ್ಚಿನ ಅಭ್ಯಾಸ ಜೊತೆಗೆ ಕಾಳಜಿ ವಹಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ. ಅರ್ಧವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ, ದ್ವಿತೀಯಾ, ತೃತೀಯ ಸ್ಥಾನ ಪಡೆದ ಮಕ್ಕಳಿಗೆ ಬಹುಮಾನ ನೀಡಲಾಯಿತು. ಪಾಲಕರ ಸಭೆಯಲ್ಲಿ 35ಕ್ಕೂ ಹೆಚ್ಚು ಪಾಲಕರು ಪಾಲ್ಗೊಂಡಿದ್ದರು. ವೇದಿಕೆಯಲ್ಲಿ ಎಸ್.ಡಿ.ಎಂ.ಸಿ. ಸದಸ್ಯರಾದ ಹಣಮಂತ ಮರನೂರ, ಅಲ್ಲಾಸಾಬ ನದಾಫ, ಪದ್ಮವ್ವಾ ಹುದಲಿ, ಶೈಲಾ ಮಾಳಿ, ಶಿಕ್ಷಕರಾದ ಬಾಹುಬಲಿ ಮುತ್ತೂರ ಸಂಗನಬಸವ ಉಟಗಿ, ಅಶೋಕ ಬಿ.ಪಾಟೀಲ, ಚಂದ್ರಕಾಂತ ಪೋಲೀಸ್, ಮಂಜುಳಾ ಕಡಕೋಳ, ಆಸೀಫಾಭಾನು ಮೋಮಿನ್, ಶಕುಂತಲಾ ಬಿರಾದಾರ, ಸಗರೆಪ್ಪ ಸೊನ್ನದ, ಶಾರದಾ ಮಠ, ಸೌಜನ್ಯಾ ಬಾಳಿಗಿಡದ, ಕರೆಪ್ಪ ವಾಜಂತ್ರಿ ಸಹಿತ ಹಲವರು ಇದ್ದರು.





ಗ್ರಾಮೀಣ ಸಂಪರ್ಕ ಬಲವರ್ಧನೆಗೆ ಒತ್ತು: ಐಹೊಳೆ

ರಾಯಬಾಗ: ಗ್ರಾಮೀಣ ಭಾಗದ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಜನರ ಸಂಚಾರಕ್ಕೆ ಅನುಕೂಲ ಕಲ್ಪಿಸುವುದು ಹಾಗೂ ಗುಣಮಟ್ಟದ ಕಾಮಗಾರಿಗಳಿಗೆ ಆದ್ಯತೆ ನೀಡುವುದು ನಮ್ಮ ಉದ್ದೇಶವಾಗಿದೆ ಎಂದು ಶಾಸಕ ಡಿ.ಎಂ. ಐಹೊಳೆ ಹೇಳಿದರು.

ತಾಲ್ಲೂಕಿನ ನಿಪನಾಳ ಗ್ರಾಮದಲ್ಲಿ 2025?26ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಯೋಜನೆಯಡಿ ಮಂಜೂರಾದ 25 ಲಕ್ಷ ಅನುದಾನದಲ್ಲಿ ಕೈಗೆತ್ತಿಕೊಂಡಿರುವ ರಸ್ತೆ ಡಾಂಬರೀಕರಣ ಕಾಮಗಾರಿಗೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಲ್ಲಿ ರಸ್ತೆ ಸಂಪರ್ಕ ಪ್ರಮುಖ ಪಾತ್ರ ವಹಿಸುತ್ತದೆ. ಉತ್ತಮ ರಸ್ತೆಗಳಿಂದ ಸಾರ್ವಜನಿಕರ ಸಂಚಾರ ಸುಗಮವಾಗುವುದರ ಜತೆಗೆ ರೈತರ ಕೃಷಿ ಚಟುವಟಿಕೆ, ವ್ಯಾಪಾರ ವಹಿವಾಟು ಹಾಗೂ ಶಾಲಾ–ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೂ ಅನುಕೂಲವಾಗಲಿದೆ. ಜನರ ಅಗತ್ಯಗಳಿಗೆ ಸ್ಪಂದಿಸಿ ಮೂಲಸೌಕರ್ಯಗಳನ್ನು ಕಲ್ಪಿಸುವುದು ಅಭಿವೃದ್ಧಿಯ ಪ್ರಮುಖ ಭಾಗವಾಗಿದೆ ಎಂದರು.

ರಸ್ತೆ ಕಾಮಗಾರಿಗಳನ್ನು ನಿಗದಿತ ಮಾನದಂಡಗಳಂತೆ ಗುಣಮಟ್ಟದಿಂದ ಪೂರ್ಣಗೊಳಿಸಬೇಕು. ಕಾಮಗಾರಿಯಲ್ಲಿ ಯಾವುದೇ ಲೋಪದೋಷಗಳು ಕಂಡುಬರದಂತೆ ಸಂಬಂಧಿಸಿದ ಅಧಿಕಾರಿಗಳು ನಿಗಾ ವಹಿಸಬೇಕು. ಸಾರ್ವಜನಿಕರೂ ಕಾಮಗಾರಿಯ ಗುಣಮಟ್ಟದ ಬಗ್ಗೆ ಗಮನ ಹರಿಸಬೇಕು. ಅಭಿವೃದ್ಧಿ ಕಾಮಗಾರಿಗಳು ದೀರ್ಘಕಾಲ ಬಾಳಿಕೆ ಬರುವಂತಿರಬೇಕು ಎಂದು ಸೂಚಿಸಿದರು.


ಈ ಸಂದರ್ಭದಲ್ಲಿ ರಾಜು ಹಳಬರ, ಬಾಳೇಶ ಕುರಬೇಟ, ಸಂಜು ಕುರಣೆ, ಶಫೀಕ್ ನದಾಫ, ದೇವಾನಂದ ನಿಪನಾಳಕರ, ತುಕಾರಾಮ ಪೂಜೇರಿ, ಸಿದ್ದಪ್ಪ ಸನದಿ ಹಾಗೂ ಪುಂಡಲೀಕ ಮಾಯಣ್ಣವರ ಸೇರಿದಂತೆ ಊರಿನ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು.

ಕಮಲಾಪೂರ ರೈತರ ಸಮಸ್ಯೆಗೆ ಕೊನೆಗೂ ನ್ಯಾಯ

ಹತ್ತು ವರ್ಷಗಳಿಂದ ಪರಿಹಾರಕ್ಕಾಗಿ ಹೋರಾಟ: 95 ರೈತರಿಗೆ 54 ಕೋಟಿ ರೂ. ವಿತರಣೆ

ಬೆಳಗಾವಿ: ಬಳ್ಳಾರಿ ನಾಲಾ ಯೋಜನೆಯಡಿ ಭೂಮಿ ಕಳೆದುಕೊಂಡ ಕಮಲಾಪೂರ ಗ್ರಾಮದ ರೈತರು ಕಳೆದ ಹತ್ತು ವರ್ಷಗಳಿಂದ ಪರಿಹಾರಕ್ಕಾಗಿ ಹೋರಾಟ ನಡೆಸುತ್ತಿದ್ದರು. ಇದೀಗ 95 ರೈತರಿಗೆ ಒಟ್ಟು 54 ಕೋಟಿ ಪರಿಹಾರ ವಿತರಣೆ ಮಾಡಲಾಗಿದ್ದು, ರೈತರಿಗೆ ನ್ಯಾಯ ದೊರಕಿದಂತಾಗಿದೆ ಎಂದು ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಸೋಮವಾರ ಬೆಳಗಾವಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಮಲಾಪೂರ ಗ್ರಾಮದ 95 ರೈತರಿಗೆ ?54 ಕೋಟಿ ಪರಿಹಾರದ ಚೆಕ್ ವಿತರಿಸಿ ಅವರು ಮಾತನಾಡಿದರು. ಬಳ್ಳಾರಿ ನಾಲಾ ಯೋಜನೆಯಡಿ ಕಮಲಾಪೂರ ಗ್ರಾಮದ ರೈತರ ಭೂಮಿ ಮುಳುಗಡೆಯಾಗಿದ್ದರಿಂದ ಅನೇಕ ರೈತರು ತಮ್ಮ ಕೃಷಿಭೂಮಿಯನ್ನು ಕಳೆದುಕೊಂಡಿದ್ದರು. ಭೂಮಿ ಕಳೆದುಕೊಂಡ ರೈತರು ಕಳೆದ ಹತ್ತು ವರ್ಷಗಳಿಂದ ಪರಿಹಾರಕ್ಕಾಗಿ ಪ್ರಯತ್ನ ನಡೆಸುತ್ತಿದ್ದರು. ಅವರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಪರಿಹಾರ ದೊರಕಿಸಿಕೊಡುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದೀಗ 95 ರೈತರಿಗೆ 54 ಕೋಟಿ ಪರಿಹಾರ ವಿತರಣೆ ಮಾಡುತ್ತಿರುವುದು ಸಂತಸದ ಸಂಗತಿಯಾಗಿದೆ ಎಂದರು.ರೈತರು ತಮ್ಮ ಭೂಮಿಯನ್ನು ಕಳೆದುಕೊಂಡಾಗ ಅವರಿಗೆ ನ್ಯಾಯಯುತ ಪರಿಹಾರ ದೊರೆಯುವುದು ಅತ್ಯಂತ ಮುಖ್ಯ. ರೈತರ ಸಮಸ್ಯೆಗಳಿಗೆ ಸ್ಪಂದಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಕಮಲಾಪೂರ ಗ್ರಾಮದ ರೈತರ ದೀರ್ಘಕಾಲದ ಸಮಸ್ಯೆಗೆ ಪರಿಹಾರ ದೊರೆತಿರುವುದು ಸಂತೋಷ ತಂದಿದೆ. ರೈತರು ತಮ್ಮ ಹಕ್ಕಿನ ಪರಿಹಾರ ಪಡೆದುಕೊಂಡು ನೆಮ್ಮದಿಯ ಜೀವನ ನಡೆಸುವಂತಾಗಲಿ ಎಂದು ಆಶಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸಿಇಒ ರಾಹುಲ್ ಶಿಂಧೆ, ಅಪರ ಜಿಲ್ಲಾಧಿಕಾರಿ ವಿಜಯಕುಮಾರ್ ಹೊನಕೇರಿ, ಭೂಸ್ವಾಧೀನ ಆಡಳಿತಾಧಿಕಾರಿ ಶಿವಾನಂದ ಭಜಂತ್ರಿ, ಹಿಡಕಲ್ ಡ್ಯಾಮ್ ವಿಶೇಷ ಭೂಸ್ವಾಧೀನ ಅಧಿಕಾರಿ ಕೆ. ಚಂದ್ರಮೋಳಿ ಸೇರಿದಂತೆ ಕಮಲಾಪೂರ ಗ್ರಾಮದ ರೈತ ಮುಖಂಡರು ಉಪಸ್ಥಿತರಿದ್ದರು.



ಸಡಗರದ 71ನೇ ಕರ್ನಾಟಕ ರಾಜ್ಯೋತ್ಸವ

ಮುದ್ದೇಬಿಹಾಳ: ಮಾತೆ, ಮಾತೃಭಾಷೆ ಮತ್ತು ಮಾತೃಭೂಮಿಗೆ ದ್ರೋಹ ಬಗೆದವನು ತನ್ನ ಬದುಕಿನಲ್ಲಿ ಎಂದಿಗೂ ಪೂರ್ಣತೆಯನ್ನು ಕಾಣಲು ಸಾಧ್ಯವಿಲ್ಲ. ಪ್ರತಿಯೊಬ್ಬರೂ ತಮ್ಮ ತಾಯಿ, ತಾಯ್ನುಡಿ ಹಾಗೂ ತಾಯ್ನಾಡಿನ ಬಗ್ಗೆ ಗೌರವ ಮತ್ತು ಅಭಿಮಾನ ಹೊಂದಿರಬೇಕು ಎಂದು ಪ್ರೌಢಶಾಲೆಯ ಮುಖ್ಯಗುರು ರಾಮಚಂದ್ರ ಹೆಗಡೆ ಹೇಳಿದರು.

ಪಟ್ಟಣದ ಜ್ಞಾನಭಾರತಿ ವಿದ್ಯಾಮಂದಿರ ಪಾಠಶಾಲೆಯಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪ್ರತಿಯೊಬ್ಬರೂ ಮೊದಲು ತಮ್ಮ ಮಾತೃಭಾಷೆಯಲ್ಲಿ ಪ್ರೌಢಿಮೆ ಸಾಧಿಸಬೇಕು. ಮಾತೃಭಾಷೆಯಲ್ಲಿ ಉತ್ತಮ ಜ್ಞಾನ ಮತ್ತು ಹಿಡಿತ ಹೊಂದಿದಾಗ ಮಾತ್ರ ಅನ್ಯ ಭಾಷೆಗಳನ್ನು ಸಮರ್ಪಕವಾಗಿ ಕಲಿಯಲು ಸಾಧ್ಯವಾಗುತ್ತದೆ. ಮಾತೆ ಮತ್ತು ಮಾತೃಭಾಷೆಯನ್ನು ಗೌರವಿಸುವ ಮನೋಭಾವ ಪ್ರತಿಯೊಬ್ಬರಲ್ಲೂ ಸದಾ ಇರಬೇಕು. ನಮ್ಮ ಕನ್ನಡ ಭಾಷೆ ಅಪಾರ ಶಬ್ದಸಂಪತ್ತು, ಶ್ರೀಮಂತ ಇತಿಹಾಸ ಹಾಗೂ ವಿಶಿಷ್ಟ ಹಿರಿಮೆಯನ್ನು ಹೊಂದಿದೆ. ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಪ್ರತಿಯೊಬ್ಬರೂ ಅರಿತುಕೊಂಡು ಅವುಗಳನ್ನು ಉಳಿಸಿ ಬೆಳೆಸುವ ಕಾರ್ಯಕ್ಕೆ ಮುಂದಾಗಬೇಕು ಎಂದರು.

ಕನ್ನಡ ಪ್ರಾಥಮಿಕ ಶಾಲೆಯ ಮುಖ್ಯಗುರು ಎಸ್.ಎಸ್. ಹಂಜಗಿ ಅವರು ಕನ್ನಡ ನಾಡಿನ ಹಿರಿಮೆ ಸಾರುವ ಹಲವು ಗೀತೆಗಳನ್ನು ಹಾಡಿ ಅಧ್ಯಕ್ಷೀಯ ಮಾತುಗಳನ್ನಾಡಿದರು.

ಈ ಸಂದರ್ಭದಲ್ಲಿ ಆಂಗ್ಲ ವಿಭಾಗದ ಮುಖ್ಯಗುರುಮಾತೆ ರಂಜಿತಾ ಭಟ್ಟ, ಶಿಕ್ಷಕರಾದ ಆರ್.ಜೆ. ಸಾಗರ, ಸರಸ್ವತಿ ಮಡಿವಾಳರ, ಕಿರಣ ಕಡಿ, ಮಂಜುನಾಥ ಪಡದಾಳಿ, ಶಿವರಾಜ ಹತ್ತೂರ, ಎಂ.ವೈ. ಮ್ಯಾಗೇರಿ, ಅನ್ನಪೂರ್ಣ ನಾಗರಾಳ, ಅಕ್ಷತಾ ಮುಚಖಂಡಿ, ದಾನಮ್ಮ ಹಿರೇಮಠ, ಇಂದು ನಾಯಕ, ತ್ರಿವೇಣಿ ಕುಲಕರ್ಣಿ, ಮೀನಾಕ್ಷಿ ಗಣಾಚಾರಿ, ಗುರುಬಾಯಿ ತಂಗಡಗಿ, ಶಾಹಿನ ನಾಲತವಾಡ, ಭಾಗ್ಯ ಸಿದ್ದಾಪೂರ, ರಚನಾ ಕುಲಕರ್ಣಿ, ದೀಪಾ ಪೂಜಾರಿ ಇದ್ದರು.



ಗದಗನಲ್ಲಿ ಸಂಭ್ರಮದ ಕನ್ನಡ ರಾಜ್ಯೋತ್ಸವ: ಗಮನ ಸೆಳೆದ ಪಥ ಸಂಚಲನ

ಗದಗ: ಗದುಗಿನ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ರವಿವಾರ ರಾಜ್ಯದ ಉನ್ನತ ಶಿಕ್ಷಣ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಬಸವರಾಜ ರಾಯರಡ್ಡಿ ಅವರು 71 ನೇಯ ಕನ್ನಡ ರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಸಾರ್ವಜನಿಕ ಧ್ವಜಾರೋಹಣ ನೆರವೇರಿಸಿ ವಿವಿಧ ದಳಗಳ ವೀಕ್ಷಣೆ ಮಾಡಿದರು.

ಆಕರ್ಷಕ ಪಥಸಂಚಲನದ ಮಾರ್ಗದರ್ಶನವನ್ನು ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಮಿಥುನ್ ಎಚ್. ಎನ್, ಡಿಆರ್ ಡಿಎಸ್ ಪಿ ವಿದ್ಯಾನಂದ ನಾಯಕ, ಡಿಎ ಆರ್‌ಆರ್‌ಪಿಐ ಶಂಕರಗೌಡ ಚೌದರಿ ವಹಿಸಿದ್ದರು. ಆಕರ್ಷಕ ಪಥಸಂಚಲನದ ನೇತೃತ್ವವನ್ನು ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ನಾಯಕತ್ವವನ್ನು ಬಿಷ್ಟಪ್ಪ ತಳವಾರ ವಹಿಸಿದ್ದರು. ನಾಗರಿಕ ಪೊಲೀಸ ಪಡೆಯ ನೇತೃತ್ವವನ್ನು ಕು. ಸುಧಾ ಹಲಕಿ , ಗೃಹ ರಕ್ಷಕ ದಳದ ನೇತೃತ್ವವನ್ನು ಎಂ. ಎನ್ ವಸ್ತ್ರದ, ಅಗ್ನಿ ಶಾಮಕ ಪಡೆಯ ನೇತೃತ್ವವನ್ನು ಮಂಜುನಾಥ ಮೇಲ್ಮನಿ, ಅರಣ್ಯ ರಕ್ಷಕ ಪಡೆಯ ನೇತೃತ್ವವವನ್ನು ಸಚಿನ್ ಬಿಸನಹಳ್ಳಿ, ಮಾಜಿ ಸೈನಿಕರ ತಂಡದ ನೇತೃತ್ವವನ್ನು ಬಸಲಿಂಗಪ್ಪ ಅಂಗಡಿ, ಎನ್.ಸಿ.ಸಿ. ಸೀನಿಯರ್ ಬಾಯ್ಸ್ ದಳದ ನೇತೃತ್ವವನ್ನು ಅಶ್ವಿನಿ ತಿರ್ಲಾಪುರ, ಗೈಡ್ ನೇತೃತ್ವವನ್ನು ಗದಗನ ಕೆ.ಎಲ್.ಇ. ಬಾಲಕಿಯರ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಕು. ಸಾನ್ವಿ ಚನ್ನಪ್ಪಗೌಡರ, ಸಾಮಾನ್ಯ ವಿಭಾಗದ ನೇತೃತ್ವವನ್ನು ಬೆಟಗೇರಿಯ ಸೇಂಟ್ ಜಾನ ಹಿರಿಯ ಪ್ರಾಥಮಿಕ ಶಾಲೆಯ ಕು. ವಿಶ್ವೇಶ ಹಿರೇಮಠ, ಗೈಡ್ ನೇತೃತ್ವವನ್ನು ಅಕ್ಷರ ಟೆಕ್ನೋ ಬಾಲಕಿಯ ಪ್ರೌಢಶಾಲೆಯ ತನುಶ್ರೀ ಪಾಲನಕರ , ಸಾಮಾನ್ಯ ವಿಭಾಗದ ನೇತೃತ್ವನ್ನು ಲೊಯಲಾ ಬಾಲಕರ ಪ್ರೌಢಶಾಲೆ ಬೆಟಗೇರಿಯ ಭರತ ಸಿಂಗ್ ಕೆ ದೊಡ್ಡಮನಿ, ಭಾರತ ಸೇವಾ ದಳದ ನೇತೃತ್ವವನ್ನು ಸರ್ಕಾರಿ ಪ್ರೌಢಶಾಲೆ ಎಸ್.ಎಂ. ಕೃಷ್ಣಾ ನಗರದ ಕು. ನಿಖಿತಾ ಹರಿಜನ, ಸ್ಕೌಟ್ಸ್ ವಿಭಾಗದ ನೇತೃತ್ವವನ್ನು ಗದಗ ಕೆ.ಎಲ್.ಇ ಬಾಲಕರ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಕು. ಪರೀಕ್ಷಿತ ದೊಡ್ಡಮನಿ ವಹಿಸಿದ್ದರು.

ಸಾಮಾನ್ಯ ವಿಭಾಗಗಳಲ್ಲಿ ಗದಗನ ರಾಯಲ್ ಬಾಲಕರ ಪ್ರೌಢಶಾಲೆಯ ಕು. ಮೊಹಮ್ಮದ ನಸೀಮುದ್ದಿನ ದಾಲಾಯತ, ಗದಗನ ಸಿಡಿಒ ಜೈನ್ ಪ್ರೌಢಶಾಲೆಯ ಕು. ಫಿರೋಜಾಖಾನ್ ಪಠಾಣ, ಗದಗನ ಜಗದ್ಗುರು ತೋಂಟದಾರ್ಯ ಬಾಲಕಿಯರ ಪ್ರೌಢಶಾಲೆಯ ಕು. ಇಂದುಶ್ರೀ ದುಂಡಸಿ, ಗದಗನ ಕೆ.ವಿ.ಎಸ್.ಆರ್. ಕನ್ನಡ ಮಾಧ್ಯಮ ಬಾಲಕಿಯರ ಪ್ರೌಢಶಾಲೆಯ ಕು. ಸ್ಪಂದನಾ ಗಗನದ, ಬೆಟಗೇರಿಯ ಬಾಸೆಲ ಮಿಷನ್ ಪ್ರೌಢಶಾಲೆಯ ಕು. ವಿಶ್ವ ದೇವರಕೊಂಡಿ, ಬೆಟಗೇರಿಯ ಶರಣಬಸವೇಶ್ವರ ಪ್ರೌಢಶಾಲೆಯ ಕು. ಆಕಾಶ ಮೇದಾರ, ಗದಗನ ಗುರುಬಸವ ಪ್ರೌಢಶಾಲೆಯ ಕು. ಸೌಜನ್ಯಾ ಹಿರೇಮಠ, ಗದಗನ ಪಾರ್ಶ್ವನಾಥ ಬಾಲಕರ ಪ್ರೌಢಶಾಲೆಯ ಕು. ವಿರುಪಾಕ್ಷ ಹೊಂಬಾಳಿ ವಹಿಸಿದ್ದರು. ಎನ್.ಸಿ.ಸಿ.ವಿಭಾಗದ ನೇತೃತ್ವವನ್ನು ಗದಗನ 38 ಕೆ ಎ ಆರ್ ಬಟಾಲಿಯ ಬಾಲಕರ ತಂಡದ ಕು. ಆಕಾಶ ರಾಜೂರ ಅವರು ವಹಿಸಿದ್ದರು.

ಸ್ತಬ್ದ ಚಿತ್ರ ಪ್ರದರ್ಶನದಲ್ಲಿ ವಿವಿಧ ಇಲಾಖೆಯ ಸ್ತಬ್ದ ಚಿತ್ರಗಳು ಪಾಲ್ಗೊಂಡಿದ್ದು ಆ ಪೈಕಿ ಕೆಎಸ್‌ಆರ್‌ಟಿಸಿ ಪ್ರಥಮ, ಸಮಾಜ ಕಲ್ಯಾಣ ಇಲಾಖೆ ದ್ವಿತೀಯ ಹಾಗೂ ಮಹಿಳಾ ಮತ್ತು ಮಕ್ಕಳ ಇಲಾಖೆ ತೃತೀಯ ಸ್ಥಾನ ಪಡೆದರು.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿವಿಧ ಶಾಲೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದು ಆ ಪೈಕಿ ಶಾಸ್ತ್ರೀಜಿ ಪ್ರೌಢಶಾಲೆ ಪ್ರಥಮ, ಬಸವೇಶ್ವರ ಇಂಗ್ಲೀಷ್ ಮಾಧ್ಯಮ ಪ್ರೌಢಶಾಲೆ ದ್ವಿತೀಯ ಹಾಗೂ ಗದಗನ ಲಯನ್ಸ್ ಪ್ರೌಢಶಾಲೆ ತೃತೀಯ ಸ್ಥಾನ ಪಡೆದರು.

71ನೆಯ ಕರ್ನಾಟಕ ರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರನ್ನು ಗುರುತಿಸಿ ಜಿಲ್ಲಾಡಳಿತದಿಂದ ಸನ್ಮಾನಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರಡ್ಡಿ ಸೇರಿದಂತೆ ಇತರೆ ಗಣ್ಯರು ಸನ್ಮಾನ ಸಮಾರಂಭದಲ್ಲಿ ಪಾಲ್ಗೊಂಡರು.

ಸಮಾರಂಭದಲ್ಲಿ ಶಾಸಕರಾದ ಡಾ.ಎಚ್.ಕೆ.ಪಾಟೀಲ, ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ,ನಗರಾಬಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕಬರಸಾಬ ಬಬರ್ಜಿ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮುಕುಲ್ ಜೈನ್, ಡಿಎಫ್‌ಓ ಸಂತೋಷಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಿಥುನ್ ಎಚ್.ಎನ್, ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್, ಎಸಿ ಗಂಗಪ್ಪ ಎಂ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಜನಪ್ರತಿನಿಧಿಗಳು, ಗಣ್ಯರುಗಳು, ಸಾರ್ವಜನಿಕರು, ಅಪಾರ ಸಂಖ್ಯೆಯಲ್ಲಿ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.





ರೈತರ ಹೋರಾಟಕ್ಕೆ ಸಂಪೂರ್ಣ ಬೆಂಬಲ

71ನೇ ಕರ್ನಾಟಕ ರಾಜ್ಯೋತ್ಸವ: ಸವದತ್ತಿ ಅಭಿವೃದ್ಧಿಗೆ ಆದ್ಯತೆ: ಶಾಸಕ ವಿಶ್ವಾಸ ವೈದ್ಯ ಭರವಸೆ

ಸವದತ್ತಿ: ಮಳೆಯ ಅಭಾವದಿಂದ ಬರಗಾಲ ಸಂಭವಿಸಿದ್ದು ರೈತರು ತುಂಬಾ ಸಂಕಷ್ಟದಲ್ಲಿದ್ದಾರೆ. ಕಬ್ಬಿನ ದರ ನಿಗದಿಗೆ ರೈತರ ಹೋರಾಟ ನಡೆಯುತ್ತಿದ್ದು ಅವರಿಗೆ ಬೆಂಬಲ ವ್ಯಕ್ತಪಡಿಸಿ ರೈತರ ಸಂಕಷ್ಟಗಳನ್ನು ರಾಜ್ಯ ಸರ್ಕಾರದ ಗಮನಕ್ಕೆ ತಂದು ಪರಿಹಾರ ಕಲ್ಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಶಾಸಕ ವಿಶ್ವಾಸ್ ವೈದ್ಯ ಭರವಸೆ ನೀಡಿದರು.

ಇಲ್ಲಿನ ಎಸ್.ಕೆ. ಹೈಸ್ಕೂಲ್ ಮೈದಾನದಲ್ಲಿ ತಾಲೂಕು ಆಡಳಿತದ ವತಿಯಿಂದ ನಡೆದ 71ನೇ ಕರ್ನಾಟಕ ರಾಜ್ಯೋತ್ಸವದಲ್ಲಿ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ವೀರರಾಣಿ ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರಂತಹ ವೀರರನ್ನು ಪಡೆದ ನಾಡು ನಮ್ಮದು. ರೇಷ್ಮೆ, ಕಾಫಿ ಬೆಳೆಯಲ್ಲಿ ಮುಂಚೂಣಿಯಲ್ಲಿರುವ ಪುಣ್ಯಭೂಮಿ ನಮ್ಮ ಕರ್ನಾಟಕ. ನಮ್ಮ ಕನ್ನಡಿಗರು ರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿ ದೇಶಕ್ಕೆ ಹೆಮ್ಮೆ ತಂದಿದ್ದಾರೆ. ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಕರ್ತವ್ಯ ನಮ್ಮದು ಎಂದ ಅವರು ನಗರದಲ್ಲಿ ಈಗಾಗಲೇ ರಸ್ತೆ ಅಭಿವೃದ್ಧಿ ಒಳಚರಂಡಿ ಕಾಮಗಾರಿಗಳು ನಡೆದಿವೆ. ಸುಮಾರು 6 ಕೋಟಿ ವೆಚ್ಚದಲ್ಲಿ ತರಕಾರಿ, ಮಾಂಸ ಮತ್ತು ಮೀನಿನ ಮಾರುಕಟ್ಟೆ, ಹೂವಿನ ಮಾರುಕಟ್ಟೆಗಳನ್ನು ಒಂದೆಡೆ ಸ್ಥಾಪಿಸುವ ಯೋಜನೆ ರೂಪಿಸಿದ್ದು ಸದ್ಯದಲ್ಲೇ ಕಾಮಗಾರಿ ಪ್ರಾರಂಭವಾಗಲಿದೆ. ಕನ್ನಡ ನಾಡಿನ ಕಲೆ, ಸಂಸ್ಕೃತಿ, ಭಾಷೆ, ನೆಲ, ಜಲ ಸಂರಕ್ಷಣೆ ಸೇರಿದಂತೆ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ಸರ್ಕಾರ ಶ್ರಮಿಸುತ್ತಿದ್ದು ಕ್ಷೇತ್ರದ ಅಭಿವೃದ್ಧಿಗಾಗಿ ಸಾಕಷ್ಟು ಯೋಜನೆಗಳು ರೂಪಗೊಂಡಿವೆ ಎಂದರು.

ತಹಶೀಲ್ದಾರ ಮಲ್ಲಿಕಾರ್ಜುನ ಹೆಗ್ಗಣ್ಣವರ ಮಾತನಾಡಿ, ಕನ್ನಡ ಅತ್ಯಂತ ಶ್ರೀಮಂತ ಭಾಷೆಯಾಗಿದ್ದು, ನಮ್ಮ ಕನ್ನಡ ಭಾಷೆಗೆ ಸುಮಾರು 2000 ವರ್ಷದ ಇತಿಹಾಸವಿದೆ. ಕರ್ನಾಟಕವು ವಿಶ್ವದ ಭೂಪಟದಲ್ಲಿ ವಿಶಿಷ್ಟ ವಿನ್ಯಾಸ ಹೊಂದಿರುವುದರ ಜೊತೆಗೆ ವೈವಿಧ್ಯಮಯ ಭೌಗೋಳಿಕ ಲಕ್ಷಣಗಳು, ನೈಸರ್ಗಿಕ ಸಂಪತ್ತು ಹಾಗೂ ಸಮೃದ್ಧ ಸಾಹಿತ್ಯ ಪರಂಪರೆಯನ್ನು ಹೊಂದಿದೆ ಎಂದರು.

ತಾಪಂ ಇಒ ಆನಂದ ಬಡಕುಂದ್ರಿ ಮಾತನಾಡಿ, ಕನ್ನಡ ಭಾಷೆಗೆ ಅನೇಕ ಸಾಹಿತಿಗಳು, ವಚನಕಾರರು, ದಾಸರು, ಕವಿಗಳು ಭದ್ರ ಬುನಾದಿ ಹಾಕಿದ್ದಾರೆ. ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದ ನಾಡು ನಮ್ಮದು. ಇಂಗ್ಲೀಷ್ ಭಾಷೆಯ ವ್ಯಾಮೋಹ ಮರೆತು ಕನ್ನಡ ಭಾಷೆಯ ಬಗ್ಗೆ ಒತ್ತು ಕೊಡಬೇಕು ಎಂದರು.

ಇದಕ್ಕೂ ಮೊದಲು ಶಾಸಕ ವಿಶ್ವಾಸ ವೈದ್ಯ ಅವರು ತಹಶೀಲ್ದಾರ್ ಕಚೇರಿಯಲ್ಲಿ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಭವ್ಯ ಮೆರವಣಿಗೆಗೆ ಚಾಲನೆ ನೀಡಿದರು.

ಶಾಲಾ ಮಕ್ಕಳು, ಎಲ್ಲ ದಳಗಳು, ಅಧಿಕಾರಿಗಳು, ನಾಗರಿಕರು ಮೆರವಣಿಗೆಯಲ್ಲಿ ಪಾಲ್ಗೊಂಡರು. ತಹಶೀಲ್ದಾರ ಕಚೇರಿಯಿಂದ ಸಾಗಿದ ಮೆರವಣಿಗೆ ಎಸ್ ಎಲ್ ಎ ಒ ಕ್ರಾಸ್, ಸಂಗೊಳ್ಳಿ ರಾಯಣ್ಣ ವೃತ್ತ, ಗಾಂಧಿ ಚೌಕ, ಆನಿ ಅಗಸಿ, ಕಟಕೋಳ ಬ್ಯಾಂಕ್, ಲಿಂಗರಾಜ್ ಸರ್ಕಲ್ ಮಾರ್ಗವಾಗಿ ಎಸ್ ಕೆ ಹೈಸ್ಕೂಲ್ ಮೈದಾನದ ಸಭಾಂಗಣ ತಲುಪಿತು. ಮುದ್ದು ಮಕ್ಕಳಿಂದ ಪ್ರಾರ್ಥನೆ ಗೀತೆ, ನಾಡಗೀತೆ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನಿಸಲಾಯಿತು.

ಈ ವೇಳೆ ಗ್ರೇಡ್ 2 ತಹಶೀಲ್ದಾರ ಎಂ ಎನ್ ಮಠದ, ಕ್ಷೇತ್ರ ಶಿಕ್ಷಣಾಧಿಕಾರಿ ಎ ಎ ಖಾಜಿ, ನಗರಸಭೆ ಪೌರಾಯುಕ್ತ ಸಂಗನಬಸಯ್ಯ ಗದಗಿಮಠ, ಆರೋಗ್ಯಧಿಕಾರಿ ಶ್ರೀಪಾದ ಸಬನಿಸ್, ಎಪಿಎಂಸಿ ಅಧ್ಯಕ್ಷ ಚಂದ್ರು ಪೂಜೇರ, ಅಕ್ಷರ ದಾಸೋಹ ಅಧಿಕಾರಿ ಮೈತ್ರಾದೇವಿ ವಸ್ತ್ರದ, ಸಮಾಜ ಕಲ್ಯಾಣಾಧಿಕಾರಿ ಆರ್ ಆರ್ ಕುಲಕರ್ಣಿ, ಕೃಷಿ ಸಹಾಯಕ ನಿರ್ದೇಶಕ ಶಿವಪ್ರಕಾಶ ಪಾಟೀಲ್, ಗ್ಯಾರಂಟಿ ಯೋಜನೆ ಅಧ್ಯಕ್ಷ ಶಿವಕುಮಾರ್ ರಾಠೋಡ ಸೇರಿ ಪ್ರಮುಖರು ಇದ್ದರು.



ಮಬನೂರ: ಸಾಮೂಹಿಕ ವಿವಾಹ ಸಮಾರಂಭ


ಯರಗಟ್ಟಿ: ಮಾಧವಾನಂದ ಪ್ರಭೂಜಿ ಅವರು ಸರ್ವ ಧರ್ಮಿಯರನ್ನು ಸಮಾನ ಭಾವದಿಂದ ಕಾಣುವ ಮೂಲಕ ಸಮಾನತೆಯ ಸಂದೇಶ ಸಾರಿದ್ದಾರೆ ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಎಲ್ಲರೂ ಅಳವಡಿಸಿಕೊಳ್ಳಬೇಕು ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಸಮೀಪದ ಮಬನೂರ ಗ್ರಾಮದ ಮಾಧವಾನಂದ ಪ್ರಭೂಜಿಯವರ ಆಶ್ರಮದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಮಾಧವಾನಂದ ಪ್ರಭೂಜಿಯವರ 111 ನೇ ಜಯಂತ್ಯೋತ್ಸವ ಹಾಗೂ ಕರೆಪ್ಪ ಮಹಾರಾಜರ 8ನೇ ಪುಣ್ಯಸ್ಮರಣೋತ್ಸವ, ತೊಟ್ಟಿಲು ಪೂಜೆ, ಸಾಮೂಹಿಕ ವಿವಾಹ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿ, ಮಾಧವಾನಂದ ಪ್ರಭೂಜಿಯವರ ದೇವಸ್ಥಾನದ ಆವರಣದಲ್ಲಿ 50 ಲಕ್ಷ ವೆಚ್ಚದ ಕಲ್ಯಾಣಮಂಟಪ, ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಉಗ್ರಾಣ ನಿರ್ಮಾಣಕ್ಕೆ 50 ಲಕ್ಷ ಅನುದಾನ, ಹಾಲಜ್ಜನ ದೇವಸ್ಥಾನ ಜೀರ್ಣೋದ್ದಾರಕ್ಕೆ 10 ಲಕ್ಷ ಪಾಂಡುರಂಗ ವಿಠ್ಠಲ ದೇವಸ್ಥಾನ ಜೀರ್ಣೋದ್ದಾರಕ್ಕೆ 25 ಲಕ್ಷ ಅನುದಾನ ನೀಡುವದಾಗಿ ಭರವಸೆ ನೀಡಿದರು.

ಗ್ರಾಮಸ್ಥರ ಸಹಕಾರದಿಂದ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಮುನವಳ್ಳಿ ಸೋಮಶೇಖರ ಮಠದ ಮುರುಘೇಂದ್ರ ಸ್ವಾಮೀಜಿ ಮಾತನಾಡಿ, ಏಕತೆಯಿಂದ ಬದುಕುವ ಮೂಲಕ ಜಗತ್ತು ಅಜರಾಮರವಾಗಿ ಬೆಳೆಯುತ್ತಿದೆ. ಇಂಚಗೇರಿ ಮಾಧವಾನಂದರು ಎಲ್ಲ ಜಾತಿಯವರನ್ನು ಒಗ್ಗುಡಿಸಿಕೊಂಡು ಮಹಾತ್ಮ ಗಾಂಧೀಜಿ ಹಾಗೂ ಜವಹರಲಾಲ ನೆಹರು ಅವರ ಜತೆ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಕ್ರಾಂತಿಕಾರಿ ಎಂದರು.

ಇಂಚಗೇರಿಮಠದ ಶ್ರೀ ಪ್ರಭುಜಿ ಮಹಾರಾಜರು ಸಾನ್ನಿದ್ಯ ವಹಿಸಿದ್ದರು, ಕರೆಪ್ಪ ಮುರಗೋಡ ಮಾಜಿ ಗ್ರಾಪಂ ಸದಸ್ಯ ಅಧ್ಯಕ್ಷತೆ ವಹಿಸಿದ್ದರು.

ಜಿಪಂ ಮಾಜಿ ಸದಸ್ಯ ಫಕೀರಪ್ಪ ಹದ್ದನ್ನವರ, ಗ್ರಾಪಂ ಮಾಜಿ ಅಧ್ಯಕ್ಷ ಪುಂಡಲೀಕ ಮೇಟಿ, ರಾಮಚಂದ್ರ ಪಟಾತ, ಸವದತ್ತಿ ಎಪಿಎಂಸಿ ಅಧ್ಯಕ್ಷ ಚಂದ್ರು ಜಂಬ್ರಿ, ಉಪಾಧ್ಯಕ್ಷ ಮಾರುತಿ ಬಸಳಿಗುಂದಿ, ಯರಗಟ್ಟಿ ಎಪಿಎಂಸಿ ಉಪಾಧ್ಯಕ್ಷ ಸಿದ್ದಾರೂಢ ಬಿಲಕಂಚಿ, ಮದ್ಲೂರ ಗ್ರಾಪಂ ಮಾಜಿ ಅಧ್ಯಕ್ಷ ಲಕ್ಷ್ಮಣ ಹೊಟ್ಟಿನವರ, ಸಿದ್ದಪ್ಪ ಮುರಗೋಡ, ಬೀಮಪ್ಪ ಮುರಗೋಡ, ಸೇರಿದಂತೆ ಇತರರಿದ್ದರು. ಮುತ್ತಪ್ಪ ಮುರಗೋಡ ನಿರೂಪಿಸಿ ವಂದಿಸಿದರು.



ಆದರ್ಶಗಳ ಮೂಲಕ ವಿಶ್ವಕ್ಕೆ ದಾರಿದೀಪವಾದವರು ಮಹರ್ಷಿ ವಾಲ್ಮೀಕಿ: ಕಾಶಪ್ಪನವರ

ಬಾಗಲಕೋಟೆ: ಮಹರ್ಷಿ ವಾಲ್ಮೀಕಿ ಅವರು ತಮ್ಮ ಜ್ಞಾನ, ತಪಸ್ಸು, ಚಿಂತನೆ ಹಾಗೂ ಆದರ್ಶಗಳ ಮೂಲಕ ಇಡೀ ವಿಶ್ವಕ್ಕೆ ದಾರಿದೀಪವಾಗಿದ್ದಾರೆಂದು ಸಣ್ಣ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿಜಯಾನಂದ ಕಾಶಪ್ಪನವರ ಹೇಳಿದರು.

ನವನಗರದ ಮಹರ್ಷಿ ವಾಲ್ಮೀಕಿ ಭವನದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಮಾತನಾಡಿದ ಅವರು ವಾಲ್ಮೀಕಿಯವರು ರಚಿಸಿದ ರಾಮಾಯಣವು ಕೇವಲ ಒಂದು ಮಹಾಕಾವ್ಯವಲ್ಲ. ಮಾನವೀಯ ಮೌಲ್ಯಗಳು, ಸತ್ಯ, ಧರ್ಮ, ಕರ್ತವ್ಯ, ತ್ಯಾಗ ಹಾಗೂ ಸಾಮಾಜಿಕ ಬದುಕಿನ ಆದರ್ಶಗಳನ್ನು ಸಾರುವ ವಿಶ್ವದ ಅಮೂಲ್ಯ ಗ್ರಂಥವಾಗಿದೆ ಎಂದರು.

ಮಹರ್ಷಿ ವಾಲ್ಮೀಕಿ ಅವರು ತಮ್ಮ ಬದುಕಿನ ಪರಿವರ್ತನೆ ಮೂಲಕ ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಿದ್ದಾರೆ. ಯಾವುದೇ ವ್ಯಕ್ತಿಯ ಬದುಕಿನಲ್ಲಿ ಬದಲಾವಣೆ ಸಾಧ್ಯ ಎಂಬುದನ್ನು ವಾಲ್ಮೀಕಿ ಅವರ ಜೀವನ ನಮಗೆ ತಿಳಿಸಿಕೊಡುತ್ತದೆ. ಪರಿಶ್ರಮ, ಜ್ಞಾನ, ಆತ್ಮವಿಶ್ವಾಸ ಹಾಗೂ ಉತ್ತಮ ಚಿಂತನೆಯ ಮೂಲಕ ವ್ಯಕ್ತಿ ತನ್ನ ಬದುಕನ್ನು ಮಾತ್ರವಲ್ಲದೇ ಸಮಾಜವನ್ನು



ಪರಿವರ್ತಿಸಬಹುದು ಎಂಬ ಸಂದೇಶವನ್ನು ನೀಡಿದ್ದಾರೆ. ರಾಮಾಯಣದ ಮೂಲಕ ಶ್ರೀರಾಮನ ಆದರ್ಶ ಬದುಕನ್ನು ಜಗತ್ತಿಗೆ ಪರಿಚಯಿಸಿದ ವಾಲ್ಮೀಕಿ ಅವರು ಸತ್ಯ, ನ್ಯಾಯ, ಸಹೋದರತ್ವ, ತ್ಯಾಗ ಹಾಗೂ ಮಾನವೀಯತೆಯ ಮಹತ್ವವನ್ನು ಸಾರಿದ್ದಾರೆ ಎಂದು ಸಚಿವರು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಮಾತನಾಡಿ ಮಹರ್ಷಿ ವಾಲ್ಮೀಕಿಯವರ ಸಂದೇಶಗಳು ಒಂದು ಸಮುದಾಯಕ್ಕೆ ಮಾತ್ರ ಸೀಮಿತವಾಗಿಲ್ಲ. ಅವರ ಸಾಹಿತ್ಯ ಹಾಗೂ ಚಿಂತನೆಗಳು ಇಡೀ ಮಾನವಕುಲಕ್ಕೆ ಸೇರಿದವು. ಸತ್ಯ ಮತ್ತು ಧರ್ಮದ ಮಾರ್ಗದಲ್ಲಿ ನಡೆಯುವುದು, ಸಮಾಜದಲ್ಲಿ ಎಲ್ಲರನ್ನೂ ಸಮಾನವಾಗಿ ಕಾಣುವುದು ಹಾಗೂ ದುರ್ಬಲರ ನೆರವಿಗೆ ನಿಲ್ಲುವುದು ವಾಲ್ಮೀಕಿ ಅವರ ಬದುಕಿನ ಪ್ರಮುಖ ಸಂದೇಶವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಬಾಗಲಕೋಟೆ ಶಾಸಕ ಉಮೇಶ ಮೇಟಿ ಮಾತನಾಡಿ ಮಹರ್ಷಿ ವಾಲ್ಮೀಕಿ ಅವರನ್ನು ವಿಶ್ವದ ಆದಿಕವಿ ಎಂದು ಕರೆಯಲಾಗುತ್ತಿದೆ. ಅವರ ಜೀವನವೇ ಒಂದು ದೊಡ್ಡ ಸಂದೇಶ. ಒಬ್ಬ ವ್ಯಕ್ತಿ ತನ್ನ ಬದುಕಿನಲ್ಲಿ ಎಂತಹ ಪರಿವರ್ತನೆ ಮಾಡಿಕೊಳ್ಳಬಹುದು ಎಂಬುದಕ್ಕೆ ವಾಲ್ಮೀಜಿ ಅವರು ಅತ್ಯುತ್ತಮ ಉದಾಹರಣೆ. ಜ್ಞಾನ ಮತ್ತು ಸತ್ಕಾರ್ಯಗಳ ಮೂಲಕ ವ್ಯಕ್ತಿಯ ಬದುಕು ಬದಲಾಗಬಹುದು ಎಂಬುದನ್ನು ಅವರು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ ಎಂದರು. ಉಪನ್ಯಾಸಕರಾಗಿ ಆಗಮಿಸಿದ್ದ ನಿವೃತ್ತ ನ್ಯಾಯಾಧೀಶ ಡಿ.ವಾಯ್.ಬಸಾಪೂರ ಮಾತನಾಡಿ ಮಹರ್ಷಿ ವಾಲ್ಮೀಕಿಯವರು ಕವಿಯಾಗಿ, ಋಷಿಯಾಗಿ ಮಹಾಕಾವ್ಯವಾದ ರಾಮಾಯಣವನ್ನು ರಚಿಸುವ ಮೂಲಕ ವಿಶ್ವ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ರಾಮಾಯಣದಲ್ಲಿ ಬರುವ ಪ್ರತಿಯೊಂದು ಪಾತ್ರವೂ ಒಂದೊಂದು ಮೌಲ್ಯವನ್ನು ಪ್ರತಿಬಿಂಬಿಸುತ್ತವೆ ಎಂದರು. ಸಮುದಾಯದ ಮುಖಂಡ ಆರ್.ಜಿ.ಸನ್ನಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಶಾಸಕ ಹನಮಂತ ನಿರಾಣಿ, ಗ್ಯಾರಂಟಿ ಯೋಜನೆಯ ಜಿಲ್ಲಾ ಅಧ್ಯಕ್ಷ ಅನೀಲ ದಡ್ಡಿ, ಬುಡಾದ ಅಧ್ಯಕ್ಷ ಅಬ್ದುಲರಜಾಕ ಬೇನೂರ, ಗ್ಯಾರಂಟಿ ಯೋಜನೆ ತಾಲೂಕಾ ಅಧ್ಯಕ್ಷ ಎಸ್.ಎಂ.ರಾಂಪೂರ, ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಸಿಇಓ ಗಜಾನನ ಬಾಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸದಾಶಿವ ಬಡಿಗೇರ, ಸಮುದಾಯದ ಮುಖಂಡರಾದ ದ್ಯಾಮಣ್ಣ ಗಾಳಿ, ರಾಜು ನಾಯ್ಕರ ಸೇರಿದಂತೆ ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮ ಪೂರ್ವದಲ್ಲಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರದ ಅದ್ದೂರಿ ಮೆರವಣಿಗೆ ಜರುಗಿತು.

ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ: ಅದ್ದೂರಿ ಭಾವಚಿತ್ರದ ಮೆರವಣಿಗೆ

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ

ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗೆ ಜಡಗಣ್ಣ ಬಾಲಣ್ಣ ಹೆಸರಿನಲ್ಲಿ ನೀಡುವ ಪುರಸ್ಕಾರವನ್ನು ಸೃಷ್ಠಿ ಆನಂದ ಕೇರಿಕಾರ್ ಅವರಿಗೆ ನೀಡಲಾಯಿತು. ಅಲ್ಲದೇ 2025-26ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಶ್ರದ್ಧಾ ಕಟಗಿ, ಸಾನಿಕಾ ಮರೆನ್ನವರ, ಪೃಥ್ವಿ ಪೂಜಾರ, ಪಿಯುಸಿ ದ್ವಿತೀಯ ವರ್ಷದ ಕಲಾವಿಭಾಗದಲ್ಲಿ ಲಕ್ಷ್ಮೀ ದಳವಾಯಿ, ಕೃತೀಕಾ ಬಿಸನಾಳ, ಭೀಮವ್ವ ದಟ್ಟಂಡಿ, ವಾಣಿಜ್ಯ ವಿಭಾಗದಲ್ಲಿ ಹನಮವ್ವ ಕಡ್ಡೇನ್ನವರ, ಭೀಮವ್ವ ಡಿವಟಗಿ, ಸುಶ್ಮೀತಾ ಮೇದಾರ, ವಿಜ್ಞಾನ ವಿಭಾಗದಲ್ಲಿ ಪ್ರಶಾಂತ ಕಳಸದ, ಸಮರ್ಥ ಮೇದಾರ ಪ್ರಸನ್ನಕುಮಾರ ಗಾಡಗೋಳಿ ಅವರನ್ನು ಸನ್ಮಾನಿಸಲಾಯಿತು.

ಬಂಜಾರಾ ಕಲಾವಿದರಿಂದ ಅರ್ಜಿ ಆಹ್ವಾನ

ಹುಬ್ಬಳ್ಳಿ: 2026-27ನೇ ಸಾಲಿನಲ್ಲಿ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ ಧಾರವಾಡ ವಲಯ ವ್ಯಾಪ್ತಿಯ ಧಾರವಾಡ, ಬೆಳಗಾವಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಬಂಜಾರ ಸಮುದಾಯದ ಸಾಂಪ್ರದಾಯಿಕ ಬಂಜಾರರ ಸಂಸ್ಕೃತಿ ಮತ್ತು ಕಲೆಗಳನ್ನು ಉಳಿಸಿ-ಬೆಳೆಸಿ, ಪುನಶ್ಚೇತನಗೊಳಿಸುವ ಉದ್ದೇಶದಿಂದ ಮತ್ತು ಬಂಜಾರ ಕಲಾವಿದರ ಪ್ರತಿಭೆಯನ್ನು ಹೊರಹೊಮ್ಮಿಸಲು ಬಂಜಾರರ ಬಹುಮುಖಿ ಕಲಾ ಪ್ರತಿಭಾನ್ವೇಷಣೆ (ಕಲಾ ಮಳಾವ್) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಬಂಜಾರ ಸಮುದಾಯದ ಬಹುಮುಖಿ ಕಲಾ ಪ್ರಕಾರಗಳಾದ ವಾಜಾವಾದ್ಯ, ಕಲೆ, ಮಹಿಳೆಯರ ಸಾಂಪ್ರದಾಯಕ ಗಾಯನ ಮತ್ತು ನೃತ್ಯ, ಬಂಜಾರರ ಜಾನಪದ ನೃತ್ಯ, ಬಂಜಾರಾ ಯುವತಿಯರ ಘೂಮರ್ ನೃತ್ಯ, ಪುರುಷರ ಲೇಂಗಿ ನೃತ್ಯ, ನಂಗಾರ ಠೋಳಿಬಿಡಿಸುವ ನೃತ್ಯ, ಕಥನ ಗಾಯನ (ಸಣ್ಣವಾಜಾ), ಬಂಜಾರ ಮಹಿಳೆಯರ ಸಾಂಪ್ರದಾಯಕ ಗಾಯನ (ವಳಂಗ, ಮೇಹಂದಿ, ಡೋರಣ್ & ಆರತಿ ಗೀತೆ), ಬಂಜಾರರ ಸುಗಮ ಸಂಗೀತ (ಭಕ್ತಿಗೀತೆ, ಭಾವಗೀತೆ & ಜಾನಪದ ಗೀತೆ), ಬಂಜಾರ ಬಾಲಕರ ಕಲಾ ನೃತ್ಯ (ಲೇಂಗಿ ಕಥನಾ ಗಾಯನ ಇತ್ಯಾದಿ), ಬಂಜಾರ ಬಾಲಕಿಯರ ಕಲಾ ನೃತ್ಯ, ಬಂಜಾರಾ ಢಾವಲೋ ಮತ್ತು ಹವೇಲಿ (ಮದುವೆ ಶಾಸ್ತ್ರ), ಬಂಜಾರಾರ ಪುರುಷರ ಸಾಂಪ್ರದಾಯಿಕ ಕಡಿ (ಕಸಳಾತ್ ಮರಣ ಸಿಕವಾಡಿ, ಗೋಳ ಖಾಯರ್ ಕಡಿ, ಪಾನೇರ್ ಭಾಂಗ್ ಖ್ಯೇಮ್ (ಕ್ಷೇಮ) ಅನೇಕ ಪ್ರಕಾರಗಳಲ್ಲಿ ಬಂಜಾರ ಸಮುದಾಯದ ಕಲಾವಿದರು ಭಾಗವಹಿಸಿ, ತಮ್ಮಲ್ಲಿ ಹುದುಗಿರುವ ಕಲಾಪ್ರತಿಭೆಯನ್ನು ಪೂರೈಸಿ ಪ್ರಶಸ್ತಿ ಪಡೆಯಲು 2026-27ನೇ ಸಾಲಿನಲ್ಲಿ ಅವಕಾಶವನ್ನು ಕಲ್ಪಿಸುವ ಉದ್ದೇಶದಿಂದ ಅರ್ಹ ಮತ್ತು ಆಸಕ್ತ ಬಂಜಾರ ಕಲಾವಿದರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಅರ್ಜಿ ನಮೂನೆ ಭರ್ತಿ ಮಾಡಿ ನವೆಂಬರ್ 20 ರೊಳಗಾಗಿ ಧಾರವಾಡ ಜಿಲ್ಲಾ ಬಂಜಾರ ಭವನ, ಇ.ಪಿ.ಎಫ್. ಕಛೇರಿ ಪಕ್ಕ, ನವನಗರ, ಹುಬ್ಬಳ್ಳಿ-580025 ಕಛೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 9945211221, 9008259228, 9606309713 ಸಂಪರ್ಕಿಸಬಹುದು ಎಂದು ಧಾರವಾಡ ವಲಯದ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಭಿವೃದ್ಧಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇವಸ್ಥಾನದ ಅಭಿವೃದ್ಧಿ ಆದಷ್ಟು ಬೇಗ ಪ್ರಾರಂಭ



ನೇಸರಗಿ: ಗುಡ್ಡದ ಮದ್ಯ ಸುಮಾರು 400 ಜನಸಂಖ್ಯೆ ಹೊಂದಿರುವ ಪುಟ್ಟ ಗ್ರಾಮ ದೇಶನೂರ ಬಂಗಲೆ ರಸ್ತೆ ಅಭಿವೃದ್ಧಿಗೆ ಹಾಗೂ ಶ್ರೀ ಲಕ್ಷ್ಮೀ ದೇವಿ ದೇವಸ್ಥಾನದ ಜಿರ್ನೋದ್ದಾರಕ್ಕೆ ಆದಷ್ಟು ಬೇಗ ಅನುಧಾನ ತಂದು ಶೀಘ್ರದಲ್ಲಿ ಆದಷ್ಟು ಬೇಗ ನಿಮಗೆ ಕೆಲಸ ಮಾಡಿಕೊಡುವ ಜವಾಬ್ದಾರಿ ನನ್ನದು ಎಂದು ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು.

ಅವರು ಮಂಗಳವಾರದಂದು ಸಮೀಪದ ದೇಶನೂರ ಬಂಗಲೆ ಗ್ರಾಮಸ್ಥರು ಶಾಸಕರ ನೇಗಿನಹಾಳ ಗ್ರಾಮದ ಗೃಹ ಕಚೇರಿಯಲ್ಲಿ ತಮ್ಮನ್ನು ಬೇಟಿ ಮಾಡಿದ ಗ್ರಾಮಸ್ಥರಿಗೆ ಶಾಸಕ ಬಾಬಾಸಾಹೇಬ ಪಾಟೀಲ ಅವರು ಮಾತನಾಡಿ 2 ರಿಂದ ಮೂರು ತಿಂಗಳಲ್ಲಿ ಅನುಧಾನ ತಂದು ನಿಮ್ಮ ರಸ್ತೆ ಕಾರ್ಯ ಹಾಗೂ ದೇವಸ್ಥಾನದ ಸಮಗ್ರ ಕೆಲಸ ಮಾಡಿಕೊಡುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ತಮ್ಮನ್ನು ಬೇಟಿ ಆಗಲು ಬಂದ ಮಹಿಳೆಯರ ಕೆಲಸ ಕಾರ್ಯಗಳ ಬಗ್ಗೆ ಸಮರ್ಪಕವಾಗಿ ಚರ್ಚಿಸಿದರು.

ಈ ಸಂದರ್ಭದಲ್ಲಿ ಹಣಮಂತ ಕೊರವಿ, ಯಲ್ಲಪ್ಪ ಮುಳಕ್ಷಿ, ವಿಠ್ಠಲ ಕೊರವಿ, ವಿಠ್ಠಲ ಬೀರಣ್ಣವರ, ಮಾರುತಿ ಮುಳಕ್ಷಿ, ಸರಸ್ವತಿ ಮುಳಕ್ಷಿ, ಕಲ್ಲವ್ವ ಕೊರವಿ, ಗಂಗವ್ವ ಕುರಗುಂದ, ಲಕ್ಷ್ಮಕ್ಕ ಬೀರಣ್ಣವರ, ತುಕಾರಾಮ್ ಕೊರವಿ, ನೇಸರಗಿ ಜಿ ಪಂ ಕ್ಷೇತ್ರದ ಶಾಸಕರ ಸಹಾಯಕ ಶ್ರೀಧರ ಅಂಗಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಉತ್ತರ ಪ್ರಾಂತ ಸಮ್ಮೇಳನ: ತಾಳಿಕೋಟೆಯ ಮಹಿಳೆಯರ ಭಾಗಿ

ತಾಳಿಕೋಟೆ: ಧಾರವಾಡದಲ್ಲಿ ಜರುಗಿದ ರಾಷ್ಟ್ರ ಸೇವಾ ಸಮಿತಿಯ 90 ನೇ ವರ್ಷದ ಸಂಭ್ರಮದ ಅಂಗವಾಗಿ ವಿಜಯದಶಮಿ ಪ್ರಯುಕ್ತ ಕರ್ನಾಟಕ ಉತ್ತರ ಪ್ರಾಂತ ಮಟ್ಟದ ಎರಡು ದಿನಗಳ ಸಮ್ಮೇಳನವು ಸಪ್ಟೆಂಬರ್ 1 ಮತ್ತು 2ರಂದು ಧಾರವಾಡದಲ್ಲಿ ಅದ್ದೂರಿಯಾಗಿ ಜರುಗಿತು.

ಕರ್ನಾಟಕದ 18 ಜಿಲ್ಲೆಗಳಿಂದ ಸಮಿತಿಯ ಮಹಿಳಾ ಕಾರ್ಯಕರ್ತರು ಈ ಮಹತ್ವದ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ವಿಜಯಪುರ ಜಿಲ್ಲೆಯೊಂದರಿಂದಲೇ ನೂರಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಈ ಸಮ್ಮೇಳನದಲ್ಲಿ ತಾಳಿಕೋಟೆಯ ಮೂವರು ಮಹಿಳೆಯರಾದ ಶ್ರೀಮತಿ ಶೋಭಾ ಪ್ರಕಾಶ್ ಕಟ್ಟಿಮನಿ, ಶ್ರೀಮತಿ ಶೋಭಾ ರಾಮಚಂದ್ರ ಸುಬೇದಾರ ಹಾಗೂ ಶ್ರೀಮತಿ ವಿದ್ಯಾವತಿ ಚಿದಂಬರ ಕರಮ ರ ಕರ್ ಅವರು ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

ಸಮ್ಮೇಳನದ ಅಂಗವಾಗಿ ಅಕ್ಟೋಬರ್ 2ರಂದು ಧಾರವಾಡದ ಪ್ರಮುಖ ಬೀದಿಗಳಲ್ಲಿ ಆಕರ್ಷಕ ಪಥಸಂಚಲನ ನಡೆಯಿತು. ಮಹಿಳೆಯರು ಶಿಸ್ತು, ಸಂಘಟನಾ ಮನೋಭಾವ ಹಾಗೂ ದೇಶಭಕ್ತಿಯ ಸಂದೇಶದೊಂದಿಗೆ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಪಾಲ್ಗೊಂಡರು.

ರಾಷ್ಟ್ರ ಸೇವಾ ಸಮಿತಿಯು ಕಳೆದ 90 ವರ್ಷಗಳಿಂದ ಸಮಾಜದಲ್ಲಿ ರಾಷ್ಟ್ರಭಕ್ತಿ, ಸಂಸ್ಕಾರ, ಸಂಘಟನೆ ಮತ್ತು ಸೇವಾ ಮನೋಭಾವವನ್ನು ಬೆಳೆಸುವ ನಿಟ್ಟಿನಲ್ಲಿ ವಿವಿಧ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಸಮ್ಮೇಳನವು ಮಹಿಳೆಯರಲ್ಲಿ ಸಂಘಟನಾ ಶಕ್ತಿ ಮತ್ತು ರಾಷ್ಟ್ರಸೇವೆಯ ಸಂಕಲ್ಪವನ್ನು ಮತ್ತಷ್ಟು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಿತು.

ಈ ಕುರಿತು ಸಮ್ಮೇಳನದಲ್ಲಿ ಭಾಗವಹಿಸಿದ್ದ ಶೋಭಾ ಚಿದಂಬರ ಕರಮಕರ ಅವರು ಮಾಹಿತಿ ಹಂಚಿಕೊಂಡಿದ್ದಾರೆ.



ಭಾರತದಲ್ಲಿ ಮಾತ್ರ ಮಹಾರಾಜನೂ ಮಹಾತ್ಮನಾಗಬಲ್ಲ

ಬೆಳಗಾವಿ: ಜಗತ್ತಿನಲ್ಲಿ ಅನೇಕ ರಾಜ ಮಹಾರಾಜರು ಆಳ್ವಿಕೆ ಮಾಡಿ ತಮ್ಮ ಸಾಮ್ರಾಜ್ಯ ವಿಸ್ತರಿಸಿಕೊಂಡರೇ ಹೊರತು ಅವರಾರು ಮಹಾತ್ಮರಾಗಲಿಲ್ಲ. ಆದರೆ ಭಾರತ ಮಾತ್ರ ಇಲ್ಲಿನ ಸಂಸ್ಕೃತಿ, ಆಚಾರ ವಿಚಾರಗಳಿಂದಾಗಿ ಮಹಾರಾಜನೂ ಮಹಾತ್ಮನಾಗಬಲ್ಲ ಎಂದು ಜಗತ್ತಿಗೆ ಸಾರಿದೆ. ಅಂತಹ ಮಹಾತ್ಮರ ಸಾಲಿಗೆ ರಾಜವೈಭೋಗವನ್ನು ತ್ಯಜಿಸಿ ಶ್ರೇಷ್ಠ ಸಂತರಾದ ನಿಜಗುಣ ಶಿವಯೋಗಿಗಳು ಸೇರುತ್ತಾರೆ ಎಂದು ನಾಗನೂರು ರುದ್ರಾಕ್ಷಿ ಮಠದ ಡಾ. ಅಲ್ಲಮಪ್ರಭು ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಅವರು ಮಂಗಳವಾರ ಕಾರಂಜಿ ಮಠದ 27ನೆಯ ವಾರ್ಷಿಕೋತ್ಸವ, ಕನ್ನಡ ರಾಜ್ಯೋತ್ಸವ ಹಾಗೂ 305ನೇ ಶಿವಾನುಭವ ಗೋಷ್ಠಿಯ ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು. ಮುಂದುವರೆದು ಮಾತನಾಡಿದ ಶ್ರೀಗಳು ಜೀವನದಲ್ಲಿ ಸುಖ ದುಃಖಗಳು ಇದ್ದದ್ದೇ. ಬಂದದ್ದು ಬರಲಿ ಭಗವಂತನ ಒಲುಮೆ ಇರಲಿ ಎಂಬ ಭಾವದೊಂದಿಗೆ ಮುನ್ನಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ನಿಜಗುಣ ಶಿವಯೋಗಿಗಳ ಕುರಿತು ಉಪನ್ಯಾಸ ನೀಡಿದ ಶೇಗುಣಸಿ ವಿರಕ್ತಮಠದ ಡಾ. ಮಹಾಂತಪ್ರಭು



ಮಹಾಸ್ವಾಮಿಗಳು ಮಾತನಾಡಿ ಕನ್ನಡ ಸಾಹಿತ್ಯಕ್ಕೆ ನಿಜಗುಣ ಶಿವಯೋಗಿಗಳ ಕೊಡುಗೆ ಅಪಾರವಾದದು. ಅವರ ಬದುಕು, ಬದುಕಿನ ಮೌಲ್ಯ, ಜೀವನದ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ. ಮಣ್ಣನ್ನು ಆಳಿದವರು ದೊಡ್ಡ ದೊಡ್ಡವರಲ್ಲ ಮನಸ್ಸನ್ನು ಆಳಿದವರು ದೊಡ್ಡವರು, ಅರಮನೆಗಿಂತ ಗುರುಮನೆ ದೊಡ್ಡದು, ಶಿವ ಭಕ್ತಿಯೇ ಶಾಶ್ವತ ಸಂಪತ್ತು ಎಂಬ ನಿಜಗುಣ ಶಿವಯೋಗಿಗಳ ದಿವ್ಯ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದರು.

ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಕಾರಂಜಿ ಮಠದ ಗುರುಸಿದ್ಧ ಮಹಾಸ್ವಾಮಿಗಳು ಶ್ರೀಮಠದ ವಾರ್ಷಿಕೋತ್ಸವ ಒಂದು ನೆಪ ಮಾತ್ರ ಬಸವಾದಿ ಶಿವಶರಣರ ಸಂದೇಶಗಳನ್ನು ಕಾರ್ಯಗಳ ಮೂಲಕ ನಾಡಿಗೆ ತಲುಪಿಸುವುದೇ ನಮ್ಮ ಮುಖ್ಯ ಧ್ಯೇಯ ಎಂದರು.

ಇದೇ ಸಂದರ್ಭದಲ್ಲಿ 60 ವಸಂತಗಳನ್ನು ಪೂರೈಸಿದ ಉಳ್ಳಾಗಡ್ಡಿ ಖಾನಾಪುರ ಮರುಳ ಸಿದ್ದೇಶ್ವರ ಬ್ರಹನ್ಮಠದ ಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಷಷ್ಠಬ್ದಿ ಗೌರವ ಸಲ್ಲಿಸಲಾಯಿತು ಹಾಗೂ ರಾಷ್ಟ್ರೀಯ ಪುರಸ್ಕಾರ ಪಡೆದ ಡಾ. ಎಫ್. ವಿ. ಮಾನ್ವಿ ಅವರನ್ನು ಕಾರಂಜಿ ಮಠದ ವತಿಯಿಂದ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕಾರಂಜಿ ಮಠದ ಶಿವಯೋಗಿ ದೇವರು, ಸಾಹಿತಿ ಡಾ. ಬಸವರಾಜ ಜಗಜಂಪಿ, ವೈದ್ಯ ಡಾ. ಎಚ್.ಬಿ. ರಾಜಶೇಖರ್, ಸಾಹಿತಿ ಪ್ರಕಾಶ ಗಿರಿಮಲ್ಲನವರ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಕೊಪ್ಪಳದಲ್ಲಿಂದು ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮ

ಕೊಪ್ಪಳ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕೊಪ್ಪಳ, ಮೈ ಭಾರತ್ ಕೇಂದ್ರ ಕೊಪ್ಪಳ ಹಾಗೂ ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ (ರಿ) ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ 2026-27ನೇ ಸಾಲಿನ 'ಕೊಪ್ಪಳ ಜಿಲ್ಲಾ ಮಟ್ಟದ ಯುವಜನೋತ್ಸವ' ಹಾಗೂ 'ಕೊಪ್ಪಳ ಜಿಲ್ಲಾ ಮಟ್ಟದ ವಿಕಸಿತ ಭಾರತ ಯುವ ಸಂಸತ್ತು' ಕಾರ್ಯಕ್ರಮವನ್ನು ನವೆಂಬರ್ 4ರ ಬುಧವಾರದಂದು ಬೆಳಿಗ್ಗೆ 10 ಗಂಟೆಗೆ ಕೊಪ್ಪಳದ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿ ಶಿವರಾಜ ಸಂಗಪ್ಪ ಅವರು ಕಾರ್ಯಕ್ರಮ ಉದ್ಘಾಟಿಸುವರು. ಉನ್ನತ ಶಿಕ್ಷಣ ಇಲಾಖೆ ಸಚಿವರಾದ ಬಸವರಾಜ ರಾಯರೆಡ್ಡಿ ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ಶ್ರೀ ದೊಡ್ಡನಗೌಡ ಹನುಮಗೌಡ ಪಾಟೀಲ ಅವರು ಘನ ಉಪಸ್ಥಿತರಿರುವರು. ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿಯಮಿತದ ಅಧ್ಯಕ್ಷರಾದ ಕೆ. ರಾಘವೇಂದ್ರ ಹಿಟ್ನಾಳ ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಕೊಪ್ಪಳ ಲೋಕಸಭಾ ಕ್ಷೇತ್ರದ ಸಂಸದರಾದ ಕೆ. ರಾಜಶೇಖರ ಬಸವರಾಜ್ ಹಿಟ್ನಾಳ, ಶಾಸಕರಾದ ಜಿ. ಜನಾರ್ದನ ರೆಡ್ಡಿ, ವಿಧಾನ ಪರಿಷತ್ ಸದಸ್ಯರುಗಳಾದ ಶರೀಲ್ ಜಿ. ನಮೋಶಿ, ಡಾ. ಚಂದ್ರಶೇಖರ ಬಿ. ಪಾಟೀಲ್, ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪೂರ ಹಾಗೂ ಹೇಮಲತಾ ನಾಯಕ, ಮುನಿರಾಬಾದ್ ತುಂಗಭದ್ರಾ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ (ಕಾಡಾ) ಅಧ್ಯಕ್ಷರಾದ ಹಸನ್ ಸಾಬ್ ನಬೀಸಾಬ್ ದೋಟಿಹಾಳ, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರಸನ್ನ ಗಡಾದ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ್ ಅವರು ಪಾಲ್ಗೊಳ್ಳುವರು.

ವಿಶೇಷ ಸನ್ಮಾನ: ಜಾನಪದ ಸಾಧನೆಗಾಗಿ ಪ್ರಸಕ್ತ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಕೊಪ್ಪಳ ಜಿಲ್ಲೆಯ ಶಿವಲಿಂಗಪ್ಪ ಎಮ್. ಹಾಗೂ ದಾವಲಸಾಬ ಅತ್ತಾರ ಅವರನ್ನು ಈ ವೇದಿಕೆಯಲ್ಲಿ ವಿಶೇಷವಾಗಿ ಸನ್ಮಾನಿಸಲಾಗುವುದು. ಆಹ್ವಾನಿತ ಅತಿಥಿಗಳಾಗಿ ಕನ್ನಡ ಜಾನಪದ ಪರಿಷತ್ ಹಾಗೂ ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ರಾಜ್ಯಾಧ್ಯಕ್ಷರಾದ ಡಾ. ಬಾಲಾಜಿ ಎಸ್. ಅವರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಾಹಿಲ್ ಬಾಗ್ಲಾ, ಬೆಂಗಳೂರಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಜಂಟಿ ನಿರ್ದೇಶಕರಾದ ಡಾ. ಜಿತೇಂದ್ರ ಶೆಟ್ಟಿ ಮತ್ತು ಉಪ ನಿರ್ದೇಶಕರಾದ ಎಂ.ಸಿ.ರಮೇಶ, ಇಲಾಖೆಯ ಕೊಪ್ಪಳ ಸಹಾಯಕ ನಿರ್ದೇಶಕರಾದ ವಿಠಲ ಬಿ. ಜಾಬಗೌಡರ ಹಾಗೂ ಮೈ ಭಾರತ್ ಕೇಂದ್ರ ಕೊಪ್ಪಳ ಜಿಲ್ಲಾ ಯುವ ಅಧಿಕಾರಿಗಳಾದ ಮೇಘ ಜಿ.ಕೆ ಅವರು ಉಪಸ್ಥಿತರಿರುವರು.

ಜಿಲ್ಲೆಯ ಎಲ್ಲಾ ನೋಂದಾಯಿತ ಯುವ ಮಂಡಳಿಗಳು, ಯುವಜನರು, ಜಿಲ್ಲಾ ಹಾಗೂ ರಾಜ್ಯ ಯುವ ಪ್ರಶಸ್ತಿ ಪುರಸ್ಕೃತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮೈ ಭಾರತ್ ಕೇಂದ್ರವು ಪ್ರಕಟಣೆಯಲ್ಲಿ ತಿಳಿಸಿದೆ.


ಜಿಲ್ಲಾ ಮಟ್ಟದ ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನಕ್ಕೆ ಚಾಲನೆ

ಕ್ಷಯರೋಗವನ್ನು ಬೇಗ ಪತ್ತೆ ಮಾಡಿ ಸಂಪೂರ್ಣ ಚಿಕಿತ್ಸೆ ಪಡೆಯಿರಿ: ಡಾ. ನೀಲಗುಂದ

ಗದಗ: ಜಿಲ್ಲೆಯಲ್ಲಿ ಇದೇ ದಿನಾಂಕ 3 ರಿಂದ 8 ನೇ ತಾರೀಖಿನವರೆಗೆ ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನವನ್ನು ಆರಂಭಿಸಿದ್ದು ಕ್ಷಯರೋಗ ಒಂದು ಸಾಂಕ್ರಾಮಿಕ ರೋಗವಾಗಿದ್ದು ಈ ರೋಗವನ್ನು ಬೇಗ ಪತ್ತೆ ಮಾಡಿ ಚಿಕಿತ್ಸೆ ನೀಡಿದಲ್ಲಿ ಸಂಪೂರ್ಣ ಗುಣಪಡಿಸಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಎಸ್.ಎಸ್ ನೀಲಗುಂದ ಅವರು ಹೇಳಿದರು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳ ಕಾರ್ಯಾಲಯ, ಡಿ ಎಂ ಎಂ ಆಸ್ಪತ್ರೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಇಲ್ಲಿನ ದಂಡಪ್ಪ ಮಾನ್ವಿ ಹೆರಿಗೆ ಆಸ್ಪತ್ರೆಯಲ್ಲಿ ಏರ್ಪಡಿಸಲಾಗಿದ್ದ ಜಿಲ್ಲಾಮಟ್ಟದ ಸಕ್ರಿಯ ಕ್ಷಯ ರೋಗ ಪತ್ತೆ ಆಂದೋಲನ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮೇಲಿನಂತೆ ಮಾತನಾಡಿದರು.

ಜಿಲ್ಲಾ ಕ್ಷಯರೋಗ ನಿರ್ಮೂಲ ಅಧಿಕಾರಿಗಳಾದ ಡಾ. ಅರುಂಧತಿ ಕುಲಕರ್ಣಿ ಅವರು ಮಾತನಾಡಿ, ಎರಡು ವಾರಗಳಿಗಿಂತ ನಿರಂತರ ಕೆಮ್ಮು ಸದಾ ಎದೆ ನೋವು ಹಾಗೂ ಕಫದಲ್ಲಿ ರಕ್ತದ ಕುರುಹು ರಾತ್ರಿ ವೇಳೆ ವಿಪರೀತ ಜ್ವರ ಮತ್ತು ಬೆವಲು ದಿಡೀರ್ ತೂಕ ಹೇಳಿಕೆ ಹಾಗೂ ಹಸಿವಾಗದಿರುವುದು ಇವುಗಳಲ್ಲಿ ಯಾವುದೇ ಒಂದು ಸಮಸ್ಯೆಗಳು ಕಂಡುಬಂದರೂ ತಕ್ಷಣವೇ ಉಚಿತ



ತಪ ಪರೀಕ್ಷೆ ಮಾಡಿಸಿಕೊಳ್ಳಬೇಕು. ಧೂಮಪಾನ ನಿಲ್ಲಿಸಿ ನಿಯಂತ್ರಿಸಿ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತಾಲೂಕ ಆರೋಗ್ಯ ಅಧಿಕಾರಿಗಳಾದ ಡಾ. ಪ್ರೀತ್ ಖೋನಾ ಅವರು ಮಾತನಾಡಿ ಆಂದೋಲನದಲ್ಲಿ ಪಾಲ್ಗೊಳ್ಳುವ ಆಶಾ ಕಾರ್ಯಕರ್ತೆಯರು ಮತ್ತು ಇಲಾಖೆಯ ಅಧಿಕಾರಿಗಳು ಯಶಸ್ವಿಗೊಳಿಸಲು ಶ್ರಮಿಸಬೇಕೆಂದರು.

ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಡಾ. ರಾಜೇಂದ್ರ ಎಸ್ ಗಡಾದ ಅವರು ಒಟ್ಟು ಜನಸಂಖ್ಯೆಯ ಪ್ರತಿಶತ 15 ರಷ್ಟು ದುರ್ಬಲ ವರ್ಗದ ಜನರು ಕುರಿತು ಈ ಆಂದೋಲನ ನಡೆಯಲಿದ್ದು ಇದಕ್ಕಾಗಿ ಜಿಲ್ಲೆಯಲ್ಲಿ ತಂಡಗಳನ್ನ ರಚಿಸಿದ್ದು, ಸಾರ್ವಜನಿಕರಿಗೆ ಈ ರೋಗದ ಬಗ್ಗೆ ಅರಿವು ಮೂಡಿಸುವ ಮೂಲಕ ಯಶಸ್ವಿಗೊಳಿಸಿ ಗದಗ ಜಿಲ್ಲೆಯನ್ನು ಕ್ಷಯ ಮುಕ್ತ ಜಿಲ್ಲೆಯನ್ನಾಗಿ ಮಾಡಬೇಕೆಂದು ಹೇಳಿದರು.

ಡಿಎಂಎಂ ಆಸ್ಪತ್ರೆಯ ಮುಖ್ಯ ಆಡಳಿತ ವೈದ್ಯಾಧಿಕಾರಿಗಳಾದ ಡಾ. ಅಜಯ್ ಬಸರಿ ಗಿಡದ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ವೇದಿಕೆಯ ಮೇಲೆ ನಗರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ. ಮಹೇಶ್ ಕೊಪ್ಪಳ ಆಸೀನ ರಾಗಿದ್ದರು.

ಆರಂಭದಲ್ಲಿ ಗಣೇಶ್ ಬಾಗಡೆ ಸರ್ವರನ್ನು ಸ್ವಾಗತಿಸಿದರು. ಶ್ವೇತಾ ಆಶಾ ಕಾರ್ಯಕರ್ತೆ ಪ್ರಾರ್ಥಿಸಿದರು. ಡಾ. ರಾಜೇಂದ್ರ ಎಸ್ ಗಡಾದ ಹಾಗೂ ಗುರುರಾಜ್ ಕೋಟ್ಯಾಳ ಕಾರ್ಯಕ್ರಮ ನಿರೂಪಿಸಿದರು ಕೊನೆಯಲ್ಲಿ ಎಫ್ ಬಿ ಮೋದಿನವರ್ ಕೊನೆಯಲ್ಲಿ ವಂದಿಸಿದರು. ಈ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ವಿವಿಧ ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಸಾರ್ವಜನಿಕರು ಮತ್ತು ಆಶಾ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

'ಕವಿ ಮನೆಯೊಳ್ ಕಾವ್ಯಾವಲೋಕನ' ಕಾರ್ಯಕ್ರಮ

ಮೂಡಲಗಿ: ಚುಟುಕು ಸಾಹಿತ್ಯ ಪರಿಷತ್ತು ತಾಲೂಕ ಘಟಕ ಮೂಡಲಗಿ ವತಿಯಿಂದ ಹೊಸಟ್ಟಿ ಗ್ರಾಮದ ಕವಿಮನೆ ದುರ್ಗಪ್ಪ ದಾಸನ್ನವರ ನಿವಾಸದಲ್ಲಿ ರವಿವಾರ ಕವಿ ಮನೆಯೊಳ್ ಕಾವ್ಯಾವಲೋಕನ ಎಂಬ ಕಾರ್ಯಕ್ರಮದಲ್ಲಿ ಕನಸು ಕ್ಯಾನ್ವಾಸಿನ ಮೇಲೆ ಕಾವ್ಯ ಕೃತಿಯ ಕಾವ್ಯಾವಲೋಕನ ಮಾಡಲಾಯಿತು .ಕನ್ನಡ ಭುವನೇಶ್ವರಿಯ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡುವ ಮೂಲಕ ಕಾವ್ಯಾವಲೋಕನಕ್ಕೆ ಚಾಲನೆ ನೀಡಲಾಯಿತು.

ಕೃತಿಯನ್ನು ಅವಲೋಕಿಸಿದ ಡಾ.ಮಹಾದೇವ ಪೋತರಾಜ ಇವರು ಕನಸು ಕ್ಯಾನ್ವಾಸಿನ ಮೇಲೆ ಕವನ ಸಂಕಲನ ಓದುಗರುರಿಗೆ ದೇಶಿಯ ಸೊಗಡು ತಿಳಿಸುವ ಮೂಲಕ ಕವಿಯು ತಳಮೂಲದ ಸಾಹಿತ್ಯವನ್ನು ನವ್ಯ ಪರಂಪರೆಯಲ್ಲಿ ಕಟ್ಟಿಕೊಡುವ ಅವರ ಜಾಣತನ ನಿಜಕ್ಕೂ ಪ್ರಶಂಸನೀಯ. ಇಲ್ಲಿ ಕವಿಯ ಅನುಭವಗಳು ಆ ಕಾಲದ ಜಾತಿ ವ್ಯವಸ್ಥೆ, ಹಳ್ಳಿಯ ಪರಂಪರೆ,ದೇಶಿಯತೆಯ ಜೊತೆಗೆ ಕಾವ್ಯವು ಹಲವು ಕನಸುಗಳನ್ನು ಹೆಣೆಯುತ್ತಾ ಓದುಗರನ್ನು ಆಕರ್ಷಿಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿದ್ರಾಮ ದ್ಯಾಗಾನಟ್ಟಿ ಕಾವ್ಯದ ಕನಸು ಕ್ಯಾನ್ವಾಸಿನ ಮೇಲೆ ಕಾವ್ಯ ಕೃತಿಯು ನವ್ಯ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿದ್ದು ತಳಮೂಲ ತತ್ವದ ಆಧಾರದ ಮೇಲೆ ಕವನಗಳು ಕವಿಯ ಅಭಿವ್ಯಕ್ತಿಯನ್ನು ಬಿಂಬಿಸುತ್ತವೆ ಎಂದರು.

ಕನಸು ಕ್ಯಾನ್ವಾಸಿನ ಮೇಲೆ ಕೃತಿಯ ಕವಿ ದುರ್ಗಪ್ಪ ದಾಸನ್ನವರ ಮಾತನಾಡಿ ಕವಿಯ ಕಾವ್ಯವನ್ನು ಅವಲೋಕಿಸುವ ಮೂಲಕ ನನ್ನಂತಹ ಹಲವರಿಗೆ ಇದು ಮಾರ್ಗದರ್ಶಕವಾಗಿದೆ. ಕನಸುಗಳನ್ನು ಬಿತ್ತಿದ ಬೀಜ ನಾನಾದರೆ ಬೆಳೆಸಿ ಆರೈಕೆ ಮಾಡಿದ್ದು ಸಹೃದಯ ಓದುಗರು ಎಂದರು.

ಸಾಹಿತಿಗಳಾದ ಮಾರುತಿ ದಾಸನ್ನವರ, .ಚು.ಸಾ.ಪ ಅಧ್ಯಕ್ಷ ಚಿದಾನಂದ ಮ ಹೂಗಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಮಹಾದೇವ ಜಿಡ್ಡಿಮನಿ, ದುಂಡವ್ವ ದಾಸನ್ನವರ, ಬಾಳೇಶ ತುಬಾಕಿ, ಬಾಳಪ್ಪ ನಂದಿ, ಗಿರಿಮಲ್ಲಪ್ಪ ಗಿರೆನ್ನವರ, ಬಸವರಾಜ ಕಬ್ಬೂರ, ಸುರೇಶ ಕಬ್ಬೂರ, ಶ್ರೀಶೈಲ ಬೆಳ್ಳಗಿ, ಯಲ್ಲಪ್ಪ ಹೊಸಮನಿ,ರಮೇಶ ಕೊಣ್ಣೂರ ಹಾಗೂ ಹೊಸಟ್ಟಿ ಗ್ರಾಮದ ಗುರು ಹಿರಿಯರು ಉಪಸ್ಥಿತರಿದ್ದರು. ಸಿದ್ದಣ್ಣ ನಡಗಡ್ಡಿ ಪ್ರಾರ್ಥಿಸಿದರು, ನಿಂಗಪ್ಪ ಸಂಗ್ರೇಜಿಕೊಪ್ಪ ನಿರೂಪಿಸಿದರು. ಮಹಾಂತೇಶ ಕುಂಬಾರ ವಂದಿಸಿದರು.



ಇಸ್ರೇಲ್ ರಾಷ್ಟ್ರಕ್ಕೆ ಎದುರಾಗುತ್ತಿರುವ ಅಸ್ತಿತ್ವದ ಪ್ರಶ್ನೆ!

ಇಸ್ರೇಲ್ ರಾಜಕೀಯದಲ್ಲಿ ಅರಬ್ಬರ ಏರಿಕೆ; ಬದಲಾಗುತ್ತಿರುವ ಜನಸಂಖ್ಯಾ ಲೆಕ್ಕಾಚಾರ

ರಾಷ್ಟ್ರೀಯ ಅಸ್ಮಿತೆ ಮತ್ತು ಭವಿಷ್ಯದ ಆತಂಕ ಇಸ್ರೇಲ್‌ಗೆ ಹೊರಗಿನ ಶತ್ರುಗಳಿಗಿಂತ ಒಳಗಿನ ಸವಾಲುಗಳೇ ಹೆಚ್ಚು.

ಜಗತ್ತಿನ ಭೂಪಟದಲ್ಲಿ ಇಸ್ರೇಲ್ ಒಂದು ಪುಟ್ಟ ರಾಷ್ಟ್ರವಾಗಿರಬಹುದು. ಆದರೆ ಅದರ ರಾಜಕೀಯ, ಧಾರ್ಮಿಕ, ಐತಿಹಾಸಿಕ ಮತ್ತು ಸೈನಿಕ ಮಹತ್ವ ಮಾತ್ರ ಅಗಾಧವಾದುದು. ಸಾವಿರಾರು ವರ್ಷಗಳ ಇತಿಹಾಸ, ಯಹೂದಿಗಳ ಧಾರ್ಮಿಕ ನಂಬಿಕೆ, ಪ್ಯಾಲೆಸ್ತೀನ್ ಸಂಘರ್ಷ ಮತ್ತು ಮಧ್ಯಪ್ರಾಚ್ಯದ ಭೌಗೋಳಿಕ ರಾಜಕಾರಣದ ನಡುವೆ ರೂಪುಗೊಂಡ ರಾಷ್ಟ್ರ ಇಸ್ರೇಲ್. ಯಹೂದಿಗಳಿಗೆ ಪ್ರತ್ಯೇಕ ತಾಯ್ನಾಡು ಬೇಕೆಂಬ ಹಂಬಲ, ಯುರೋಪಿನಲ್ಲಿ ಎದುರಿಸಿದ ಹಿಂಸೆ, ಹತ್ಯಾಕಾಂಡದ ಕರಾಳ ಅನುಭವ ಮತ್ತು ಜಾಗತಿಕ ರಾಜಕೀಯ ಬೆಳವಣಿಗೆಗಳ ಪರಿಣಾಮವಾಗಿ 1948ರಲ್ಲಿ ಇಸ್ರೇಲ್ ರಾಷ್ಟ್ರ ಉದಯಿಸಿತು. ಅಂದಿನಿಂದ ಇಂದಿನವರೆಗೂ ತನ್ನ ಅಸ್ತಿತ್ವ, ಭದ್ರತೆ ಮತ್ತು ರಾಷ್ಟ್ರೀಯ ಅಸ್ಮಿತೆಯನ್ನು ಕಾಪಾಡಿಕೊಳ್ಳಲು ನಿರಂತರ ಹೋರಾಟ ನಡೆಸುತ್ತಲೇ ಬಂದಿದೆ. ಆದರೆ ಇಂದು ಇದೇ ಇಸ್ರೇಲ್ ಹೊರಗಿನ ಶತ್ರುಗಳಿಗಿಂತ ಒಳಗಿನ ಜನಸಂಖ್ಯಾ ಬದಲಾವಣೆ, ರಾಜಕೀಯ ಧ್ರುವೀಕರಣ ಮತ್ತು ರಾಷ್ಟ್ರೀಯ ಅಸ್ಮಿತೆಯ ಪ್ರಶ್ನೆಗಳು ಹೊಸ ಸವಾಲಾಗಿ ಎದುರಾಗುತ್ತಿವೆ. ಇಸ್ರೇಲ್ ಎಂದರೆ ಯಹೂದಿಗಳ ರಾಷ್ಟ್ರ ಎಂಬ ಭಾವನೆ ಅದರ ರಾಷ್ಟ್ರೀಯ ಅಸ್ತಿತ್ವದ ಪ್ರಮುಖ ಆಧಾರ. ಆದರೆ ಆ ರಾಷ್ಟ್ರದೊಳಗೇ ಅರಬ್ ಸಮುದಾಯದ ಜನಸಂಖ್ಯೆ ಮತ್ತು ರಾಜಕೀಯ ಪ್ರಾತಿನಿಧ್ಯ ಹೆಚ್ಚಾಗುತ್ತಿರುವುದು ಭವಿಷ್ಯದ ರಾಜಕೀಯ ಸಮೀಕರಣಗಳನ್ನು ಬದಲಾಯಿಸುವ ಸಾಧ್ಯತೆಯನ್ನು ಮೂಡಿಸಿದೆ. 2026ರ ಅಂಕಿಅಂಶಗಳ ಪ್ರಕಾರ ಇಸ್ರೇಲ್‌ನ ಒಟ್ಟು ಜನಸಂಖ್ಯೆಯಲ್ಲಿ ಸುಮಾರು 21.7ರಷ್ಟು ಅರಬ್ಬರಿದ್ದಾರೆ. ಅಂದರೆ ಸುಮಾರು 21.73 ಲಕ್ಷ ಜನರು. ಉಳಿದವರಲ್ಲಿ ಯಹೂದಿಗಳು ಮತ್ತು ಇತರ ಸಮುದಾಯದವರು ಸೇರಿದ್ದಾರೆ. ಈ ಅಂಕಿಅಂಶವನ್ನು ಕೇವಲ ಜನಸಂಖ್ಯೆಯ ಪ್ರಮಾಣವೆಂದು ನೋಡಲಾಗದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಸಂಖ್ಯೆಯ ಪ್ರಾತಿನಿಧ್ಯ ಮತಗಳಾಗಿ ಪರಿವರ್ತನೆಯಾಗುತ್ತವೆ; ಮತಗಳು ಸಂಸತ್ತಿನ ಸ್ಥಾನಗಳಾಗುತ್ತವೆ; ಸಂಸತ್ತಿನ ಸ್ಥಾನಗಳು ಸರ್ಕಾರ ರಚನೆಯ ಅಧಿಕಾರದ ಮೇಲೆ ಪ್ರಭಾವ ಬೀರುತ್ತವೆ. ಹೀಗಾಗಿ ಇಸ್ರೇಲ್‌ನ ರಾಜಕೀಯ ಭವಿಷ್ಯದಲ್ಲಿ ಅರಬ್ ಸಮುದಾಯದ ಪಾತ್ರವನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಇತ್ತೀಚಿನ ಇಸ್ರೇಲ್ ಚುನಾವಣೆಯ ಫಲಿತಾಂಶ ಈ ಬದಲಾವಣೆಗೆ ಸ್ಪಷ್ಟ ಉದಾಹರಣೆಯಾಗಿದೆ. 120 ಸದಸ್ಯ ಬಲದ ನೆಸೆಟ್ ಸಂಸತ್ತಿನಲ್ಲಿ ಅರಬ್ ನೇತೃತ್ವದ ಎರಡು ಪಕ್ಷಗಳು ಒಟ್ಟು 19 ಸ್ಥಾನಗಳನ್ನು ಪಡೆದಿರುವುದು ಐತಿಹಾಸಿಕ ಬೆಳವಣಿಗೆ. ಬೆಂಜಮಿನ್ ನೆತನ್ಯಾಹು ನೇತೃತ್ವದ ಬಣ 53 ಸ್ಥಾನಗಳನ್ನು ಪಡೆದರೆ, ಪ್ರತಿಪಕ್ಷಗಳ ಬಣ 48 ಸ್ಥಾನಗಳನ್ನು ಪಡೆದಿದೆ. ಸರ್ಕಾರ ರಚನೆಗೆ ಅಗತ್ಯವಿರುವ 61 ಸ್ಥಾನಗಳ ಬಹುಮತ ಯಾವ ಬಣಕ್ಕೂ ದೊರಕಿಲ್ಲ. ಹೀಗಾಗಿ 19 ಸ್ಥಾನಗಳನ್ನು ಹೊಂದಿರುವ ಅರಬ್ ಪಕ್ಷಗಳ ರಾಜಕೀಯ ಮಹತ್ವ ಹೆಚ್ಚಾಗಿದೆ. ಇದು ಕೇವಲ ಚುನಾವಣಾ ಫಲಿತಾಂಶವಲ್ಲ; ಇಸ್ರೇಲ್‌ನ ಅಧಿಕಾರ ರಾಜಕಾರಣದಲ್ಲಿ ಹೊಸ ಶಕ್ತಿಕೇಂದ್ರವೊಂದು ರೂಪುಗೊಳ್ಳುತ್ತಿರುವುದರ ಸೂಚನೆಯಾಗಿದೆ. ಆದರೆ ಅರಬ್ ಪಕ್ಷಗಳು ಒಂದೇ ರಾಜಕೀಯ ನಿಲುವಿನಲ್ಲಿವೆ ಅಥವಾ ಅವುಗಳ ಬೆಂಬಲದಿಂದಲೇ ಸರ್ಕಾರ ರಚನೆಯಾಗುತ್ತದೆ ಎಂದು ಭಾವಿಸುವುದು ಸರಿಯಾಗಲಿಕ್ಕಿಲ್ಲ. ಅವುಗಳ ನಡುವೆ ಸಿದ್ಧಾಂತ, ರಾಜಕೀಯ ಆದ್ಯತೆ ಮತ್ತು ಸರ್ಕಾರದೊಂದಿಗೆ




ಸಹಕಾರದ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ಇಸ್ರೇಲ್‌ನಲ್ಲಿರುವ ಅರಬ್ಬರು ಹೊರಗಿನಿಂದ ಬಂದ ವಲಸಿಗರಲ್ಲ. 1948ರಲ್ಲಿ ಇಸ್ರೇಲ್ ರಾಷ್ಟ್ರ ಸ್ಥಾಪನೆಯಾದಾಗ ಅಲ್ಲಿಯೇ ಉಳಿದ ಪ್ಯಾಲೆಸ್ತೀನ್ ಅರಬ್ಬರ ತಲೆಮಾರುಗಳು ಇಂದಿನ ಅರಬ್ ನಾಗರಿಕ ಸಮುದಾಯವಾಗಿ ಬೆಳೆದಿವೆ. ಇವರಲ್ಲಿ ಮುಸ್ಲಿಮರು, ಕ್ರೈಸ್ತರು ಮತ್ತು ದ್ರೂಜ್ ಸಮುದಾಯದವರಿದ್ದಾರೆ. ಇವರಿಗೆ ಇಸ್ರೇಲ್‌ನಲ್ಲಿ ನಾಗರಿಕ ಹಕ್ಕುಗಳು, ಮತದಾನದ ಹಕ್ಕು ಮತ್ತು ಸಂಸತ್ತಿಗೆ ಸ್ಪರ್ಧಿಸುವ ಅವಕಾಶವಿದೆ. ಹೀಗಾಗಿ ಅವರು ತಮ್ಮ ರಾಜಕೀಯ ಹಕ್ಕುಗಳನ್ನು ಬಳಸಿಕೊಂಡು ಪ್ರಾತಿನಿಧ್ಯ ಹೆಚ್ಚಿಸಿಕೊಳ್ಳುವುದು ಪ್ರಜಾಪ್ರಭುತ್ವದ ಸಹಜ ಪ್ರಕ್ರಿಯೆ. ಆದರೆ ಇದೇ ಬೆಳವಣಿಗೆ ಯಹೂದಿ ರಾಷ್ಟ್ರೀಯತೆಯ ಆಧಾರದ ಮೇಲೆ ನಿರ್ಮಿತವಾದ ಇಸ್ರೇಲ್‌ನ ರಾಜಕೀಯ ವ್ಯವಸ್ಥೆಗೆ ಹೊಸ ಪ್ರಶ್ನೆಗಳನ್ನು ಎತ್ತುತ್ತಿದೆ. ಇಸ್ರೇಲ್‌ನ ರಾಷ್ಟ್ರೀಯ ಅಸ್ಮಿತೆ ಮತ್ತು ಪ್ರಜಾಪ್ರಭುತ್ವದ ಸ್ವರೂಪದ ನಡುವಿನ ಸಂಘರ್ಷ ಇಂದು ಹೆಚ್ಚು ಚರ್ಚೆಗೆ ಗ್ರಾಸವಾಗಿದೆ. ಒಂದು ಕಡೆ ಅದು ಯಹೂದಿ ಜನರ ರಾಷ್ಟ್ರೀಯ ತಾಯ್ನಾಡು ಎಂಬ ಪರಿಕಲ್ಪನೆಯನ್ನು ಪ್ರತಿಪಾದಿಸುತ್ತದೆ. ಇನ್ನೊಂದು ಕಡೆ ತನ್ನ ದೇಶದ ಎಲ್ಲ ನಾಗರಿಕರಿಗೂ ಸಮಾನ ರಾಜಕೀಯ ಹಕ್ಕುಗಳನ್ನು ನೀಡಬೇಕಾದ ಪ್ರಜಾಪ್ರಭುತ್ವದ ಹೊಣೆಗಾರಿಕೆಯನ್ನು ಹೊಂದಿದೆ. 2018ರಲ್ಲಿ ಅಂಗೀಕರಿಸಲಾದ ಯಹೂದಿ ರಾಷ್ಟ್ರ–ರಾಜ್ಯ ಮೂಲ ಕಾನೂನು ಯಹೂದಿ ಜನರ ರಾಷ್ಟ್ರೀಯ ಸ್ವಯಂನಿರ್ಣಯದ ಹಕ್ಕನ್ನು ವಿಶೇಷವಾಗಿ ಪ್ರತಿಪಾದಿಸಿತು. ಈ ಕಾನೂನಿನ ಬಗ್ಗೆ ಅರಬ್ ಸಮುದಾಯ ಮತ್ತು ನಾಗರಿಕ ಹಕ್ಕುಗಳ ಸಂಘಟನೆಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ. ಅರಬ್ಬರ ಭಾಷೆ, ಸಂಸ್ಕೃತಿ ಮತ್ತು ರಾಷ್ಟ್ರೀಯ ಹಕ್ಕುಗಳ ಸ್ಥಾನಮಾನ ಕುರಿತ ಚರ್ಚೆ ಕೂಡ ಇದರಿಂದ ತೀವ್ರಗೊಂಡಿದೆ. ಹೀಗಾಗಿ ಇಸ್ರೇಲ್ ಎದುರಿಸುತ್ತಿರುವ ಪ್ರಶ್ನೆ ಕೇವಲ ಯಹೂದಿಗಳು ಮತ್ತು ಅರಬ್ಬರ ನಡುವಿನ ಜನಸಂಖ್ಯಾ ಲೆಕ್ಕಾಚಾರವಲ್ಲ; ರಾಷ್ಟ್ರದ ಸ್ವರೂಪ ಯಾವುದು ಎಂಬ ಮೂಲಭೂತ ಪ್ರಶ್ನೆಯೂ ಆಗಿದೆ. ಅರಬ್ ಸಮುದಾಯದ ರಾಜಕೀಯ ಏರಿಕೆಗೆ ಮತ್ತೊಂದು ಪ್ರಮುಖ ಕಾರಣ ಅವರಲ್ಲಿ ಹೆಚ್ಚುತ್ತಿರುವ ರಾಜಕೀಯ ಜಾಗೃತಿ ಮತ್ತು ಸಂಘಟಿತ ಮತದಾನ. ಹಲವು ವರ್ಷಗಳಿಂದ ತಮ್ಮ ಪ್ರದೇಶಗಳ ಅಭಿವೃದ್ಧಿ, ಉದ್ಯೋಗಾವಕಾಶ, ಶಿಕ್ಷಣ, ವಸತಿ, ಅಪರಾಧ ನಿಯಂತ್ರಣ ಮತ್ತು ಸಾಮಾಜಿಕ ಭದ್ರತೆಗಾಗಿ ಅರಬ್ ನಾಗರಿಕರು ಹೋರಾಡುತ್ತಿದ್ದಾರೆ. ತಮ್ಮ ಸಮಸ್ಯೆಗಳಿಗೆ ಪರಿಹಾರ ನೀಡದ ಸರ್ಕಾರಗಳ ವಿರುದ್ಧ ಚುನಾವಣೆಯ ಮೂಲಕ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. 2026ರ ಚುನಾವಣೆಯಲ್ಲಿ ದಾಖಲೆ ಮಟ್ಟದ ಮತದಾನ ನಡೆದಿರುವುದು ಈ ರಾಜಕೀಯ ಜಾಗೃತಿಗೆ ಸಾಕ್ಷಿಯಾಗಿದೆ. ಹೀಗಿರುವಾಗ ಅರಬ್ಬರ ರಾಜಕೀಯ ಪ್ರಭಾವವನ್ನು ಕೇವಲ ಧಾರ್ಮಿಕ ವಿಸ್ತರಣೆಯೆಂದು ವ್ಯಾಖ್ಯಾನಿಸುವುದು ವಾಸ್ತವದ ಸಂಪೂರ್ಣ ಚಿತ್ರಣವಾಗುವುದಿಲ್ಲ. ಅವರ ಮತದಾನದ ಹಿಂದೆ ನಾಗರಿಕ ಹಕ್ಕುಗಳು, ಸ್ಥಳೀಯ ಅಭಿವೃದ್ಧಿ ಮತ್ತು ರಾಜಕೀಯ ಅಸಮಾಧಾನದ ಅಂಶಗಳೂ ಇವೆ. ಆದರೆ ಇಸ್ರೇಲ್‌ನ ಭವಿಷ್ಯವನ್ನು ನಿರ್ಧರಿಸುವಲ್ಲಿ ಜನಸಂಖ್ಯೆಯಷ್ಟೇ ಧಾರ್ಮಿಕ ಮತ್ತು ರಾಜಕೀಯ ಸಿದ್ಧಾಂತಗಳೂ ಪ್ರಭಾವ ಬೀರುತ್ತವೆ. ಯಹೂದಿ ಸಮಾಜವೇ ಸಂಪೂರ್ಣ ಏಕತೆಯಿಂದ ಕೂಡಿಲ್ಲ. ಅಲ್ಲಿ ಧರ್ಮನಿಷ್ಠರು, ಅತಿ ಸಂಪ್ರದಾಯವಾದಿಗಳು, ಜಾತ್ಯತೀತರು, ಉದಾರವಾದಿಗಳು ಮತ್ತು ರಾಷ್ಟ್ರೀಯತಾವಾದಿಗಳ ನಡುವೆ ಭಿನ್ನಾಭಿಪ್ರಾಯಗಳಿವೆ. ಸರ್ಕಾರದ ನೀತಿ, ನ್ಯಾಯಾಂಗದ ಸ್ವಾತಂತ್ರ್ಯ, ಸೈನಿಕ ಸೇವೆ, ಧಾರ್ಮಿಕ ಕಾನೂನುಗಳು ಮತ್ತು ಪ್ಯಾಲೆಸ್ತೀನ್ ವಿಚಾರಗಳಲ್ಲಿ ಯಹೂದಿಗಳಲ್ಲಿಯೇ ವಿಭಿನ್ನ ನಿಲುವುಗಳಿವೆ. ಈ ಆಂತರಿಕ ಭಿನ್ನತೆಗಳು ಮುಂದುವರಿದರೆ ರಾಷ್ಟ್ರದ ರಾಜಕೀಯ ಸ್ಥಿರತೆ ದುರ್ಬಲವಾಗಬಹುದು. ಹೊರಗಿನ ಶತ್ರುಗಳ ವಿರುದ್ಧ ಹೋರಾಡುವ ರಾಷ್ಟ್ರಕ್ಕೆ ಒಳಗಿನ ರಾಜಕೀಯ ಒಗ್ಗಟ್ಟು ಕೂಡ ಅಷ್ಟೇ ಅಗತ್ಯ. ಇದರ ಜೊತೆಗೆ ಪ್ಯಾಲೆಸ್ತೀನ್ ಸಮಸ್ಯೆ ಇಸ್ರೇಲ್‌ನ ಭವಿಷ್ಯವನ್ನು ನಿರ್ಧರಿಸುವ ಮತ್ತೊಂದು ದೊಡ್ಡ ಅಂಶವಾಗಿದೆ. ಗಾಜಾ ಯುದ್ಧ, ವೆಸ್ಟ್ ಬ್ಯಾಂಕ್‌ನಲ್ಲಿನ ಸಂಘರ್ಷ, ಪ್ಯಾಲೆಸ್ತೀನ್ ಜನರ ಸ್ವತಂತ್ರ ರಾಷ್ಟ್ರದ ಬೇಡಿಕೆ, ನಿರಾಶ್ರಿತರ ಸಮಸ್ಯೆ ಮತ್ತು ಜೆರುಸಲೇಂ ನಗರದ ಮೇಲಿನ ಹಕ್ಕುಗಳ ವಿವಾದಗಳು ದಶಕಗಳಿಂದ ಮುಂದುವರಿದಿವೆ. ಇಸ್ರೇಲ್‌ನ ಭದ್ರತೆಯ ಹೆಸರಿನಲ್ಲಿ ನಡೆಯುವ ನಿರಂತರ ಸೈನಿಕ ಕಾರ್ಯಾಚರಣೆಗಳು ಮತ್ತು ಪ್ಯಾಲೆಸ್ತೀನ್ ಜನರ ಮೇಲೆ ಬೀರುವ ಪರಿಣಾಮಗಳು ಜಾಗತಿಕ ಮಟ್ಟದಲ್ಲಿ ಅದರ ರಾಜತಾಂತ್ರಿಕ ಸ್ಥಾನಮಾನವನ್ನು ಸಂಕಷ್ಟಕ್ಕೆ ತಳ್ಳಿವೆ. ಒಂದು ರಾಷ್ಟ್ರ ತನ್ನ ಸೈನಿಕ ಶಕ್ತಿಯಿಂದ ಗಡಿಗಳನ್ನು ರಕ್ಷಿಸಬಹುದು. ಆದರೆ ಸೈನಿಕ ಶಕ್ತಿಯಿಂದ ಮಾತ್ರ ಶಾಶ್ವತ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಿಲ್ಲ. ಶಾಂತಿ, ನ್ಯಾಯ ಮತ್ತು ಪರಸ್ಪರ ವಿಶ್ವಾಸದ ಕೊರತೆ ಮುಂದುವರಿದರೆ ಸಂಘರ್ಷದ ಬೆಲೆ ಮುಂದಿನ ತಲೆಮಾರುಗಳೂ ತೆರಬೇಕಾಗುತ್ತದೆ. ಇಸ್ರೇಲ್‌ನ ರಾಜಕೀಯದಲ್ಲಿ ಅರಬ್ ಪಕ್ಷಗಳು ನಿರ್ಣಾಯಕ ಸ್ಥಾನ ಪಡೆಯುತ್ತಿರುವುದನ್ನು ಈ ವಿಶಾಲ ಹಿನ್ನೆಲೆಯಲ್ಲಿಯೇ ಅರ್ಥಮಾಡಿಕೊಳ್ಳಬೇಕು. ಇಂದಿನ ಚುನಾವಣೆಯಲ್ಲಿ ಅರಬ್ ಪಕ್ಷಗಳು 19 ಸ್ಥಾನಗಳನ್ನು ಪಡೆದಿರುವುದು ಅವುಗಳಿಗೆ ಸರ್ಕಾರ ರಚನೆಯ ಮಾತುಕತೆಯಲ್ಲಿ ಮಹತ್ವದ ಸ್ಥಾನ ಕಲ್ಪಿಸಿದೆ. ಆದರೆ ಇದರಿಂದ ಇಸ್ರೇಲ್ ನಾಳೆಯೇ ಅರಬ್ ರಾಷ್ಟ್ರವಾಗಿ ಬದಲಾಗುತ್ತದೆ ಅಥವಾ ಯಹೂದಿಗಳ ರಾಜಕೀಯ ಅಸ್ತಿತ್ವ ಕೊನೆಗೊಳ್ಳುತ್ತದೆ ಎಂದು ಹೇಳುವುದು ಅತಿರೇಕವಾಗುತ್ತದೆ. ಆದರೂ ಭವಿಷ್ಯದಲ್ಲಿ ಯಾವುದೇ ಸರ್ಕಾರ ರಚಿಸಲು ಅರಬ್ ಪಕ್ಷಗಳ ಬೆಂಬಲವನ್ನು ಪರಿಗಣಿಸಬೇಕಾದ ಪರಿಸ್ಥಿತಿ ಹೆಚ್ಚಾದರೆ, ಇಸ್ರೇಲ್‌ನ ಸಾಂಪ್ರದಾಯಿಕ ರಾಜಕೀಯ ಸಮೀಕರಣಗಳಲ್ಲಿ ಮಹತ್ವದ ಬದಲಾವಣೆ ಸಂಭವಿಸಬಹುದು. ಈ ಬದಲಾವಣೆಯೇ ಯಹೂದಿ ರಾಷ್ಟ್ರೀಯತಾವಾದಿ ರಾಜಕೀಯಕ್ಕೆ ದೊಡ್ಡ ಸವಾಲಾಗಲಿದೆ. ಇಲ್ಲಿ ಮತ್ತೊಂದು ಪ್ರಶ್ನೆಯೂ ಇದೆ. ಇಸ್ರೇಲ್ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಿರಂತರವಾಗಿ ಯುದ್ಧ ಮತ್ತು ಭದ್ರತಾ ನೀತಿಗಳನ್ನೇ ಅವಲಂಬಿಸಬೇಕೇ? ಅಥವಾ ತನ್ನ ನಾಗರಿಕರ ನಡುವೆ ವಿಶ್ವಾಸ ಮತ್ತು ಸಮಾನತೆಯನ್ನು ಬೆಳೆಸುವ ರಾಜಕೀಯ ವ್ಯವಸ್ಥೆಯನ್ನು ನಿರ್ಮಿಸಬೇಕೇ? ಅರಬ್ಬರನ್ನು ಶತ್ರುಗಳೆಂದು ನೋಡುವ ಮನೋಭಾವ ಮತ್ತು ಯಹೂದಿಗಳ ರಾಷ್ಟ್ರೀಯ ಹಕ್ಕುಗಳನ್ನು ನಿರಾಕರಿಸುವ ಮನೋಭಾವ ಎರಡೂ ಸಂಘರ್ಷವನ್ನು ಮತ್ತಷ್ಟು ಗಾಢಗೊಳಿಸುತ್ತವೆ. ಎರಡೂ ಸಮುದಾಯಗಳ ನಾಗರಿಕ ಹಕ್ಕುಗಳು, ಧಾರ್ಮಿಕ ಸ್ವಾತಂತ್ರ್ಯ ಮತ್ತು ಭದ್ರತೆಯನ್ನು ಗೌರವಿಸುವ ವ್ಯವಸ್ಥೆಯೇ ದೀರ್ಘಕಾಲೀನ ಸ್ಥಿರತೆಗೆ ದಾರಿ ಮಾಡಿಕೊಡಬಲ್ಲದು.

ಇಸ್ರೇಲ್‌ಗೆ ಇನ್ನೊಂದು ದೊಡ್ಡ ಸವಾಲು ಅಂತರರಾಷ್ಟ್ರೀಯ ರಾಜತಾಂತ್ರಿಕ ಒತ್ತಡ. ಅಮೆರಿಕದಂತಹ ಮಿತ್ರರಾಷ್ಟ್ರಗಳ ಬೆಂಬಲ ಅದರ ಭದ್ರತಾ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಆದರೆ ಗಾಜಾ ಸಂಘರ್ಷ ಮತ್ತು ಪ್ಯಾಲೆಸ್ತೀನ್ ವಿಚಾರದಲ್ಲಿ ಜಾಗತಿಕ ಅಭಿಪ್ರಾಯ ಬದಲಾಗುತ್ತಿರುವುದು ಇಸ್ರೇಲ್‌ಗೆ ರಾಜತಾಂತ್ರಿಕವಾಗಿ ಸವಾಲಾಗಿದೆ. ಅರಬ್ ರಾಷ್ಟ್ರಗಳೊಂದಿಗೆ ಸಂಬಂಧ ಸುಧಾರಿಸುವ ಪ್ರಯತ್ನಗಳು, ಇರಾನ್‌ನೊಂದಿಗೆ ಇರುವ ಸಂಘರ್ಷ, ಲೆಬನಾನ್ ಮತ್ತು ಸಿರಿಯಾದ ಭದ್ರತಾ ಪರಿಸ್ಥಿತಿ ಹೀಗೆ ಹಲವು ದಿಕ್ಕುಗಳಿಂದ ಒತ್ತಡ ಎದುರಿಸುತ್ತಿದೆ. ಈ ಎಲ್ಲ ಬೆಳವಣಿಗೆಗಳ ನಡುವೆ ಆಂತರಿಕ ರಾಜಕೀಯ ಅಸ್ಥಿರತೆ ಹೆಚ್ಚಾದರೆ ರಾಷ್ಟ್ರದ ಭವಿಷ್ಯದ ನಿರ್ಧಾರಗಳ ಮೇಲೂ ಪರಿಣಾಮ ಬೀಳುವುದು ಸಹಜ. ಹಾಗಾದರೆ ಇಸ್ರೇಲ್‌ನ ಅಸ್ತಿತ್ವಕ್ಕೆ ನಿಜವಾದ ಅಪಾಯ ಎಲ್ಲಿಂದ? ಅರಬ್ಬರ ಜನಸಂಖ್ಯೆಯ ಹೆಚ್ಚಳದಿಂದ ಮಾತ್ರವೇ? ಅಥವಾ ಯಹೂದಿ ಸಮಾಜದ ಆಂತರಿಕ ವಿಭಜನೆ, ರಾಜಕೀಯ ಅಸ್ಥಿರತೆ, ನಿರಂತರ ಯುದ್ಧದ ವಾತಾವರಣ, ಅಂತರರಾಷ್ಟ್ರೀಯ ಒಂಟಿತನ ಮತ್ತು ಪ್ಯಾಲೆಸ್ತೀನ್ ಸಮಸ್ಯೆಗೆ ನ್ಯಾಯಯುತ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗದಿರುವುದರಿಂದಲೇ? ಈ ಎಲ್ಲ ಅಂಶಗಳು ಒಟ್ಟಾಗಿ ರಾಷ್ಟ್ರದ ಭವಿಷ್ಯದ ಮೇಲೆ ಪ್ರಭಾವ ಬೀರುತ್ತವೆ. ಜನಸಂಖ್ಯಾ ಬದಲಾವಣೆ ಒಂದು ಅಂಶವಾದರೆ, ಆಡಳಿತದ ವೈಫಲ್ಯ ಮತ್ತು ರಾಷ್ಟ್ರೀಯ ಒಗ್ಗಟ್ಟಿನ ಕೊರತೆ ಇನ್ನೂ ದೊಡ್ಡ ಅಪಾಯಗಳಾಗಬಹುದು. ಇತಿಹಾಸದಲ್ಲಿ ಅನೇಕ ಬಲಿಷ್ಠ ಸಾಮ್ರಾಜ್ಯಗಳು ಹೊರಗಿನ ಶತ್ರುಗಳಿಂದ ಮಾತ್ರ ಪತನಗೊಂಡಿಲ್ಲ. ಆಂತರಿಕ ಭಿನ್ನಾಭಿಪ್ರಾಯ, ಅಧಿಕಾರದ ಸಂಘರ್ಷ, ಆಡಳಿತದ ವೈಫಲ್ಯ ಮತ್ತು ಜನರ ನಡುವಿನ ವಿಶ್ವಾಸದ ಕೊರತೆಯೂ ಅವುಗಳ ಅವನತಿಗೆ ಕಾರಣವಾಗಿವೆ. ಇಸ್ರೇಲ್ ಕೂಡ ಇತಿಹಾಸದಿಂದ ಪಾಠ ಕಲಿಯಬೇಕಿದೆ. ಯಹೂದಿಗಳ ಸಾವಿರಾರು ವರ್ಷಗಳ ನೋವು, ಹತ್ಯಾಕಾಂಡದ ಅನುಭವ ಮತ್ತು ಪ್ರತ್ಯೇಕ ತಾಯ್ನಾಡಿನ ಕನಸನ್ನು ಜಗತ್ತು ಮರೆಯಲು ಸಾಧ್ಯವಿಲ್ಲ. ಅದೇ ರೀತಿ ಪ್ಯಾಲೆಸ್ತೀನ್ ಜನರ ನೋವು, ಅವರ ರಾಷ್ಟ್ರೀಯ ಹಕ್ಕು ಮತ್ತು ಸ್ವತಂತ್ರ ಬದುಕಿನ ಆಶಯವನ್ನೂ ನಿರ್ಲಕ್ಷಿಸಲು ಸಾಧ್ಯವಿಲ್ಲ. ಒಂದು ಸಮುದಾಯದ ಇತಿಹಾಸದ ನೋವಿಗೆ ಮತ್ತೊಂದು ಸಮುದಾಯದ ನೋವು ಪರಿಹಾರವಾಗಬಾರದು. ಕೊನೆಯದಾಗಿ ಹೇಳುವುದಾದರೆ, ಇಸ್ರೇಲ್‌ನ ಅಸ್ತಿತ್ವವನ್ನು ಪ್ರಶ್ನಿಸುವ ಪರಿಸ್ಥಿತಿ ಮುಂದಿನ ದಿನಗಳಲ್ಲಿ ರೂಪುಗೊಳ್ಳಬಹುದೇ ಎಂಬ ಆತಂಕವನ್ನು ತಳ್ಳಿಹಾಕುವಂತಿಲ್ಲ. ಆದರೆ ಅದು ಅನಿವಾರ್ಯವೆಂದು ಹೇಳಲು ಸಾಧ್ಯವಿಲ್ಲ. ಅರಬ್ ಪಕ್ಷಗಳ 19 ಸ್ಥಾನಗಳ ಗೆಲುವು ಇಸ್ರೇಲ್‌ನ ರಾಜಕೀಯ ವ್ಯವಸ್ಥೆಯಲ್ಲಿ ಹೊಸ ಅಧ್ಯಾಯವನ್ನು ತೆರೆದಿದೆ. ಜನಸಂಖ್ಯೆಯ ಬದಲಾವಣೆ, ಪ್ರಜಾಪ್ರಭುತ್ವದ ರಾಜಕೀಯ ಮತ್ತು ರಾಷ್ಟ್ರೀಯ ಅಸ್ಮಿತೆಯ ನಡುವಿನ ಸಂಘರ್ಷ ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರವಾಗಬಹುದು. ಇಸ್ರೇಲ್ ತನ್ನ ಭವಿಷ್ಯವನ್ನು ಕಾಪಾಡಿಕೊಳ್ಳಬೇಕಾದರೆ ಕೇವಲ ಶಸ್ತ್ರಾಸ್ತ್ರಗಳ ಬಲವನ್ನಲ್ಲ, ತನ್ನೊಳಗಿನ ನಾಗರಿಕರ ವಿಶ್ವಾಸವನ್ನೂ ಗಳಿಸಬೇಕು. ಯಹೂದಿಗಳ ರಾಷ್ಟ್ರ ಎಂಬ ತನ್ನ ಐತಿಹಾಸಿಕ ಅಸ್ಮಿತೆಯನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಪ್ರಜಾಪ್ರಭುತ್ವದ ಸಮಾನತೆಯನ್ನು ಕಳೆದುಕೊಳ್ಳಬಾರದು.

ಜಗತ್ತಿಗೆ ಇಸ್ರೇಲ್ ನೀಡಬೇಕಾದ ಸಂದೇಶವೂ ಇದೇ. ಒಂದು ರಾಷ್ಟ್ರದ ಅಸ್ತಿತ್ವಕ್ಕೆ ಗಡಿಗಳು, ಸೇನೆ, ಅಣ್ವಸ್ತ್ರಗಳು ಮತ್ತು ಆರ್ಥಿಕ ಶಕ್ತಿ ಮಾತ್ರ ಆಧಾರವಾಗುವುದಿಲ್ಲ. ಜನರ ಒಗ್ಗಟ್ಟು, ನ್ಯಾಯಯುತ ಆಡಳಿತ, ಪರಸ್ಪರ ಗೌರವ ಮತ್ತು ಶಾಂತಿಯುತ ಸಹಬಾಳ್ವೆಯೇ ಅದರ ನಿಜವಾದ ಭದ್ರತಾ ಕವಚ. ಇವುಗಳನ್ನು ಕಡೆಗಣಿಸಿದರೆ ಎಷ್ಟೇ ಬಲಿಷ್ಠ ರಾಷ್ಟ್ರವಾದರೂ ಭವಿಷ್ಯದ ಸವಾಲುಗಳಿಂದ ಮುಕ್ತವಾಗಲು ಸಾಧ್ಯವಿಲ್ಲ.



ಅನಂತ ಪಪ್ಪು
ಮೋ:9448527870



ಗೋಕಾಕ: ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಬೆಳಗಾವಿ ಹಾಗೂ ಮರಾಠಾ ನಿಗಮದಿಂದ ಗೋಕಾಕ ಮತಕ್ಷೇತ್ರದ 26 ಫಲಾನುಭವಿಗಳಿಗೆ ಮಂಜುರಾದ ಹೊಲಿಗೆ ಯಂತ್ರಗಳನ್ನು ಶಾಸಕ ರಮೇಶ ಜಾರಕಿಹೊಳಿ ಮಂಗಳವಾರದಂದು ನಗರದ ತಮ್ಮ ಕಾರ್ಯಾಲಯದಲ್ಲಿ ವಿತರಿಸಿದರು. ಇಲಾಖೆಯ ಸಹಾಯಕ ಅಭಿವೃದ್ಧಿ ಅಧಿಕಾರಿ ಬಾಬುರಾವ ಬೆಳ್ಳಿ ಇದ್ದರು.

ಉಚಿತ ಮಧುಮೇಹ ತಪಾಸಣೆ, ಚಿಕಿತ್ಸಾ ಶಿಬಿರ

ಬಾಗಲಕೋಟೆ: ಬಿ.ವಿ.ವಿ.ಎಸ್. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಯ ವತಿಯಿಂದ ದಿನಾಂಕ 06–11–2026 ರಿಂದ 20–11–2026 ರವರೆಗೆ ಉಚಿತ ಮಧುಮೇಹ ಹಾಗೂ ಮಾಯದ ಪಾದದ ಗಾಯಗಳ (Diabetic Foot Ulcer) ತಪಾಸಣೆ ಮತ್ತು ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ.

ಮಧುಮೇಹವು ಇಂದು ದೇಶದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಆರೋಗ್ಯ ಸಮಸ್ಯೆಯಾಗಿದ್ದು, ಮಧುಮೇಹಿಗಳಲ್ಲಿ ಪಾದದ ಗಾಯಗಳು ಉಂಟಾದಾಗ ಅವು ಬೇಗನೆ ಗುಣವಾಗದೆ ಗಂಭೀರ ಸಮಸ್ಯೆಗಳಿಗೆ ಕಾರಣವಾಗುವ ಸಾಧ್ಯತೆಗಳಿವೆ. ಸೂಕ್ತ ಸಮಯದಲ್ಲಿ ಚಿಕಿತ್ಸೆ ದೊರೆಯದಿದ್ದಲ್ಲಿ ಸೋಂಕು ಉಲ್ಬಣಗೊಂಡು ಪಾದದ ಭಾಗವನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆದುಹಾಕುವ ಅನಿವಾರ್ಯತೆಯೂ ಎದುರಾಗಬಹುದು.

ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಆಯೋಜಿಸಿರುವ ಈ ಶಿಬಿರದಲ್ಲಿ ಮಧುಮೇಹದಿಂದ ಬಳಲುತ್ತಿರುವವರ ಪಾದದ ಗಾಯಗಳನ್ನು ಮಹಾವಿದ್ಯಾಲಯದ ತಜ್ಞ ವೈದ್ಯರು ಉಚಿತವಾಗಿ ತಪಾಸಣೆ ನಡೆಸಿ, ಅಗತ್ಯ ಚಿಕಿತ್ಸೆಯೊಂದಿಗೆ ಉಚಿತ ಔಷಧಿಗಳನ್ನು ವಿತರಿಸಲಿದ್ದಾರೆ.

ಆದ್ದರಿಂದ ಮಧುಮೇಹಿಗಳು ಹಾಗೂ ಪಾದದ ಗಾಯಗಳಿಂದ ಬಳಲುತ್ತಿರುವ ಸಾರ್ವಜನಿಕರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕೆಂದು ಮಹಾವಿದ್ಯಾಲಯದ ಪ್ರಭಾರಿ ಪ್ರಾಚಾರ್ಯರಾದ ಡಾ. ಎಂ. ಎಸ್. ಹಿರೇಮಠ ಅವರು ಮನವಿ ಮಾಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08354–223281, 9886664541, 8277660841. ಸ್ಥಳ: ಬಿ.ವಿ.ವಿ.ಎಸ್. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆ, ಬಾಗಲಕೋಟೆ.

ನ.19 ರಂದು ಜಿ.ಪಂ ತ್ರೈಮಾಸಿಕ ಕೆ.ಡಿ.ಪಿ ಸಭೆ

ಕಾರವಾರ: ಜಿಲ್ಲಾ ಪಂಚಾಯತ್ ತ್ರೈಮಾಸಿಕ ಕೆ.ಡಿ.ಪಿ ಸಭೆಯು ಸಹಕಾರ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಲಕ್ಷ್ಮಣ ಸಂಗಪ್ಪ ಸವದಿ ಅವರ ಅಧ್ಯಕ್ಷತೆಯಲ್ಲಿ ನ.19 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್ ಕಾರ್ಯಾಲಯದ ಸಭಾಭವನದಲ್ಲಿ ನಡೆಯಲಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ಕಾರವಾರ: ಪ್ರಸಕ್ತ ಸಾಲಿಗೆ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ತರಬೇತಿಯನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನೀಡಲಾಗುತ್ತಿದೆ. ಸದರಿ ತರಬೇತಿಗೆ ಅಭ್ಯರ್ಥಿಗಳು ಜಾಲತಾಣ: **https://minority-skill-form.vercel.app/** ನಲ್ಲಿ ನ.10 ರೊಳಗಾಗಿ ಅರ್ಜಿ ಸಲ್ಲಿಸಬಹುದು.ದಾಖಲೆಗಳು: ಪಾಸ್ ಪೋರ್ಟ್ ಸೈಜ್ ಪೋಟೋ, ಆಧಾರ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣಪತ್ರ, ಅಂಕಪಟ್ಟಿ. ಹೆಚ್ಚಿನ ಮಾಹಿತಿಗಾಗಿ ತಮ್ಮ ತಾಲೂಕಿನ ಅಲ್ಪಸಂಖ್ಯಾತರ ತಾಲೂಕು ಮಾಹಿತಿ ಕೇಂದ್ರ ಅಥವಾ ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಕಾರವಾರ ದೂರವಾಣಿ ಸಂಖ್ಯೆ: 08382–220336 ನ್ನು ಸಂಪರ್ಕಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಸ್ತಮರಡಿಯಲ್ಲಿ ಸಾಮೂಹಿಕ ಶ್ರೀ ವರದಶಂಕರ ಪೂಜೆ ಹಾಗೂ ಧಾರ್ಮಿಕ ಸಭೆಯಲ್ಲಿ ಶಿವಮೂರ್ತಿ ಶ್ರೀ ಅಭಿಮತ

ಕುಟುಂಬದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದು

ಬೆಳಗಾವಿ: ಕುಟುಂಬದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮಹಿಳೆ ಕುಟುಂಬದ ಶಕ್ತಿಯಾಗಿದ್ದು, ಹೆಣ್ಣುಮಕ್ಕಳ ಒಗ್ಗಟ್ಟು ಸಮಾಜದ ಅಭಿವೃದ್ಧಿಗೆ ಬುನಾದಿಯಾಗಿದೆ. ದುಶ್ಚಟಮುಕ್ತ ಹಾಗೂ ಸದೃಢ ಸಮಾಜ ನಿರ್ಮಾಣ ಮಾಡುವಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ ಎಂದು ಅರಳಿಕಟ್ಟಿ ವಿರಕ್ತಮಠದ ಪರಮಪೂಜ್ಯ ಶ್ರೀ ಶಿವಮೂರ್ತಿ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ಮಾಸ್ತಮರಡಿ ಗ್ರಾಮದ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಖಾಸಬಾಗದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಆಯೋಜಿಸಲಾಗಿದ್ದ ಸಾಮೂಹಿಕ ಶ್ರೀ ವರದಶಂಕರ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ, ದಿವ್ಯ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಈ ವೇಳೆ ಸುಜ್ಞಾನ ನಿಧಿ ಶಿಷ್ಯವೇತನ ವಿತರಿಸಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಜಗದೀಶ ಶೆಟ್ಟರ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಮಹಿಳೆಯರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಉತ್ತಮ ಅವಕಾಶ ಕಲ್ಪಿಸಿದೆ. ಮಹಿಳೆಯರ ಆರ್ಥಿಕ ಸಬಲೀಕರಣ ಹಾಗೂ ಸ್ವಾವಲಂಬನೆಯ ಮೂಲಕ ಸದೃಢ ಸಮಾಜ ನಿರ್ಮಾಣ ಸಾಧ್ಯ. ಮಹಿಳೆಯರ ಅಭಿವೃದ್ಧಿಗೆ ಈ ಯೋಜನೆ ಮಹತ್ವದ ಶಕ್ತಿಯಾಗಿದ್ದು, ಕುಟುಂಬದ ಹಾಗೂ ಸಮಾಜದ ಆರ್ಥಿಕ ಬೆಳವಣಿಗೆಯಲ್ಲಿ ಮಹಿಳೆಯರ ಕೊಡುಗೆ ಅಪಾರವಾಗಿದೆ ಎಂದರು.



ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಮಾತನಾಡಿ, ಕುಟುಂಬ ನಿರ್ವಹಣೆಯಲ್ಲಿ ತಾಯಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕುಟುಂಬದ ಉಜ್ವಲ ಭವಿಷ್ಯಕ್ಕಾಗಿ ಮಹಿಳೆ ತನ್ನ ಜೀವನದ ಬಹುಪಾಲು ಸಮಯ ಹಾಗೂ ಸರ್ವಸ್ವವನ್ನೂ ತ್ಯಾಗ ಮಾಡುತ್ತಾಳೆ. ಆದ್ದರಿಂದ ಪ್ರತಿಯೊಬ್ಬರೂ ಮಹಿಳೆಯನ್ನು ತಾಯಿ ಮತ್ತು ಸಹೋದರಿಯ ರೂಪದಲ್ಲಿ ಗೌರವಿಸಬೇಕು. ಮಹಿಳೆಯರಿಗೆ ಪ್ರತಿದಿನ ಗೌರವ ಹಾಗೂ ಪ್ರೀತಿ ನೀಡುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಪೂಜಾ ಸಮಿತಿಯ ಅಧ್ಯಕ್ಷ ಶಂಕರ ಹಾಗೂ ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರಕಾಶಗೌಡ ರಾಜಶೇಖರ ಪಾಟೀಲ ಅವರು ಮಹಿಳಾ ಸಬಲೀಕರಣದ ಕುರಿತು ಪ್ರೇರಣಾದಾಯಕ ಮಾತುಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷರು ಪ್ರಕಾಶ್ ಗೌಡ ರಾಜಶೇಖರ್ ಪಾಟೀಲ, ಜಿಲ್ಲಾ ನಿರ್ದೇಶಕರಾದ ಜಯಶ್ರೀ ಪ್ರಕಾಶ್ ಪಾಟೀಲ, ಯೋಜನಾ ಅಧಿಕಾರಿಗಳಾದ ಸತೀಶ್ ನಾಯಕ್, ನಿಕಟ ಪೂರ್ವ ಅಧ್ಯಕ್ಷರಾದ ಸುಭಾಸ್ ಪಿ .ಸಿ, ಅಖಿಲ ಕರ್ನಾಟಕ ಜಿಲ್ಲಾ ಜನ ಜನಜಾಗೃತಿ ವೇದಿಕೆ ಬಸವರಾಜ್ ಸೊಪ್ಪಿಮಠ, ವಿರೂಪಾಕ್ಷಪ್ಪ ಇಟಗಿ, ಶ್ರೀಶೈಲ್ ಗೌಡ ರಾಮನಗೌಡ ಪಾಟೀಲ್, ಸುರೇಶ್ ಗೌಡಪ್ಪ ಪಾಟೀಲ, ಬಸವರಾಜ್ ರುದ್ರಗೌಡ ಪಾಟೀಲ್,

ಯಲ್ಲಪ್ಪ ಕಲ್ಲಪ್ಪ ಪರಂಡಿ, ಮಾಂತೇಶ್ ನಿಂಗನಗೌಡ ಪಾಟೀಲ್, ಯಲ್ಲಪ್ಪ ದೊಡ್ಡಪ್ಪ ತೋರಿಲೆ, ಮಹಾನಂದ ಮರಕಟ್ಟಿ, ಸಂದೀಪ್ ಯಲ್ಲಪ್ಪ ಕುರಂಗಿ,

ಗ್ರಾಮದ ಗುರುಹಿರಿಯರು, ಪೂಜಾ ಸಮಿತಿಯ ಸದಸ್ಯರು, ಒಕ್ಕೂಟದ ಪದಾಧಿಕಾರಿಗಳು ಹಾಗೂ ಸ್ವಸಹಾಯ ಸಂಘಗಳ ಸದಸ್ಯರು ಉಪಸ್ಥಿತರಿದ್ದರು. ಜ್ಞಾನವಿಕಾಸ ಸಮನ್ವಯಾಧಿಕಾರಿ ಗೀತಾ ಕಾರ್ಯಕ್ರಮ ನಿರೂಪಿಸಿದರು. ಮೇಲ್ವಿಚಾರಕಿ ಲಕ್ಷ್ಮವ್ವ ವಂದಿಸಿದರು.

2ನೇ ಹಂತದ ಜನಗಣತಿ ನಿಗಧಿತ ಅವಧಿಯಲ್ಲಿ ಮುಗಿಸಿ

ಕಾರವಾರ: 2027 ರ ಜನಗಣತಿಯ ಎರಡನೇ ಹಂತದ ವೇಳಾಪಟ್ಟಿಯು ಪ್ರಕಟವಾಗಿದ್ದು, ಗಣತಿ ಕಾರ್ಯಕ್ಕೆ ನಿಯೋಜಿಸಿರುವ ಅಧಿಕಾರಿಗಳು ನಿಗಧಿತ ವೇಳಾಪಟ್ಟಿಯಂತೆ ನಿಗಧಿತ ಅವಧಿಯಲ್ಲಿ ಗಣತಿ ಕಾರ್ಯವನ್ನು ಮುಕ್ತಾಯಗೊಳಿಸುವಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ನಿರ್ದೇಶನ ನೀಡಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಜಿಲ್ಲೆಯ ಎಲ್ಲಾ ನಗರ ಮತ್ತು ಗ್ರಾಮೀಣ ಚಾರ್ಜ್ ಅಧಿಕಾರಿಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜನಗಣತಿ ಅಂಗವಾಗಿ ಮನೆಮನೆ ಗಣತಿ ಕಾರ್ಯವು 2027ರ ಜನವರಿ 25 ರಿಂದ ಆರಂಭವಾಗಲಿದೆ. ಇದಕ್ಕೂ ಮುನ್ನ ಸ್ವಯಂ ಗಣತಿಗೆ ಅವಕಾಶ ಕಲ್ಪಿಸಲಾಗಿದ್ದು, ಜನವರಿ 10 ರಿಂದ 24 ರವರೆಗೆ 15 ದಿನಗಳ ಕಾಲಾವಕಾಶವನ್ನು ಸ್ವಯಂ ಗಣತಿಗೆ ನೀಡಲಾಗಿದೆ. ಸ್ವಯಂ ಗಣತಿ ಅವಧಿಯಲ್ಲಿ ಸಾರ್ವಜನಿಕರು ತಮ್ಮ ಕುಟುಂಬ ಹಾಗೂ ಮನೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸ್ವತಃ ದಾಖಲಿಸಿಕೊಳ್ಳಬಹುದಾಗಿದೆ. ಜನವರಿ 25 ರಿಂದ ಫೆಬ್ರವರಿ 28 ರವರೆಗೆ ಗಣತಿದಾರರು ಮನೆಗಳಿಗೆ ಭೇಟಿ ನೀಡಿ ಅಗತ್ಯ ಮಾಹಿತಿಯನ್ನು ಸಂಗ್ರಹಿಸಲಿದ್ದಾರೆ ಎಂದರು.

ಜನಗಣತಿಯ ಮಾಹಿತಿಯನ್ನು ನಿಖರವಾಗಿ ಮತ್ತು ಸಮಗ್ರವಾಗಿ ದಾಖಲಿಸುವುದು ಅತ್ಯಂತ ಪ್ರಾಮುಖ್ಯತೆ ಹೊಂದಿರುವುದರಿಂದ ಗಣತಿ ಕಾರ್ಯಕ್ಕೆ ನಿಯೋಜಿಸಿರುವ ಎಲ್ಲಾ ಅಧಿಕಾರಿಗಳು ತಮ್ಮ ಜವಾಬ್ದಾರಿಗಳನ್ನು ಅರಿತು ಯಾವುದೇ ಲೋಪಗಳಿಗೆ ಆಸ್ಪದ ನೀಡದಂತೆ ಕರ್ತವ್ಯ ನಿರ್ವಹಿಸುವಂತೆ ಜಿಲ್ಲಾಧಿಕಾರಿಗಳು ತಿಳಿಸಿದರು.ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ ಮತ್ತು ಗಣತಿ ಕಾರ್ಯಕ್ಕೆ ನಿಯೋಜಿಸಿರುವ ಅಧಿಕಾರಿಗಳು, ತರಬೇತುದಾರರು ಮತ್ತಿತರರು ಇದ್ದರು.



ಸುಭದ್ರ ಪ್ರಜಾಪ್ರಭುತ್ವ ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ ಮಹತ್ವದ್ದು: ಕೆ.ಎನ್ ಶಿವಕುಮಾರ

ಬೆಳಗಾವಿ: ಯುವಶಕ್ತಿ ಒಗ್ಗೂಡಿದರೆ ದೇಶದಲ್ಲಿ ಮಹತ್ತರ ಬದಲಾವಣೆ ತರಲು ಸಾಧ್ಯ. ಯುವಕರು ಮನಸ್ಸು ಮಾಡಿದರೆ ದೇಶವನ್ನು ಯಾವುದೇ ದಿಕ್ಕಿನಲ್ಲಾದರೂ ಮುನ್ನಡೆಸುವ ಶಕ್ತಿ ಹೊಂದಿದ್ದಾರೆ. ಯುವ ಸಮುದಾಯದಲ್ಲಿ ಸಂಸದೀಯ ವ್ಯವಸ್ಥೆಯ ಅರಿವು, ಸಂವಿಧಾನದ ಜ್ಞಾನ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸುವುದರಿಂದ ಸುಭದ್ರ ರಾಷ್ಟ್ರ ನಿರ್ಮಾಣಕ್ಕೆ ಅಗತ್ಯವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಎನ್ ಶಿವಕುಮಾರ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಸುವರ್ಣ ವಿಧಾನ ಸೌಧದ ಸೆಂಟ್ರಲ್ ಹಾಲ್‌ನಲ್ಲಿ ಮಂಗಳವಾರ (ನ.03) ನಡೆದ ಅಂತರಾಷ್ಟ್ರಿಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಜಿಲ್ಲಾಮಟ್ಟದ ಯುವ ಸಂಸತ್ತು ಸ್ಪರ್ಧೆ ಕಾರ್ಯಕ್ರಮ-2026 ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯುವಕರು ಸಂವಿಧಾನದ ರಕ್ಷಣೆ, ಪ್ರಜಾಪ್ರಭುತ್ವದ ಸಂರಕ್ಷಣೆ ಹಾಗೂ ರಾಷ್ಟ್ರದ ಏಕತೆ ಮತ್ತು ಅಖಂಡತೆಯ



ರಕ್ಷಣೆಯ ಉದ್ದೇಶಕ್ಕಾಗಿ ಒಗ್ಗೂಡಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಕಾರ್ಯಪ್ರವೃತ್ತರಾಗಬೇಕು. ಅಬ್ರಹಾಂ ಲಿಂಕನ್ ಅವರ ವ್ಯಾಖ್ಯಾನದಂತೆ, ಪ್ರಜಾಪ್ರಭುತ್ವವೆಂದರೆ ಪ್ರಜೆಗಳಿಂದ, ಪ್ರಜೆಗಳಿಗಾಗಿ ಮತ್ತು ಪ್ರಜೆಗಳಿಗೋಸ್ಕರ ನಡೆಯುವ ಆಡಳಿತ ವ್ಯವಸ್ಥೆಯಾಗಿದೆ ಎಂದರು.

ಈ ದೇಶದ ಪ್ರತಿಯೊಬ್ಬ ನಾಗರಿಕನೂ ಪ್ರಜೆಯಾಗಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯ ನಿರ್ಮಾಣ ಹಾಗೂ ಅದರ ಪರಿಣಾಮಕಾರಿ ಅನುಷ್ಠಾನದಲ್ಲಿ ಯುವಕರ ಪಾತ್ರ ಅತ್ಯಂತ ಪ್ರಮುಖವಾಗಿದೆ. ಇತ್ತೀಚಿನ ಬೆಳವಣಿಗೆಗಳು ಪ್ರಜಾಪ್ರಭುತ್ವದ ಮಹತ್ವವನ್ನು ಮತ್ತಷ್ಟು ಮನವರಿಕೆ ಮಾಡಿಕೊಟ್ಟಿವೆ. ರಾಷ್ಟ್ರ ನಿರ್ಮಾಣ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯ ಬಲವರ್ಧನೆಗೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಶಿವಕುಮಾರ ತಿಳಿಸಿದರು. ಇಂದಿನ ವಿದ್ಯಾರ್ಥಿಗಳು ಭವಿಷ್ಯದಲ್ಲಿ ದೇಶದ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಬಹುದು. ಇಂತಹ ಅವಕಾಶಗಳನ್ನು ಯುವ ಸಮುದಾಯಕ್ಕೆ ಒದಗಿಸುವ ಉದ್ದೇಶದಿಂದ ಸರ್ಕಾರ ಯುವ ಸಂಸತ್ತು ಕಾರ್ಯಕ್ರಮ ಆಯೋಜನೆ ಮಾಡಿದೆ. ಶೈಕ್ಷಣಿಕ ಚಟುವಟಿಕೆಯೊಂದಿಗೆ ಜೀವನದ ವಾಸ್ತವಿಕತೆಯನ್ನು ಅರಿತುಕೊಂಡು, ಭಾರತೀಯ ಪ್ರಜೆಯಾಗಿ ನಮ್ಮ ಜವಾಬ್ದಾರಿಗಳನ್ನು ಗುರುತಿಸಿಕೊಳ್ಳುವುದು ಮುಖ್ಯವಾಗಿದೆ ಎಂದು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಬಿ.ಜೆ. ಗಂಗಾಯಿ ಹೇಳಿದರು.

ದೇಶದಲ್ಲಿ ಜನಿಸಿದ ಪ್ರತಿಯೊಬ್ಬ ನಾಗರಿಕನಿಗೂ ರಾಷ್ಟ್ರದ ಏಕತೆ, ಸಮಗ್ರತೆ ಮತ್ತು ಅಖಂಡತೆಯನ್ನು ಕಾಪಾಡುವ ಜವಾಬ್ದಾರಿ ಇದೆ. ಅದೇ ರೀತಿ ದೇಶದ ಪ್ರತಿಯೊಬ್ಬ ಪ್ರಜೆಗೂ ಜನ್ಮಸಿದ್ಧವಾಗಿ ದೊರೆಯುವ ಹಕ್ಕುಗಳು ಮತ್ತು ಅವಕಾಶಗಳ ಬಗ್ಗೆ ಅರಿವು ಹೊಂದಿರಬೇಕು ಎಂದು ಬಿ.ಜೆ. ಗಂಗಾಯಿ ಅವರು ವಿದ್ಯಾರ್ಥಿಗಳಿಗೆ ಹೇಳಿದರು.

ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಹಾಗೂ ಯುವ ಸಮುದಾಯಕ್ಕೆ ಸಂಸದೀಯ ವ್ಯವಸ್ಥೆಯ ಪರಿಚಯ ಮಾಡಿಕೊಡುವ ಉದ್ದೇಶದಿಂದ ಸೆಪ್ಟೆಂಬರ್ 15 ರಂದು ಅಂತರ ರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ರಾಜ್ಯಾದ್ಯಂತ ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಯುವ ಸಂಸತ್ತು ಕಾರ್ಯಕ್ರಮದ ಮೂಲಕ ಯುವಕರಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ವಿಚಾರಧಾರೆಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಸವರಾಜ ಚನ್ನಯ್ಯನವರ ತಿಳಿಸಿದರು.

ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ರವೀಂದ್ರ ಬಂಗಾರಪ್ಪನವರ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಾಮನಗೌಡ ಕನ್ನೊಳ್ಳಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಎಂ.ಎಂ.ಕಾಂಬಳೆ, ಶಿಕ್ಷಣ ಇಲಾಖೆ ಅಧಿಕಾರಿ ಬಸವರಾಜ ಮಿಲ್ಲಾನಟ್ಟಿ ಸೇರಿದಂತೆ ವಿವಿಧ ಕಾಲೇಜು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ವಿದ್ಯಾರ್ಥಿಗಳ ಅಣುಕು ಸಂಸತ್

ಯುವ ಸಂಸತ್ತು ಕಾರ್ಯಕ್ರಮದಲ್ಲಿ ಪದವಿ, ಪದವಿ ಪೂರ್ವ ಹಾಗೂ ಕಾನೂನು ಪದವಿ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 230 ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದರು. ವಿದ್ಯಾರ್ಥಿಗಳು ಅಣಕು ಸಂಸತ್ ಅಧಿವೇಶನವನ್ನು ಪ್ರದರ್ಶಿಸುವ ಮೂಲಕ ಸಂಸದೀಯ ಕಲಾಪಗಳು, ಚರ್ಚಾ ವಿಧಾನ, ಪ್ರಶ್ನೋತ್ತರ ಪ್ರಕ್ರಿಯೆ ಹಾಗೂ ಪ್ರಜಾಪ್ರಭುತ್ವದ ಕಾರ್ಯವೈಖರಿಯನ್ನು ಪ್ರಾಯೋಗಿಕವಾಗಿ ಅನಾವರಣಗೊಳಿಸಿದರು. ಈ ಮೂಲಕ ವಿದ್ಯಾರ್ಥಿಗಳಲ್ಲಿ ಸಂಸದೀಯ ವ್ಯವಸ್ಥೆ, ಸಂವಿಧಾನದ ಆಶಯಗಳು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳ ಕುರಿತು ಅರಿವು ಮೂಡಿಸಲಾಯಿತು.

ಸಮುದಾಯ ಭವನಗಳು ವಿದ್ಯಾ ಕೇಂದ್ರಗಳಂತೆ: ಸಂಸದ ಶೆಟ್ಟರ್



ಯರಗಟ್ಟಿ: ಸಮುದಾಯ ಭವನಗಳು ವಿದ್ಯಾ ಕೇಂದ್ರಗಳಂತೆ ಸದಾ ಚಟುವಟಿಕೆಯಿಂದ ಕೂಡಿರಬೇಕು. ಆಗ ಮಾತ್ರ ಭವನಗಳ ನಿರ್ಮಾಣಕ್ಕೆ ಅರ್ಥ ಬರುತ್ತದೆ ಎಂದು ಲೋಕಸಭಾ ಸದಸ್ಯ ಹಾಗೂ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ ಹೇಳಿದರು.

ಸಮೀಪದ ಆಲದಕಟ್ಟಿ ಕೆ.ಎಂ ಗ್ರಾಮದಲ್ಲಿ ಸೋಮವಾರ ಶ್ರೀ ಬ್ರಹ್ಮಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ನೂತನ ಸಾಂಸ್ಕೃತಿಕ ಸಭಾಭವನ ಉದ್ಘಾಟಿಸಿ ಮಾತನಾಡಿದ ಅವರು, ದೇವಾಲಯದಂತೆ ಇದನ್ನು ಶ್ರದ್ಧೆ ಭಕ್ತಿಯಿಂದ ನಿರ್ವಹಣೆಮಾಡಿ ಸದಾ ಕ್ರಿಯಾಶೀಲವಾಗಿ ಭವನದಲ್ಲಿ ಚರ್ಚೆ, ಶೈಕ್ಷಣಿಕ ಸಭೆ ಸಮಾರಂಭಗಳನ್ನು ನಡೆಸಬೇಕು ಎಂದು ಹೇಳಿದರು.

ಈ ಭಾಗದ ರೈಲ್ವೆ ಮಾರ್ಗಕ್ಕೂ ಮನವಿ ಸಲ್ಲಿಸಿದ್ದು ಶ್ರೀ ರೇಣುಕಾ ಯಲ್ಲಮ್ಮ ದೇವಿ ಭಕ್ತರ ಅನುಕೂಲಕ್ಕಾಗಿ ಸವದತ್ತಿ ಮಾರ್ಗವಾಗಿ ಲೋಕಾಪುರ- ಧಾರವಾಡ ನಡುವೆ ರೈಲ್ವೆ ಮಾರ್ಗ ನಿರ್ಮಿಸಲು ಸಮೀಕ್ಷೆ ನಡೆಸುವಂತೆ ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಮನವಿ ಸಲ್ಲಿಸಲಾಗಿದೆ. ನಾನು ಸಕ್ಕರೆ ಸಚಿವ ಮತ್ತು ರಾಜ್ಯ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ, ಕಬ್ಬಿನ ಬೆಲೆ ನಿಗದಿ ಸಮಸ್ಯೆಗಳನ್ನು ಪರಿಹರಿಸಲು ನಿರಂತರ ಪ್ರಯತ್ನಗಳನ್ನು ಮಾಡಿದ್ದೇನೆ ಎಂದರು.

ನಾನು ಸಕ್ಕರೆ ಸಚಿವ ಮತ್ತು ರಾಜ್ಯ ಮುಖ್ಯಮಂತ್ರಿಆಗಿದ್ದ ಅವಧಿಯಲ್ಲಿ, ಕಬ್ಬಿನ ಬೆಲೆ ನಿಗದಿ ಸಮಸ್ಯೆಗಳನ್ನು ಪರಿಹರಿಸಲು ನಿರಂತರ ಪ್ರಯತ್ನಗಳನ್ನು ಮಾಡಿದ್ದೇನೆ ಎಂದು ಶೆಟ್ಟರ್ ನೆನಪಿಸಿಕೊಂಡರು.

"ರಾಜ್ಯ ಸಲಹಾ ಬೆಲೆಯನ್ನು ನಿರ್ಧರಿಸುವ ಕಾನೂನು ಈಗಾಗಲೇ ಜಾರಿಯಲ್ಲಿದೆ, ಆದರೆ ಪ್ರಸ್ತುತ ರಾಜ್ಯ ಸರ್ಕಾರ ಎರಡು ತಿಂಗಳ ಪ್ರತಿಭಟನೆಗಳ ನಂತರವೂ ಮೌನವಾಗಿದೆ. ನ್ಯಾಯಯುತ ಬೆಲೆಗಾಗಿ ರೈತರು ಒಗ್ಗಟ್ಟಿನಿಂದ ಹೋರಾಡಬೇಕು. ರೈತರು ಒಟ್ಟಾಗಿ ನಿಂತಾಗ, ಅವರು ಸರ್ಕಾರವನ್ನು ಕೇಳುವಂತೆ ಮಾಡಬಹುದು ಎಂದು ಇತಿಹಾಸ ತೋರಿಸುತ್ತದೆ" ಎಂದು ಅವರು ಹೇಳಿದರು. ಕೇಂದ್ರವು ಘೋಷಿಸಿದ 10.5% ವಸೂಲಾತಿ ದರವನ್ನು ಆಧರಿಸಿ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು ತಿದ್ದುಪಡಿ ಮಾಡುವ ರೈತರ ಬೇಡಿಕೆಯನ್ನು ಪರಿಹರಿಸಲು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಸಂಬಂಧಿತ ಅಧಿಕಾರಿಗಳು ಮತ್ತು ಕೇಂದ್ರ ಸರ್ಕಾರದೊಂದಿಗೆ ವೈಯಕ್ತಿಕವಾಗಿ ಮಾತುಕತೆ ನಡೆಸುವುದಾಗಿ ಜಗದೀಶ ಶೆಟ್ಟರ ಹೇಳಿದರು. ಮುನವಳ್ಳಿ ಸೋಮಶೇಖರ ಮಠದ ಮುರುಘೇಂದ್ರ ಸ್ವಾಮೀಜಿ ಮಾತನಾಡಿ, ಧಾರ್ಮಿಕ ಕೇಂದ್ರಗಳು ಸಮಾಜದಲ್ಲಿ ಶಾಂತಿ, ಸೌಹಾರ್ದತೆಯನ್ನು ಮೂಡಿಸುವುದರ ಜತೆಗೆ ಸನ್ಮಾರ್ಗವನ್ನು ಬೆಳೆಸುತ್ತವೆ ಎಂದು ಹೇಳಿದರು.

ಬಿಡಿಸಿಸಿ ಬ್ಯಾಂಕ ಮಾಜಿ ನಿರ್ದೇಶಕ ಪಂಚನಗೌಡ ದ್ಯಾಮನಗೌಡ್ರ, ಬೆಳಗಾವಿ ಕೆಎಂಫ್ ಮಾಜಿ ಅಧ್ಯಕ್ಷ ಎಸ್. ಎಸ್.ಮುಗಳಿ, ತಾಪಂ ಮಾಜಿ ಅಧ್ಯಕ್ಷ ವಿನಯಕುಮಾರ ದೇಸಾಯಿ, ತಾಲೂಕ ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ಮಹಾದೇವ ಮುರಗೋಡ ಮಾತನಾಡಿದರು.

ವೇಮೂ ವೀರಯ್ಯ ಹಿರೇಮಠ, ಸವದತ್ತಿ ಬಿಜೆಪಿ ಮಂಡಲ ಮಾಜಿ ಅಧ್ಯಕ್ಷ ಈರಣ್ಣ ಚಂದರಗಿ, ಉಪಾಧ್ಯಕ್ಷ ಸಂಜುಕುಮಾರ ನವಲಗುಂದ, ಮುಖಂಡ ಮಡಿವಾಳಪ್ಪ ಬಿದರಗಡ್ಡಿ, ಬಸಲಿಂಗಪ್ಪ ಚವಡಪ್ಪನವರ, ಬಸವರಾಜ ಹಳೇಮನಿ, ಕುಮಾರ ಹಿರೇಮಠ, ಮೈತ್ರಾ ಹೊಂಗಲ, ಗೌಡಪ್ಪ ಸವದತ್ತಿ, ಶಂಕರ ಮುಗಳಿ, ಶ್ರೀಧರ ಕನ್ನಪ್ಪನವರ, ಪ್ರಕಾಶ ಚವಡಪ್ಪನವರ, ಗುತ್ತಿಗೆದಾರ ನಾರಾಯಣ ಸುಭೇದಾರ ಸೇರಿದಂತೆ ಮತ್ತಿತರಿದ್ದರು. ಶಿಕ್ಷಕ ಬಸನಗೌಡ ಅಣ್ಣಿಗೇರಿ ನಿರೂಪಿಸಿ ವಂದಿಸಿದರು.

ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೆ ತರಲು ಆಗ್ರಹ



ರಬಕವಿ-ಬನಹಟ್ಟಿ: ವಕೀಲರಿಗೆ ಸೂಕ್ತ ಭದ್ರತೆ ಇಲ್ಲದೆ ಇರುವುದರಿಂದ ನಿರ್ಭಿತಿಯಿಂದ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಇದು ಆತಂಕಕಾರಿ ಬೆಳವಣಿಗೆಯಾಗಿದೆ. ಆದ್ದರಿಂದ ರಾಜ್ಯ ಸರ್ಕಾರ ಆದಷ್ಟು ಬೇಗನೆ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತರಬೇಕು ಎಂದು ವಕೀಲರ ಸಂಘದ ಅಧ್ಯಕ್ಷ ಶ್ರೀಕಾಂತ ಕುಲಕರ್ಣಿ ತಿಳಿಸಿದರು.

ಮಂಗಳವಾರ ಅವರು ರಬಕವಿ ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿಯವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದರು. ರಾಜ್ಯದಲ್ಲಿ ವಕೀಲರ ಮೇಲೆ ನಿರಂತರವಾಗಿ ಹಲ್ಲೆಗಳು ನಡೆಯುತ್ತಿವೆ. ಬೆಂಗಳೂರಿನ ವಕೀಲರಾದ ಶ್ರೀ ರಾಮ ಮತ್ತು ಮಂಜುನಾಥರ ಮೇಲೆ ಮಾರಣಾಂತಿಕ ಹಲ್ಲೆಗಳು ಖಂಡನೀಯವಾದವುಗಳಾಗಿವೆ. ಈ ಕೃತ್ಯಗಳಿಗೆ ಕಾರಣರಾದ ದುಷ್ಕರ್ಮಿಗಳನ್ನು ಪತ್ತೆ ಹಚ್ಚಿ ಅವರ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕು. ವಕೀಲರ ಮೇಲೆ ನಡೆದ ಹಲ್ಲೆಯನ್ನು ನ್ಯಾಯಾಂಗ ಮತ್ತು ಪ್ರಜಾಪ್ರಭುತ್ವದ ವ್ಯವಸ್ಥೆಯ ಮೇಲೆ ನಡೆದ ಹಲ್ಲೆಯಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಗಮನ ನೀಡಿ ಆದಷ್ಟು ಬೇಗನೆ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ಅಗತ್ಯವಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ರಾಜ್ಯದಲ್ಲಿರುವ ವಕೀಲರಿಗೆ ಅನುಕೂಲವಾಗಲಿದೆ ಎಂದು ಶ್ರೀಕಾಂತ ಕುಲಕರ್ಣಿ ತಿಳಿಸಿದರು.

ಸಂಘದ ಕಾರ್ಯದರ್ಶಿ ರವಿ ಸಂಪಗಾವಿ, ಸುರೇಶ ಗೊಳಸಂಗಿ, ಈಶ್ವರಚಂದ್ರ ಭೂತಿ, ರಾಜು ಫಕೀರಪೂರ, ಬಿ.ಎನ್.ಗುರುವ, ಎಸ್. ಎಸ್.ಸಲಬನ್ನವರ, ಮಹಾಂತೇಶ ಪದಮಗೊಂಡ, ಎಸ್.ಎ.ಪಾಟೀಲ, ಮುಕಂದ ಕೋಪರ್ಡೆ, ಬಂಗಿ ಸೇರಿದಂತೆ ಅನೇಕರು ಇದ್ದರು.

ವಕೀಲರ ಹಿತರಕ್ಷಣಾ ಕಾಯ್ದೆ ಇನ್ನಷ್ಟು ಕಠಿಣಗೊಳಿಸುವಂತೆ ಆಗ್ರಹಿಸಿ ಮನವಿ



ಗೋಕಾಕ: ಕರ್ನಾಟಕ ರಾಜ್ಯದಲ್ಲಿ ವಕೀಲರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ನಿಯಂತ್ರಣಕ್ಕಾಗಿ ವಕೀಲರ ಹಿತರಕ್ಷಣಾ ಕಾಯ್ದೆಯನ್ನು ಇನ್ನಷ್ಟು ಕಠಿಣಗೊಳಿಸುವಂತೆ ಆಗ್ರಹಿಸಿ ಮಂಗಳವಾರದಂದು ನಗರದ ಬಸವೇಶ್ವರ ವೃತ್ತದಲ್ಲಿ ಕರ್ನಾಟಕ ರಾಜ್ಯ ವಕೀಲರ ಪರಿಷತ್ತು, ಬೆಂಗಳೂರು ವಕೀಲರ ಸಂಘ ಹಾಗೂ ಜಿಲ್ಲಾ ವಕೀಲರ ಸಂಘ ಕರೆ ನೀಡಿದ್ದ ಕರ್ನಾಟಕ ರಾಜ್ಯ ವಕೀಲರ ಪ್ರತಿಭಟನೆಯನ್ನು ಬೆಂಬಲಿಸಿ ಇಲ್ಲಿನ ವಕೀಲರ ಸಂಘದ ಪದಾಧಿಕಾರಿಗಳು ಕಲಾಪ ಬಹಿಷ್ಕರಿಸಿ ರಸ್ತೆಗಿಳಿದು ಪ್ರತಿಭಟನೆ ನಡೆಯಿಸಿ, ತಹಶೀಲ್ದಾರ ಮುಖಾಂತರ ರಾಜ್ಯಪಾಲರಿಗೆ ಮನವಿ ಅರ್ಪಿಸಿದರು.

ಪ್ರತಿಭಟನಾ ನಿರತರನ್ನು ಉದ್ದೇಶಿಸಿ ಮಾತನಾಡಿದ ವಕೀಲರ ಸಂಘದ ಅಧ್ಯಕ್ಷ ಸುಭಾಷಚಂದ್ರ ಬಿ.ಪಾಟೀಲ ಸಂವಿಧಾನದ ಎರಡನೇ ಅಂಗವಾಗಿ ಕಾರ್ಯ ನಿರ್ವಹಿಸುತ್ತಿರುವ ವಕೀಲರ ಮೇಲೆ ಪದೇ ಪದೇ ಹಲ್ಲೆ ನಡೆಯುತ್ತಿರುವುದು ವಿಷಾದನೀಯ. ಭಾರತದಲ್ಲಿ ವಕೀಲರಿಗೆ ತನ್ನದೇ ಆದ ಘನತೆ ಗೌರವವಿದೆ. ರಾಜ್ಯದ ಹಲವು ಕಡೆ ವಕೀಲರ ಮೇಲೆ ನಿರಂತರ ಹಲ್ಲೆ ಆಗುದನ್ನು ತಡೆದು,ಈಗಾಗಲೇ ಜಾರಿಯಲ್ಲಿರುವ ವಕೀಲರ ಹಿತರಕ್ಷಣಾ ಕಾಯ್ದೆಯನ್ನು ಇನ್ನಷ್ಟು ಕಠಿಣಗೊಳಿಸಬೇಕು ಎಂದು ಸರಕಾರವನ್ನು ಆಗ್ರಹಿಸಿದರು.

ಈ ಸಂದರ್ಭದಲ್ಲಿ ನ್ಯಾಯವಾದಿಗಳಾದ ಶಶಿಧರ ದೇಮಶೆಟ್ಟಿ, ವಿ ವಾಯ್ ಜಾಗನೂರ, ಬಿ ಆರ್ ದಂಡಿನ, ವಿ ಬಿ ಮೆಳವಂಕಿ, ಎಸ್ ಬಿ ವಡೆರಟ್ಟಿ, ಎ ಸಿ ಕಂಡರಟ್ಟಿ, ವಿ ಜಿ ಸಿದ್ದಾಪೂರಮಠ, ಸಿ ಡಿ ಹುಕ್ಕೇರಿ, ಬಸವರಾಜ ಕೋಟಗಿ, ಶಂಕರ ಗೋರೋಶಿ, ಆರ್ ಎಸ್ ನಿಡಸೋಸಿ, ಬಿ ಎಚ್ ಮುಲ್ಲಾ, ಎಂ ಆರ್ ನಿಡಸೋಸಿ, ಎ ಬಿ ಬೆಟಗೇರಿ, ಪಿ ಎಂ ಚಿಕ್ಕೋಡಿ, ರಾಮೇಶ್ವರ ಕಲ್ಯಾಣಶೆಟ್ಟಿ, ಚೇತನ್ ಖಡಕಭಾವಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನಂಬಿಕೆ ಆಧಾರದ ಮೇಲೆ ದೇವರನ್ನು ಪೂಜಿಸಿರಿ

ಬೈಲಹೊಂಗಲ: ಭಗವಂತನ ಕೃಪೆ ಮನುಷ್ಯನಿಗೆ ಆಗಬೇಕಾದರೆ ನಂಬಿಕೆಯಿಂದ ಪೂಜಿಸಿ, ಪ್ರಾರ್ಥಿಸಿ ಬದುಕಿನಲ್ಲಿ ನೆಮ್ಮದಿ ಪಡೆಯಬೇಕೆಂದು ಬಾಲಗಾಂವ ಗುರುದೇವಾಶ್ರಮದ ಅಮೃತಾನಂದ ಸ್ವಾಮೀಜಿ ಹೇಳಿದರು.

ಅವರು ತಾಲೂಕಿನ ಹೊಳಿಹೊಸೂರ ಗ್ರಾಮದ ಶ್ರೀ ಗ್ರಾಮದೇವಿ ದೇವಸ್ಥಾನದಲ್ಲಿ ಮಂಗಳವಾರ ಜರುಗಿದ ಅಧ್ಯಾತ್ಮ ಪ್ರವಚನ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿ, ದೇವಸ್ಥಾನಗಳನ್ನು ಕಟ್ಟುವವರ ಜೊತೆಗೆ ದೇವರನ್ನು ಪೂಜಿಸಿ ಮುಕ್ತಿ ಪಡೆಯಬೇಕು. ಸದಾ ಕಾಲ ಪ್ರಾರ್ಥನೆ, ಸತ್ಸಂಗ ಅಧ್ಯಾತ್ಮದ ಕಾರ್ಯಗಳನ್ನು ಆ ದೇವರ ಮಂದಿರದಲ್ಲಿ ಭಕ್ತರು ನೆರವೇರಿಸುತ್ತಾ ಸಾಗಬೇಕೆಂದರು. ದತ್ತವಾಡದ ಬಾಬಾ ಮಹಾರಾಜ ಆಶ್ರಮದ ಋಷಿಕೇಶ ಮಾಹಾರಾಜ, ಮುಮ್ಮಿಗಟ್ಟಿಯ ಬಸವಾನಂದ ಸ್ವಾಮೀಜಿ, ದೇಗಾಂವ ಗುರು ಮಡಿವಾಳೇಶ್ವರ ಮಠದ ವಿರೇಶ್ವರ ಸ್ವಾಮೀಜಿ, ಶಾಸಕ ಬಾಬಾಸಾಹೇಬ ಪಾಟೀಲ, ಜಿ.ಪಂ.ಮಾಜಿ ಸದಸ್ಯೆ ರೋಹಿಣಿ ಪಾಟೀಲ ವೇದಿಕೆ ಮೇಲಿದ್ದರು.

ದಂತ ವೈದ್ಯ ಡಾ.ಜಗದೀಶ ಹಾರುಗೊಪ್ಪ, ಶ್ರೀ ಗ್ರಾಮದೇವಿ ದೇವಸ್ಥಾನದ ಜೀರ್ಣೋದಾರ ಕಮೀಟಿಯ ಅಧ್ಯಕ್ಷ ಶಿವರುದ್ರಪ್ಪ ಕುರಬೆಟ್, ಉಪಾಧ್ಯಕ್ಷ ಬಾಬು ಕಟ್ಟಿ, ಕಾರ್ಯದರ್ಶಿ ದೇಮಪ್ಪ ತಂಗಾಳಿ, ಖಜಾಂಚಿ ಬಾಬು ನಾಯ್ಕರ, ಸದಸ್ಯರುಗಳಾದ ಶಂಕರಗೌಡಾ ಪಾಟೀಲ, ಚಂದ್ರಪ್ಪ ಆಲದಕಟ್ಟಿ, ಈರಪ್ಪ ಕಾವಳದ, ಯಲ್ಲಪ್ಪ ರಾಜನಕಟ್ಟಿ, ಅಡಿವೆಪ್ಪ ಬೆನಕಟ್ಟಿ, ಬಸವರಾಜ ಕುಂಬಾರ, ಸಿದ್ದಾರೂಢ ಹಲಕಿ, ಯಲ್ಲಪ್ಪ ಪೂಜೇರ, ಬಸಲಿಂಗಪ್ಪ ಗಿರೆನ್ನವರ, ಯಲ್ಲವ್ವ ದೇಗಲಳ್ಳಿ ಮುಂತಾದವರು ಉಪಸ್ಥಿತರಿದ್ದರು.

ರುದ್ರೇಶ ಹುದಲಿ ಸ್ವಾಗತಿಸಿದರು. ಬಸವಾನಂದ ಶರಣರು ನಿರೂಪಿಸಿದರು. ಉಮೇಶ ಗಂಗಾಧರಮಠ ಇವರಿಂದ ವಚನ ಗಾಯನ ಜರುಗಿತು. ಸತ್ಸಂಗ ಯುಕರಿಂದ ಗುರುಕರಣ ತ್ರಿವಿಧಿ ಗಾಯನ ನಡೆಯಿತು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು, ಗಣ್ಯರು, ನಾಗರಿಕರು ಪಾಲ್ಗೊಂಡಿದ್ದರು. ಇದಕ್ಕೂ ಮೊದಲು ಗ್ರಾಮದಲ್ಲಿ ಪೂಜ್ಯ ಅಮೃತಾನಂದ ಶ್ರೀಗಳನ್ನು ಆರತಿ, ಕುಂಭ, ಭಜನೆ, ವಾಲಗಳೊಂದಿಗೆ ಅದ್ದೂರಿಯಾಗಿ ವೇದಿಕೆಗೆ ಬರಮಾಡಿಕೊಳ್ಳಲಾಯಿತು. ಅನ್ನ ಪ್ರಸಾದ ಏರ್ಪಡಿಸಲಾಗಿತ್ತು.





ಪತ್ರಕರ್ತ ರಾಜು ಗಾಲಿಗೆ ಸನ್ಮಾನ

ಮೋಳೆ: ಬೆಳಗಾವಿ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಅಥಣಿಯ ಹಿರಿಯ ಪತ್ರಕರ್ತ ರಾಜು ಗಾಲಿ ಅವರನ್ನು ಹುಕ್ಕೇರಿ ಹಿರೇಮಠ ಸಂಸ್ಥಾನದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಷ.ಬ್ರ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು. ನಗರದ ಲಕ್ಷ್ಮಿ ಟೇಕಡಿಯಲ್ಲಿರುವ ಹುಕ್ಕೇರಿ ಹಿರೇಮಠದಲ್ಲಿ ಇಂದು ನಡೆದ ಸರಳ ಸಮಾರಂಭದಲ್ಲಿ ಶ್ರೀಗಳು, ಪತ್ರಕರ್ತ ರಾಜು ಗಾಲಿ ಅವರಿಗೆ ಶಾಲು ಹೊದಿಸಿ, ಶ್ರೀಫಲ ಹಾಗೂ ಸ್ಮರಣಿಕೆ ನೀಡಿ ಆಶೀರ್ವದಿಸಿದರು.

ಈ ವೇಳೆ ಸನ್ಮಾನಿಸಿ ಮಾತನಾಡಿದ ಹುಕ್ಕೇರಿ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, "ರಾಜು ಗಾಲಿ ಅವರು ಕೇವಲ ಪತ್ರಕರ್ತರಲ್ಲ, ಉತ್ತಮ ಬರಹಗಾರರೂ ಹೌದು. ಮಠ-ಮಾನ್ಯಗಳು, ಧರ್ಮ ಮತ್ತು ಸಮಾಜದ ಬಗ್ಗೆ ಅವರಿಗೆ ಅಪಾರ ಗೌರವವಿದೆ. ಕನ್ನಡ ನಾಡು-ನುಡಿ ಹಾಗೂ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕೆಲಸವನ್ನು ಅವರು ತಮ್ಮ ಲೇಖನಿಯ ಮೂಲಕ ನಿರಂತರವಾಗಿ ಮಾಡುತ್ತಿದ್ದಾರೆ. ಅವರ ಈ ಸೇವೆಯನ್ನು ಗುರುತಿಸಿ ಜಿಲ್ಲಾಡಳಿತವು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ನೀಡಿರುವುದು ಅತ್ಯಂತ ಸೂಕ್ತವಾಗಿದೆ. ಅವರ ಲೇಖನಿ ಇನ್ನಷ್ಟು ಚುರುಕಾಗಿ, ಕನ್ನಡದ ಸೇವೆ ನಿರಂತರವಾಗಿ ಮುಂದುವರಿಯಲಿ" ಎಂದು ಹಾರೈಸಿದರು. ಪ್ರಶಸ್ತಿ ಪುರಸ್ಕೃತ ರಾಜು ಗಾಲಿ ಮಾತನಾಡಿ, "ಹುಕ್ಕೇರಿ ಶ್ರೀಗಳ ಆಶೀರ್ವಾದ ಹಾಗೂ ಸನ್ಮಾನದಿಂದ ನನ್ನ ಜವಾಬ್ದಾರಿ ಇನ್ನಷ್ಟು ಹೆಚ್ಚಾಗಿದೆ. ಈ ಪ್ರಶಸ್ತಿ ನನಗೆ ಸಿಕ್ಕಿದ್ದಲ್ಲ, ಬದಲಿಗೆ ಕನ್ನಡ ಪತ್ರಿಕೋದ್ಯಮಕ್ಕೆ ಸಿಕ್ಕ ಗೌರವ ಎಂದು ಭಾವಿಸುತ್ತೇನೆ" ಎಂದರು.

ನೂತನ ಮಾರುತಿ ಸುಜುಕಿ ಅರೆನಾ ಶೋರೂಂ ಉದ್ಘಾಟನೆ

ಬೆಳಗಾವಿ: ಬೆಳಗಾವಿಯ ವಿಶ್ವಾಸಾರ್ಹ ವಾಹನ ಮಾರಾಟ ಸಂಸ್ಥೆಗಳಲ್ಲಿ ಒಂದಾಗಿರುವ ಮಂಗೇಶ್ ಮೋಟಾರ್ಸ್ ನ ನೂತನ ಮಾರುತಿ ಸುಜುಕಿ ಅರೆನಾ ಶೋರೂಂ ಅನ್ನು ಕೆಎಲ್‌ಇ ಸಂಸ್ಥೆಯ ಗೌರವಾಧ್ಯಕ್ಷ, ರಾಜ್ಯಸಭೆಯ ಮಾಜಿ ಸದಸ್ಯ ಪದ್ಮಶ್ರೀ ಡಾ.ಪ್ರಭಾಕರ ಕೋರೆ ಸೋಮವಾರ ಉದ್ಘಾಟಿಸಿದರು.

ದೇಶಪಾಂಡೆ ಕುಟುಂಬದ 4ನೇ ಜನರೇಶನ್ ಉದ್ಯಮ ಮುಂದುವರಿಸುತ್ತಿರುವುದು ಅತ್ಯಂತ ಖುಷಿಯ ಸಂಗತಿ. ಅವರು ಬೆಳಗಾವಿಯ ಬೆಳವಣಿಗೆಯಲ್ಲಿ ದೊಡ್ಡ ಕೊಡುಗೆ ನೀಡಿದ್ದಾರೆ. ಉದ್ಯಮ ಯಶಸ್ವಿಯಾಗಲಿ ಎಂದು ಕೋರೆ ಹಾರೈಸಿದರು.

ಮಾರುತಿ ಸಂಸ್ಥೆ ವಾಹನ ಉದ್ಯಮಕ್ಕೆ ಬಂದ ನಂತರ ದೇಶದ ವಾಹನ ಉದ್ಯಮದ ಸ್ಥಿತಿಯೇ ಬದಲಾಯಿತು. ಈಗ ಶೇ. 50ಕ್ಕಿಂತ ಹೆಚ್ಚು ಪಾಲು ಹೊಂದಿದೆ. ಕಾರು ಉದ್ಯಮ ದೇಶದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿದೆ ಎಂದರು.

ಖ್ಯಾತ ಉದ್ಯಮಿ ಹಾಗೂ ವಾಹನ ಬಿಡಿಭಾಗಗಳ ತಯಾರಕರಾದ ರಾಮ ಭಂಡಾರೆ ಮಾತನಾಡಿ, ವಿಶ್ವಾಸಾರ್ಹತೆಯಿಂದಾಗಿ ಮಾರುತಿ ಕಾರು ಅತ್ಯಂತ ವೇಗವಾಗಿ ಬೆಳವಣಿಗೆ ಕಂಡಿದೆ. ದೇಶಪಾಂಡೆ ಕುಟುಂಬ ಅತ್ಯಂತ ಯಶಸ್ವಿಯಾಗಿ ಉದ್ಯಮ ನಡೆಸಿಕೊಂಡು ಬಂದಿದೆ ಎಂದರು. ಬೆಳಗಾವಿ ಫೆರೋಕಾಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಐಆರ್‌ಸಿಟಿಸಿ ಆಡಳಿತ ಮಂಡಳಿಯ ಸ್ವತಂತ್ರ ನಿರ್ದೇಶಕರಾದ ಡಾ. ಸಚಿನ್ ಸಬ್ನಿಸ್, ಮಾರುತಿ ಜನಸಾಮಾನ್ಯರ ಕಾರು ಎಂದು ಗುರುತಿಸಲ್ಪಟ್ಟಿದೆ. ಎಲ್ಲರ



ಜೀವನದ ಭಾಗವಾಗಿದೆ. ದೇಶಪಾಂಡೆ ಕುಟುಂಬ ಅತ್ಯಂತ ಜನಸ್ನೇಹಿ ಸೇವೆ ಸಲ್ಲಿಸುತ್ತಿದೆ ಎಂದರು.

ಮಂಗೇಶ ಮೋಟಾರ್ಸ್ ನಿರ್ದೇಶಕ ಕಪಿಲ ದೇಶಪಾಂಡೆ ಸ್ವಾಗತಿಸಿದರು. ನಿರ್ದೇಶಕಿ ಡಾ.ನೀತಾ ದೇಶಪಾಂಡೆ, ರಾಜೇಂದ್ರ ಬೆಳಗಾಂವ್ಕರ್, ರಾಹುಲ್ ದೇಶಪಾಂಡೆ ಅತಿಥಿಗಳನ್ನು ಪರಿಚಯಿಸಿದರು. ಆಸ್ನಾ ದೇಶಪಾಂಡೆ ಅತಿಥಿಗಳನ್ನು ಗೌರವಿಸಿದರು. ವ್ಯವಸ್ಥಾಪಕ ನಿರ್ದೇಶಕ ರೋಹಿತ ದೇಶಪಾಂಡೆ ಪ್ರಾಸ್ತಾವಿಕವಾಗಿ ಮಾತನಾಡಿ ತಮ್ಮ ಕುಟುಂಬದ ಉದ್ಯಮ ಪ್ರಯಾಣವನ್ನು ವಿವರಿಸಿದರು. ಉಪಾಧ್ಯಕ್ಷೆ ಪ್ರಾಂಜಲ ಶಹ ವಂದಿಸಿದರು.

ಇದೇ ವೇಳೆ ಮೊದಲ ಗ್ರಾಹಕರಿಗೆ ಕೀ ಹಸ್ತಾಂತರಿಸಲಾಯಿತು. ದೇಶಪಾಂಡೆ ಕುಟುಂಬದ ವಾಹನ ಉದ್ಯಮದ ಪಯಣ ಆರಂಭವಾಗಿದ್ದು ಜಿ.ಸಿ. ದೇಶಪಾಂಡೆ ಅವರಿಂದ. ಕಾರು ಎನ್ನುವುದೇ ಅಪರೂಪವಾಗಿದ್ದ ಕಾಲದಲ್ಲಿ ಅವರು ಈ ಭಾಗಕ್ಕೆ ಕ್ರೈಸ್ಲರ್ ಮತ್ತು ಜನರಲ್ ಮೋಟಾರ್ಸ್ (ಜಿಎಂ) ಕಾರುಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು.

ನಂತರದ ಪೀಳಿಗೆಯಲ್ಲಿ ರಾಜಾಭಾವು ದೇಶಪಾಂಡೆ ಹಾಗೂ ಅವರ ಸಹೋದರರು ಲ್ಯಾಂಬ್ರೆಟ್ಟಾ ಸ್ಕೂಟರ್‌ಗಳು, ಸುವೇಗಾ ಮೊಪೆಡ್‌ಗಳು ಮತ್ತು ಸ್ಟ್ಯಾಂಡರ್ಡ್ ಕಾರುಗಳ ಮೂಲಕ ಉದ್ಯಮವನ್ನು ವಿಸ್ತರಿಸಿದರು.

1990ರಲ್ಲಿ ರೋಹಿತ್ ದೇಶಪಾಂಡೆ ಅವರು ಕಿನೆಟಿಕ್ ಹೋಂಡಾ ದ್ವಿಚಕ್ರ ವಾಹನಗಳ ಡೀಲರ್‌ಶಿಪ್ ವಹಿಸಿಕೊಂಡರು. 2002ರಲ್ಲಿ ಮಂಗೇಶ್ ಹೋಂಡಾ, ದೇಶದಲ್ಲಿ ಮೊದಲ ಹಂತದಲ್ಲಿ ಹೋಂಡಾ ದ್ವಿಚಕ್ರ ವಾಹನಗಳ ಡೀಲರ್‌ಶಿಪ್ ಪಡೆದ ಸಂಸ್ಥೆಗಳಲ್ಲಿ ಒಂದಾಯಿತು. ಈ ವರ್ಷ ಬೆಳಗಾವಿಯಲ್ಲಿ ಹೋಂಡಾ ಜತೆಗಿನ ಸಂಸ್ಥೆಯ ಪಯಣಕ್ಕೆ 25 ವರ್ಷ ಪೂರ್ಣಗೊಳ್ಳುತ್ತಿದೆ.

2015ರಲ್ಲಿ ಹೋಂಡಾ ಕಾರ್ಸ್ ಡೀಲರ್‌ಶಿಪ್ ಆರಂಭವಾಯಿತು. ಇದೀಗ 2026ರಲ್ಲಿ ಮಾರುತಿ ಸುಜುಕಿ ಅರೆನಾ ಡೀಲರ್‌ಶಿಪ್ ಸೇರ್ಪಡೆಯೊಂದಿಗೆ ಕಪಿಲ್ ದೇಶಪಾಂಡೆ ಅವರು ಕುಟುಂಬದ ನಾಲ್ಕನೇ ತಲೆಮಾರಿನ ಪ್ರತಿನಿಧಿಯಾಗಿ ಉದ್ಯಮಕ್ಕೆ ಪ್ರವೇಶಿಸಿದ್ದಾರೆ.

ಕಳೆದ 35 ವರ್ಷಗಳಲ್ಲಿ ಮಂಗೇಶ್ ಮೋಟಾರ್ಸ್ ಸಮೂಹದ ಮೂಲಕ 2,50,000ಕ್ಕೂ ಅಧಿಕ ವಾಹನಗಳು ಬೆಳಗಾವಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಿಳಿದಿವೆ. ಮಾರುತಿ ಸುಜುಕಿ ದೇಶದ ಅತಿದೊಡ್ಡ ಕಾರು ತಯಾರಿಕಾ ಸಂಸ್ಥೆಯಾಗಿದ್ದು, ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸುಮಾರು ಶೇ.42ರಷ್ಟು ಪಾಲು ಹೊಂದಿದೆ ಎಂದು ಸಂಸ್ಥೆ ತಿಳಿಸಿದೆ.

ನೂತನ ಅರೆನಾ ಶೋರೂಂನಲ್ಲಿ ಮಾರುತಿ ಸುಜುಕಿಯ ಅರೆನಾ ಶ್ರೇಣಿಯ ಕಾರುಗಳು ಗ್ರಾಹಕರಿಗೆ ಲಭ್ಯವಾಗಲಿವೆ. ಬೆಳಗಾವಿಯಲ್ಲಿ ಮಾರುತಿ ಸುಜುಕಿಯ ಮಾರುಕಟ್ಟೆ ಪಾಲನ್ನು ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿಸುವ ಗುರಿಯನ್ನು ಮಂಗೇಶ್ ಮೋಟಾರ್ಸ್ ಹೊಂದಿದೆ.

ಮಂಗೇಶ್ ಮೋಟಾರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ರೋಹಿತ್ ದೇಶಪಾಂಡೆ ಅವರು ತಮ್ಮ ಉದ್ಯಮದ ಪಯಣವನ್ನು ಸ್ಮರಿಸುತ್ತಾ, "42 ವರ್ಷಗಳ ಹಿಂದೆ ಕಾಲೇಜು ಶಿಕ್ಷಣ ಮುಗಿಸಿ ಬಂದಿದ್ದ ನನಗೆ ತಂದೆಯವರು ನಮ್ಮ ಪೆಟ್ರೋಲ್ ಬಂಕ್‌ನ ಜವಾಬ್ದಾರಿ ವಹಿಸಿದ್ದರು. ಆಗ ನಮ್ಮ ಬಂಕ್‌ಗೆ ಇಂಧನ ತುಂಬಿಸಿಕೊಳ್ಳಲು ಬರುತ್ತಿದ್ದ ಪ್ರತಿ ಮಾರುತಿ 800 ಕಾರಿಗೂ ವಿಶೇಷ ಆತಿಥ್ಯ ನೀಡುವಂತೆ ಸಿಬ್ಬಂದಿಗೆ ಹೇಳುತ್ತಿದ್ದೆ. ಅದೇ ಕಾರನ್ನು ಹೊಸ ರೂಪದಲ್ಲಿ ಒಂದು ದಿನ ನಾವೇ ಮಾರಾಟ ಮಾಡುತ್ತೇವೆ ಎಂದು ಕನಸಿನಲ್ಲಿಯೂ ಅಂದುಕೊಂಡಿರಲಿಲ್ಲ.

ನಾಲ್ಕು ದಶಕಗಳಿಂದ ಬೆಳಗಾವಿಯ ಜನರು ನಮ್ಮ ಕುಟುಂಬದ ಮೇಲೆ ಇಟ್ಟಿರುವ ವಿಶ್ವಾಸವೇ ನಮ್ಮ ಶಕ್ತಿ. ಈ ಹೊಸ ಶೋರೂಂ ಮೂಲಕ ನಗರದ ಗ್ರಾಹಕರಿಗೆ ಇನ್ನಷ್ಟು ಉತ್ತಮ ಸೇವೆ ನೀಡುವುದು ನಮ್ಮ ಉದ್ದೇಶ" ಎಂದು ತಿಳಿಸಿದರು. ನಿರ್ದೇಶಕ ಕಪಿಲ್ ದೇಶಪಾಂಡೆ, "ನಮ್ಮ ಕುಟುಂಬಕ್ಕೆ ವಾಹನಗಳು ಎಂದರೆ ಕೇವಲ ಯಂತ್ರಗಳಲ್ಲ; ಅವು ಜನರ ಬದುಕಿನ ಭಾಗ. ಭಾರತೀಯ ಕುಟುಂಬಗಳು ಪ್ರೀತಿಸುವ, ನಂಬುವ ಬ್ರ್ಯಾಂಡ್‌ನೊಂದಿಗೆ ನಾಲ್ಕನೇ ತಲೆಮಾರಿನಲ್ಲಿ ಈ ಪರಂಪರೆಯನ್ನು ಮುಂದುವರಿಸುತ್ತಿರುವುದು ಹೆಮ್ಮೆಯ ಸಂಗತಿ" ಎಂದು ಹೇಳಿದರು.

ಬೆಳಗಾವಿ ಮೂಲದ ಮಂಗೇಶ್ ಮೋಟಾರ್ಸ್ ಸಮೂಹವು ವ್ಯವಸ್ಥಾಪಕ ನಿರ್ದೇಶಕ ರೋಹಿತ್ ದೇಶಪಾಂಡೆ ಅವರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ.

ವಾಹನ ಉದ್ಯಮದ ಆರಂಭಿಕ ದಿನಗಳಿಂದಲೇ ದೇಶಪಾಂಡೆ ಕುಟುಂಬ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದೆ. ಸಂಸ್ಥೆಯು 2002ರಿಂದ ಮಂಗೇಶ್ ಹೋಂಡಾ (ಹೋಂಡಾ ದ್ವಿಚಕ್ರ ವಾಹನಗಳು), 2015ರಿಂದ ಹೋಂಡಾ ಕಾರ್ಸ್ ಡೀಲರ್‌ಶಿಪ್ ಹಾಗೂ ಇದೀಗ 2026ರಲ್ಲಿ ಮಾರುತಿ ಸುಜುಕಿ ಅರೆನಾ ಶೋರೂಂ ಮೂಲಕ ತನ್ನ ಸೇವೆಯನ್ನು ವಿಸ್ತರಿಸಿದೆ. ಕಳೆದ 35 ವರ್ಷಗಳಲ್ಲಿ 2.50 ಲಕ್ಷಕ್ಕೂ ಅಧಿಕ ವಾಹನಗಳ ಮಾರಾಟದೊಂದಿಗೆ ಉತ್ತರ ಕರ್ನಾಟಕದ ವಿಶ್ವಾಸಾರ್ಹ ವಾಹನ ಉದ್ಯಮ ಸಂಸ್ಥೆಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ.

BELAGINA SURYODHYA KANNADA DAILY MORNING EDITOR, PRINTER, PUBLISHER AND OWNED BY GURURAJ IRAPPA KADAM PLOT NO.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016 DIST-BELAGAVI,STATE KARNATAKA PRINTED AT M/S LAXMI PRINTERS, NO. 627,AUTO NAGAR,BELAGAVI,DIST- BELAGAVI KARNATAKA, RNI NO. KARKAN/2019/77640, VOLUME : 08, ISSUE : 229, POSTAL REG NO. PMG/KA/NK/BM/135/25-27 / POST AT VANTAMURY COLONY POST OFFICE